# ಅಪರಂಜಿ

ತಿಳಿನಗೆಯ ಕಾರಂಜಿ

ಏಪ್ರಿಲ್ 2025




ಬಿಡಿ ಪ್ರತಿ: ರೂ. 10/–

# BSS Construction services

*Building Excellence, Delivered On Time !*

ಪ್ರತಿಯೊಬ್ಬ ಗಂಡಸಿಗೂ ಮನೆ ಮತ್ತು ಹೆಂಡತಿ
ಇರಲೇ ಬೇಕು ... ಸ್ವಂತದ್ದಾದಷ್ಟೂ ಒಳ್ಳೇದು! –© ಬೀchi

---

At BSS, we specialize in delivering top-notch construction services with a focus on quality, reliability, and timely delivery. Whether you're building your dream home or commercial project, we ensure exceptional craftsmanship and seamless execution from start to finish.

## Why Choose Us?

- On-time project completion
- Tailored solutions for every need
- Premium materials & expert craftsmanship
- Affordable pricing with transparent quotes

Contact us today for a consultation and see why we're the trusted choice for all your construction services.


---

**Ph : 080-29731414 Mobile : 9035007003**
**Email: bss1constructions@gmail.com**

"ಫ್ಲಷ್ ಬ್ಲಾಕ್ ಆಗಿ ವಿಮಾನ ಹಿಂತಿರುಗಿತು"



" ಅದರಲ್ಲೇನು ಹೊಸದು?"




" ಯಾರ್ರೀ ಆ ಛಾನೆಲ್ ಹಾಕಿದ್ದೂ ?"

©Ashok Hemmige

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457







MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 42
ಸಂಚಿಕೆ – 07
ಏಪ್ರಿಲ್ – 2025

## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ಶರಲೇಖನ ಪುನರಾಗಮನ | ವತ್ಸನ | 3 |
| ಹುಟ್ಟಿದೂರು ಸ್ವರ್ಗಕ್ಕಿಂತ...... | ಬಿ.ಕೆ.ಮೀನಾಕ್ಷಿ, ಮೈಸೂರು | 8 |
| ಮಿತ್ರರೊಂದಿಗೆ ವಾಕ್–athon ! | ರಾಂಕಿ ಬೆಳ್ಳೂರ್ | 10 |
| ಬೇಂದ್ರೆ ಬದುಕಿನ ಕೆಲವು ಸ್ವಾರಸ್ಯಗಳು | | 12 |
| ಮುಗಿಸಿಬಿಡೋದು | ಬೇಲೂರು ರಾಮಮೂರ್ತಿ | 14 |
| ನಿಮಗೆ ಮೊಮ್ಮಗಳಿದ್ದಾಳೆಯೇ ? | ಡಾ. ಸಿ.ಕೆ. ರೇಣುಕಾರ್ಯ | 18 |
| ಕೇಳಿಸದಿರುವ ಲಕ್ಕಿಗಳು..... | ಎಚ್.ಗೋಪಾಲಕೃಷ್ಣ | 22 |
| ತುಂತುರು | ದಂನಆ | 26 |
| ಗುಂಡಣ್ಣನ ಪಥ್ಯ | ವಿಲಾಸ ನಾ ಹುದ್ದಾರ | 27 |
| ಸಣ್ಣಮ್ಮನ ಸೊಸೆ | ಪುಷ್ಪಲತಾ | 30 |
| ಕೊರವಂಜಿಯಿಂದ ಪಥ್ಯದ ಪರಿಣಾಮ | | 33 |
| ಕಸವೇ ರಸ | ನಾ. ಕಸ್ತೂರಿ | 38 |
| ಗುಡಿಸಿ ಗುಂಡಾಂತರವಾದ....... | ಕಿರಣ್ ಎಂ | 40 |


ವ್ಯಂಗ್ಯ ಚಿತ್ರಗಳು : ಹೊರಪುಟ : ಜೆ. ಬಾಲಕೃಷ್ಣ
ಒಳಪುಟಗಳು : ರಾಂಕಿ ಬೆಳ್ಳೂರ್, ಅಶೋಕ್ ಹೆಮ್ಮಿಗೆ

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

***ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ***



## ಅಪರಂಜಿ ಕಿಡಿ

● ಪ್ರಕಾಶ್

ಉನ್ನತ ವಿದ್ಯಾಭ್ಯಾಸದ ಸಂಸ್ಥೆಗಳ ಮೂಲಕ ಅಪಾರ ಸೇವೆ ಸಲ್ಲಿಸಿದ್ದ ಡಾ. ದೊರೆಸ್ವಾಮಿಯವರಿಗೆ ಅಪರಂಜಿಯ ವಿದಾಯ.

* * *

" ನಾನೇ ಅವಧಿ ಪೂರ್ಣಗೊಳಿಸುವೆ "

ಮಾನ್ಯ ಸಿ.ಎಂ.

ಆಶ್ವಾಸನೆಯೋ, ಬೆದರಿಕೆಯೋ !!

* * *

"ಎ.ಐ. ಮತ್ತು ಭಾಷಾಂತರದಲ್ಲಿ ಸ್ಥಿತ್ಯಂತರ"

ಪತ್ರಿಕೆ

ಅಂಗಂದ್ರೇನ್ ಸಾರ್ ?!

* * *

ಪುಣ್ಯಕ್ಷೇತ್ರಗಳ ಬಳಿ ಸಾಬೂನು, ಶಾಂಪೂ ಮಾರಾಟ ನಿಷೇಧಿಸಿ

ಪತ್ರಿಕೆ

ಆಹಾ, ಎಂತಹ ಸ್ವಚ್ಛವಾದ ಹೇಳಿಕೆ !!

* * *

ರಸ್ತೆ ದುರಸ್ತಿಯತ್ತ, ಇಲ್ಲ ಚಿತ್ತ !!

ಪತ್ರಿಕೆ

ಆಹಾ !! ಶೀರ್ಷಿಕೆ ಅಂದರೆ ಹೀಗಿರಬೇಕು. !!

* * *

ಇನ್ನು ಮುಂದೆ ಕನ್ನಡ ಮೂವೀಗಳೆಲ್ಲ "ನನ್ನ ಚಿನ್ನ" ಎಂಬ ಸಂಬೋಧನೆಯನ್ನು ಕೈ ಬಿಡುತ್ತಾರೇನೋ ?!

* * *

"ನಮ್ಮ ಮೇಲೆ ಹಿಂದಿಯನ್ನು ಹೇರಬೇಡಿ"

ಆಗ್ರಹಪೂರ್ವಕ ಹೇಳಿಕೆ

ನಾವು ಈ ಸಮಸ್ಯೆಯನ್ನು ಎಂದು ಹಿಂದಿಕ್ಕುವೆವೋ ?!

* * *

ಶರಲೇಖನ ಪುನರಾಗಮನ

# ತೋರಣಮಾವು ಹೋಮ್ ಸ್ಟೇ ಪ್ರಸಂಗ

ವತ್ಸನ

"ಬಾಳೇಹೊನ್ನೂರಿನ ಬ್ರಹ್ಮರಾಕ್ಷಸ ಪ್ರಸಂಗ ನೆನಪಿದೆಯೇ ?' ಅಂತ ಕೇಳಿದ ಶರಲೇಖ. ಅಂದು ಸಂಜೆ ನಾವಿಬ್ಬರೂ ಹರಟುತ್ತಾ ಕುಳಿತಿದ್ದೆವು. ಆಗತಾನೇ ಮಳೆ ಬಂದು ನಿಂತಿತ್ತು. "ನೆನಪಿಲ್ಲದೇ ಏನು? ಪಾಪ, ಆ ಬಡಪಾಯಿ ಮಾವನ್ನ ಅವನ ಬೀಗಿತ್ತಿಯ ಕಾಟದಿಂದ ಬಿಡುಗಡೆ ಮಾಡಿದ್ದನ್ನ ಮರೆಯುಕ್ಕಾಗುತ್ಯೇ ?" ಅಂದೆ.

"ಹೌದು, ಅದೇ ಪ್ರಕರಣ. ಆ ಹೇಮ ನಿನ್ನೆ ಫೋನ್ ಮಾಡಿದ್ದಳು. ಇಂದು ಸಂಜೆ ಬರ್ತಾಳಂತೆ. ಏನೋ ತುರ್ತಿನ ಸಮಸ್ಯೆ ಅಂತ ಹೇಳಿದಳು"

"ಬಾಳೇಹೊನ್ನೂರಿಗೆ ಹೋಗೋ ಅವಕಾಶ ಸಿಕ್ಕಿದ್ರೆ ಚೆನ್ನಾಗಿರುತ್ತೆ. ಹೇಳಿ ಕೇಳಿ ಮಲೆನಾಡಿನ ಸೆರಗು. ಈ ಬೆಂಗಳೂರಿನ ಟ್ರಾಫಿಕ್‌ನೋಡನೆ ಹೆಣಗಿ ಸಾಕಾಗಿದೆ....." ಎನ್ನುತ್ತಿದ್ದಂತೆ ಹೊರಬಾಗಿಲ ಕರೆಘಂಟೆ ಸದ್ದಾಯಿತು. ಬಾಗಿಲು ತೆರೆದೆ. ಹೇಮಾ ಒಳಕ್ಕೆ ಬಂದಳು. ನೋಡಿ ಸುಮಾರು ವರ್ಷಗಳಾಗಿದ್ದರೂ, ಅವಳು ಸ್ವಲ್ಪವೂ ಬದಲಾಗಿರಲಿಲ್ಲ. ಅದೇ, ಲವಲವಿಕೆ, ಅದೇ ನಗುಮುಖ.

"ನಮಸ್ಕಾರ ಅಂಕಲ್, ಕೇಳಿದ ತಕ್ಷಣ ನನ್ನನ್ನು ನೋಡಲು ಒಪ್ಪಿದ್ದಕ್ಕೆ ನಾನು ನಿಮ್ಮಿಬ್ಬರಿಗೂ ತುಂಬಾ ಆಭಾರಿ. ಕಳೆದ ಬಾರಿ ನೀವು ಬಂದು ಅಗಾಧವಾದ ಸಮಸ್ಯೆಯನ್ನ ಬಗೆಹರಿಸಿದ್ದನ್ನು ಮರೆಯುವಂತೆಯೇ ಇಲ್ಲ. ನಮ್ಮಮ್ಮ ಅಂತೂ ನಿಮ್ಮನ್ನ ಯಾವಾಗಲೂ ನೆನಪಿಸಿಕೊಳ್ತಾನೇ ಇರ್ತಾರೆ. ಈವಾಗ ಬಂದಿರೋದೂ ಸಹಾ ಅವರ ಸಲುವಾಗಿಯೇ" ಎಂದು ಹೇಮಾ ಪ್ರಾರಂಭಿಸಿದಳು.

"ಯಾಕೆ ? ಏನಾಯ್ತು ವಸುಂಧರಮ್ಮನೋರಿಗೆ ? ಆರೋಗ್ಯ ಸರಿಯಾಗಿದೆ ತಾನೇ ?' ಅಂತ ಶರಲೇಖ ಆಕೆಯ ಯೋಗಕ್ಷೇಮವನ್ನು ವಿಚಾರಿಸಿದ.

"ಆರೋಗ್ಯ ಚೆನ್ನಾಗಿದೆ ಅಂಕಲ್, ನಿಮಗೆ ಗೊತ್ತಿರೋ ಹಾಗೆ ಅವರು ನಮ್ಮ ಜೊತೇನೇ ಇದ್ದರು. ನೀವು ನಮ್ಮಲ್ಲಿ ಬಂದು ಸಮಸ್ಯೆ ಪರಿಹಾರ ಮಾಡಿದ ಮೇಲೆ ಅವರು ತೋರಣಮಾವಿನಲ್ಲಿದ್ದ ತಮ್ಮ ಪಿತ್ರಾರ್ಜಿತ ಮನೆಯಲ್ಲೇ ವಾಸಮಾಡುಕ್ಕೆ ಪ್ರಾರಂಭಿಸಿದರು. ಈಗ ಕಳೆದ ವರ್ಷದಿಂದ ಆ ಮನೇನ ಒಂದು ಹೋಮ್ ಸ್ಟೇ ಆಗಿ ಬದಲಾಯಿಸಿದ್ದಾರೆ." ಟೈಮ್ ಪಾಸೂ ಆಗತ್ತೆ, ಜನಗಳ ಸಂಪರ್ಕಾನೂ ಇರತ್ತೆ" ಅಂತ ಹೇಳ್ತಾ ಇರ್ತಾರೆ. ಅಂತೂ ಒಟ್ಟಿನಲ್ಲಿ ಎಲ್ಲಾ ಚೆನ್ನಾಗಿ ನಡೀತಿತ್ತು. ಅವರೂ ತುಂಬಾ ಚಟುವಟಿಕೆಯಿಂದ್ಲೇ ಓಡಾಡ್ಕೊಂಡಿದ್ರು. ಆದ್ರೆ ಹಲವು ದಿನಗಳ ಹಿಂದೆ ಒಬ್ಬ ಯುವ ದಂಪತಿಗಳು ಮೂರು ದಿನಗಳ ಕಾಲ ಕಳೆಯುಕ್ಕೆ ಹೋಮ್ ಸ್ಟೇ ಬುಕ್ ಮಾಡಿದ್ದರು. ತುಂಬಾ ಸೌಜನ್ಯ ಸ್ವಭಾವದ ಆನಂದ್ ಮತ್ತು ಸುನಂದಾ ದಂಪತಿಗಳನ್ನು ನೋಡಿ ಅಮ್ಮ ತುಂಬಾ ಮೆಚ್ಚಿಕೊಂಡಳು. ಒಂದು ರಾತ್ರಿ ಕಳೆದ ನಂತರ, ಮಾರನೆಯ ಬೆಳಗ್ಗೆ ಬೆಳಗಿನ ಉಪಹಾರಕ್ಕೆ ಕುಳಿತಾಗ, ಸುನಂದಾ ನಮ್ಮಮ್ಮನ್ನ ಕುರಿತು, "ಆಂಟೀ, ನಿಮ್ಮ ಹತ್ರ ಒಂದು ವಿಷಯ ಹೇಳ್ಬೇಕು, ಹೇಳಬಹುದೋ ಇಲ್ವೋ ತೋಚ್ತಾ ಇಲ್ಲ, ಅಂತ ಸಂಕೋಚದಿಂದ್ಲೇ ಹೇಳಿದ್ಲು. ನಮ್ಮಮ್ಮ, "ಏನು ಹೇಳಮ್ಮಾ, ಸಂಕೋಚ ಯಾಕೆ, ನೀನು ನನ್ನ ಮಗಳ ತರಹ" ಅಂದ ಮೇಲೆ ಸುನಂದಾ ಶುರುಮಾಡಿದಳು.

"ಆಂಟೀ, ನಿನ್ನೆ ರಾತ್ರೆ ನನಗೊಂದು ಕನಸು ಬಿತ್ತು. ಸಾಮಾನ್ಯ ಕನಸಲ್ಲ. ತುಂಬಾ ಸ್ಪಷ್ಟವಾದ ಕನಸು. ಲೂಸಿಡ್ ಡ್ರೀಮ್ ಅಂತಾರಲ್ಲ, ಹಾಗೆ. ಕನಸಲ್ಲಿ ಯಾವುದೋ ಒಂದು ದೇವತೆ , "ನಾನು ಈ ಮನೆಯ ಮನೆದೇವರು, ಮಾವಿನ ಮರದ ಬುಡದಲ್ಲಿ ಪ್ರತ್ಯಕ್ಷ ಆಗ್ತೇನೆ. ಅಲ್ಲಿ ನನಗೊಂದು ಗುಡಿ ಕಟ್ಟಿಸ್ಬೇಕು. ನೀನು ದೈವ ಭಕ್ತೆ. ಅದಕ್ಕೆ ನಿನಗೆ ಕಾಣಿಸಿಕೊಂಡೆ" ಅಂತ ಹೇಳಿ ಅಂತರ್ಧಾನವಾಯಿತು. ಬೆಳಗ್ಗೆ ಎದ್ದಮೇಲೆ ಆ ದೇವಿಯ ಪ್ರಶಾಂತ ಮುಖವೇ ಎಲ್ಲೆಲ್ಲೂ ಕಾಣುತ್ತಿತ್ತು. ನನಗಂತೂ ಏನು ಮಾಡಲೂ ತೋಚುತ್ತಿಲ್ಲ. ಆನಂದ್ ಇದನ್ನ ನಿಮಗೆ ತಿಳಿಸಲು ಹೇಳಿದರು. ನೀವು ಹಿರಿಯರು. ಏನು ವಾಡಬೇಕು ನೀವೇ ನಿರ್ಧರಿಸಿ" ಎಂದಳು ಆ ಹೆಣ್ಣುಮಗಳು. ತಿಂಡಿ ಎಲ್ಲಾ ಮುಗಿದ ಮೇಲೆ ನಮ್ಮಮ್ಮ ನನಗೆ ಫೋನ್ ಮಾಡಿದರು. ಆ ಕ್ಷಣವೇ ನಾನು ನಿಮ್ಮನ್ನು ಬಂದು ಕಾಣಲು ನಿರ್ಧರಿಸಿಬಿಟ್ಟೆ. ಏಕೆಂದರೆ ಇಂತಹ ಅತೀಂದ್ರಿಯ ವಿಷಯದಲ್ಲಿ ಹಿಂದೆ ನೀವು ನವ್ಮ ನೆರವಿಗೆ ಬಂದದ್ದು ಚೆನ್ನಾಗಿ ನೆನಪಿನಲ್ಲಿತ್ತು. ..."



" ಆಮೇಲೆ ಏನಾಯಿತು?" ಶರಲೇಖನ ಪ್ರಶ್ನೆ.

"ಮಾರನೆಯ ದಿನವೂ ಸುನಂದಾಗೆ ಅದೇ ಕನಸು ಬಿತ್ತಂತೆ. ಮೂರನೆಯ ದಿವಸ ಅತಿಥಿಗಳು ಹಿಂತಿರುಗಿದರಂತೆ. ಅದು ನಿನ್ನೆ. ಇವತ್ತು ನಾನು ಇಲ್ಲಿದ್ದೇನೆ."

" ಈ ಬಗ್ಗೆ ನಿಮ್ಮ ತಾಯಿ ಏನಂತಾರೆ ?"

" ಅವರ ತೋಟ ಒಂದು ಮಾವಿನ ತೋಪು. ಸುಮಾರು ಐವತ್ತು ಗಿಡಗಳಿವೆ, ಒಟ್ಟು ನಾಲ್ಕು ಎಕರೆ ಇದೆ. ಯಾವ ಮರದ ಬುಡ ಅಂತ ಹುಡುಕೋದು? ಅವರಿಗೇನೂ ತೋಚ್ತಾ ಇಲ್ಲ. ಅವರಿಗೆ ನಿಮ್ಮನ್ನ ಕರೆದುಕೊಂಡು ಬರ್ತೀನೆ ಅಂತ ಧೈರ್ಯ ಹೇಳಿ ನಾನೇ ಇಲ್ಲಿ ಬಂದೆ."

" ಒಳ್ಳೆಯ ಕೆಲಸ ಮಾಡಿದೆ. ಏನೂ ಯೋಚನೆ ಬೇಡ ಅಂತ ನಿಮ್ಮ ತಾಯಿಗೆ ಹೇಳು. ನಾವು ನಾಳೆಯೇ ಬರುಕ್ಕೆ ಸಿದ್ಧ . ತೋರಣಮಾವಿಗೆ ಯಾವ ದಾರಿ?"

" ದಾರಿಯ ಯೋಚನೆ ಬೇಡ. ನಾಳೆ ನೀವಿಬ್ಬರೂ ನನ್ನ ಜೊತೆ ನಮ್ಮ ಕಾರಿನಲ್ಲೇ ಬಂದುಬಿಡಿ. ಬೆಳಗ್ಗೆ ಎಂಟಕ್ಕೆ ಸಿದ್ಧವಾಗಿರಲು ಸಾಧ್ಯವೇ ?"

" ಖಂಡಿತಾ. ನಾಳೆ ನೋಡೋಣ." ಎಂದು ಶರಲೇಖ ಉತ್ತರಿಸಿದ ನಂತರ

ಹೇಮಾ ಹೊರಟಳು.

ಹೇಮಾಳೊಡನೆ ಕಾರಿನಲ್ಲಿ ಹೊರಟು ನಾವು ಚನ್ನರಾಯಪಟ್ಟಣ, ಹಾಸನ, ಚಿಕ್ಕಮಗಳೂರು ದಾಟಿ ತೋರಣಮಾವು ಹೋಮ್ ಸ್ಟೇ ಸೇರಿದಾಗ ಘಂಟೆ ಒಂದಾಗಿತ್ತು. ವಸುಂಧರಾ ಪೋರ್ಟಿಕೋದಲ್ಲೇ ನಮ್ಮನ್ನು ಇದಿರುಗೊಂಡು ಒಳಕ್ಕೆ ಕರೆದೊಯ್ದರು. ಊಟ ಎಲ್ಲ ಮುಗಿದ ಮೇಲೆ ವಸುಂಧರಾ ತಮ್ಮ ಮಾತು ಪ್ರಾರಂಭಿಸಿದರು.

"ನನ್ನ ಸಹಾಯಕ್ಕೆ ನೀವುಗಳು ಇಷ್ಟು ತ್ವರೆಯಿಂದ ಬಂದದ್ದಕ್ಕೆ ನಿಮ್ಮನ್ನು ಎಷ್ಟು ವಂದಿಸಿದರೂ ಸಾಲದು. ನನಗಂತೂ ಎರಡು ದಿನಗಳಿಂದ ನಿದ್ದೆಯೇ ಇಲ್ಲ. ಮನೆಯೊಡತಿಯಾದ ನನಗೆ ದೇವಿ ಕಾಣಿಸಿಕೊಳ್ಳುವ ಬದಲು ಬಂದ ಅತಿಥಿಯೊಬ್ಬಳಿಗೆ ಕಾಣಿಸಿಕೊಂಡ ಸಂಗತಿ ಕೂಡಾ ನನ್ನನ್ನು ಕಾಡುತ್ತಿದೆ. ಈಗೇನು ಮಾಡಲಿ?" ಅಂತ ಆಕೆ ಹಲುಬಿದರು.

ಶರಲೇಖ ಒಂದು ಕ್ಷಣ ಸುಮ್ಮನಿದ್ದು ಆಮೇಲೆ ನಿಧಾನವಾಗಿ ಮಾಸನಾಡಲು ಶುರುಮಾಡಿದ.

"ತಾಯಿ, ನಿಮ್ಮ ಕಳವಳ ನನಗೆ ಸ್ಪಷ್ಟವಾಗಿ ಅರ್ಥವಾಗುತ್ತಿದೆ. ನೀವೆಲ್ಲಾ ಸಾತ್ವಿಕರು. ನಿಮ್ಮ ಹಿರೀಕರು ಬದುಕಿ ಬಾಳಿದ ಸಜ್ಜನರು. ಯಾವ ದೇವಿಯೂ ನಿಮಗೆ ಬಾಧೆ ತರದು. ಯಾವುದೇ ಮರದ ಬುಡದಲ್ಲಿ ದೇವಿಯ ಪ್ರತಿಮೆ ಅಡಗಿದ್ದರೂ ಅದನ್ನು ಹುಡುಕಿ ತೆಗೆಯುವುದು ನನ್ನ ಜವಾಬ್ದಾರಿ. ಈಗ ಸದ್ಯಕ್ಕೆ ನನಗೆ ನಿಮ್ಮಲ್ಲಿರುವ ಎಲ್ಲ ಕೆಲಸಗಾರರ ಪರಿಚಯ ಆಗಬೇಕು. ಒಟ್ಟು ಎಷ್ಟು ಜನ ಇಲ್ಲಿ ಕೆಲಸಮಾಡುತ್ತಿದ್ದಾರೆ.?"

"ಅಡಿಗೆ ಮನೆಯಲ್ಲಿ ಇಬ್ಬರು, ಮೇಲ್ವಿಚಾರಣೆಗೆ ಇಬ್ಬರು, ನಿರ್ವಹಣೆ ಮೂರು ಜನ ಹುಡುಗಿಯರು, ತೋಟದ ಕೆಲಸಕ್ಕೆ ಮೂರು ಆಳುಗಳು ಮತ್ತು ಒಬ್ಬ ಮ್ಯಾನೇಜರ್ ಒಟ್ಟು ಹನ್ನೊಂದು ಜನ."

"ಈ ಕನಸಿನ ಸಂಗತಿ ಯಾರಿಗೂ ತಿಳಿಸಿಲ್ಲ ಎಂದು ಭಾವಿಸಿರುವೆ?'

"ಖಂಡಿತಾ ಇಲ್ಲ. ನೀವು ಬಂದು ಮುಂದಿನ ಹಾದಿ ತಿಳಿಸುವವರೆಗೂ ಯಾರ ಹತ್ತಿರವೂ ಬಾಯಿ ಬಿಡಬೇಡ ಅಂತ ಹೇಮಾ ಮೊದಲ ದಿನವೇ ಹೇಳಿದ್ದಳು."

"ಹಾಗೆ ಮಾಡಿದ್ದ ಬಹಳ ಒಳ್ಳೆಯದಾಯಿತು. ಮ್ಯಾನೇಜರ್ ಯಾರು ? ನಿಮ್ಮ ಪರಿಚಯಸ್ಥನೇ ?"

"ಹೌದು. ನನ್ನ ತಂಗಿಯ ಮೊಮ್ಮಗ. ರವೀಶ್. ಪರಿಸರ ಪ್ರೇಮಿ. ಹಾಗಾಗಿ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದರೂ, ಇಲ್ಲೇ ದೊಡ್ಡಜ್ಜಿ ಜೊತೆ ಇದ್ದು ಎಸ್ಟೇಟ್ ಎಲ್ಲ ನೋಡ್ಕೋತೀನಿ ಅಂತ ಹೇಳಿ ನನ್ನ ಜೊತೆ ಇದ್ದಾನೆ. ಇವತ್ತು ಬೆಳಗ್ಗೆ ಕೆಲಸದ ಮೇಲೆ ಚಿಕ್ಕಮಗಳೂರಿಗೆ ಹೋಗಿದ್ದಾನೆ. ಸಂಜೆ ವೇಳೆಗೆ ಬಂದುಬಿಡಬಹುದು. "

"ಒಳ್ಳೇದು. ಹಾಗಾದರೆ ಅವನು ಬಂದಮೇಲೆ ಅವನೊಂದಿಗೆ ನನ್ನನ್ನು ಭೇಟಿ ಮಾಡಿಸಿ. ಅವನೊಂದಿಗೆ ಮಾತನಾಡಿ ಆಮೇಲೆ ಮುಂದಿನ ಕಾರ್ಯ ನೋಡುವ" ಎಂದು ಶರಲೇಖ ಹೇಳಿದ ನಂತರ ನಾವಿಬ್ಬರೂ ವಿರಮಿಸಲು ನಮ್ಮ ಕೊಠಡಿಗೆ ತೆರಳಿದೆವು.

ಸಂಜೆಯ ಹೊತ್ತಿಗೆ ರವೀಶ್ ಹಿಂತಿರುಗಿ ಶರಲೇಖನನ್ನು ಕಂಡಕೂಡಲೇ ಇಬ್ಬರೂ ರವೀಶನ ಆಫೀಸಿಗೆ ಹೋಗಿ ಮಾತುಕತೆ ಶುರುಮಾಡಿದರು. ನಾನು ಹೇಮಾಳ ಜೊತೆ

ಅವರ ಮಾವಿನ ತೋಪಿನ ಸುಂದರ ಪರಿಸರವನ್ನು ನೋಡಲು ಹೊರಟೆ.

ಅಂದು ಸಂಜೆ ಶರಲೇಖ ನನ್ನೊಡನೆ ಮಾತನಾಡುತ್ತಾ, "ರವೀಶನೊಂದಿಗೆ ಎಲ್ಲಾ ವಿವರವಾಗಿ ಮಾತನಾಡಿದ್ದೇನೆ. ನಾಳೆ ಸಂಜೆ ಸ್ವಲ್ಪ ಸಾಹಸಕ್ಕೆ ಸಿದ್ಧನಾಗಿರಬೇಕಾಗುತ್ತೆ." ಅಂತ ಹೇಳಿದ.

ಮಾರನೆಯ ಸಂಜೆ ಊಟವಾದನಂತರ ರವೀಶನೊಡಗೂಡಿ ಶರಲೇಖ ಮತ್ತು ನಾನು ಎಸ್ಟೇಟಿನ ಈಶಾನ್ಯ ಮೂಲೆಗೆ ಹೋದೆವು. ಅಲ್ಲಿ ಒಂದು ಅಪರಿಚಿತ ವ್ಯಕ್ತಿ ನಿಂತಿತ್ತು. ರವೀಶ ಅವರನ್ನು, "ಇವರೇ ಇನ್ಸ್‌ಪೆಕ್ಟರ್ ರೇವಣಸಿದ್ದಪ್ಪ" ಎಂದು ಪರಿಚಯಿಸಿದ. ನಾವು ನಾಲ್ವರೂ ಬೇಟೆಗೆ ಕಾಯುವಂತೆ ಒಂದು ಮಾವಿನ ಮರದ ಹಿಂದಿನ ಪೊದೆಯಲ್ಲಿ ಅಡಗಿ ಕುಳಿತೆವು.

ರಾತ್ರಿ ಸುಮಾರು ಒಂದು ಘಂಟೆ ಸಮಯಕ್ಕೆ ತೋಟದ ಬೇಲಿಯಲ್ಲಿದ್ದ ಸಂದಿನಿಂದ ಒಬ್ಬ ವ್ಯಕ್ತಿ ತೋಟದೊಳಗೆ ನುಗ್ಗಿದ. ಅವನ ಹಿಂದೆ ಇನ್ನೊಬ್ಬನೂ ನುಸುಳಿ ಬಂದ. ಮೊದಲು ಬಂದವನು ತನ್ನ ಎರಡು ಕೈಗಳಲ್ಲೂ ಒಂದು ಭಾರವಾದ ಗಂಟನ್ನು ಬಲವಾಗಿ ಹಿಡಿದಿದ್ದ. ಇಬ್ಬರೂ ನಮ್ಮ ಮುಂದಿದ್ದ ಮಾವಿನ ಮರದ ಬುಡದಲ್ಲಿ ಕುಳಿತರು. ಸುತ್ತ ಮುತ್ತ ಇದ್ದ ಎಲೆಗಳ ರಾಶಿಯನ್ನು ಅವರು ಸರಿಸಿದಂತೆ ಅಲ್ಲೊಂದು ಹೊಂಡ ಕಾಣಿಸಿತು. ಮೊದಲ ವ್ಯಕ್ತಿ ತನ್ನ ಕೈಯ್ಯಲ್ಲಿದ್ದ ಗಂಟನ್ನು ಬಿಚ್ಚಿ ಯಾವುದೋ ವಸ್ತುವನ್ನು ಹೊರತೆಗೆದ. ಸುತ್ತ ಹರಡಿದ್ದ ಬೆಳದಿಂದಳಲ್ಲಿ ಆ ವಸ್ತು ನಮಗೆಲ್ಲಾ ಸ್ಪಷ್ಟವಾಗಿ ಕಾಣಿಸಿತು. ಕಪ್ಪು ಶಿಲೆಯ ಮಾರಮ್ಮನ ವಿಗ್ರಹವಾಗಿತ್ತು ಅದು.

ಹಠಾತ್ತನೆ ಎಲ್ಲೆಡೆ ಕಣ್ಣು ಕೋರೈಸುವ ಬೆಳಕು. ಇನ್ಸ್‌ಪೆಕ್ಟರ್ ರೇಣಸಿದ್ದಪ್ಪನವರ ಕೈಯ್ಯಲ್ಲಿನ ಟಾರ್ಚ್ ಬೆಳಗುತ್ತಿತ್ತು. ಶರಲೇಖ ಟಣ್ಣನೆ ಹಾರಿ ವಿಗ್ರಹ ಹಿಡಿದ ವ್ಯಕ್ತಿಯನ್ನು ಬಲವಾಗಿ ಹಿಡಿದ. ಇನ್ಸ್‌ಪೆಕ್ಟರ್ ಬಂದು ಅವನಿಗೆ ಕೈಕೊಳ ತೊಡಿಸಿದರು. "ಇವನೇ ಆನಂದ್. ಹಲವು ದಿನಗಳ ಹಿಂದೆ ಸುನಂದಾ ಜೊತೆ ನಮ್ಮ ಅತಿಥಿಯಾಗಿದ್ದವನು" ಎಂದು ರವೀಶ್ ಉದ್ಗರಿಸಿದ.

ಇನ್ಸ್‌ಪೆಕ್ಟರ್ ಅವರನ್ನು ತಮ್ಮ ಜೀಪಿನಲ್ಲಿ ಠಾಣೆಗೆ ಒಯ್ದರು.

ಮಾರನೆಯ ದಿನ ಉಪಹಾರ ಮುಗಿಸಿ ಮನೆಯವರೆಲ್ಲರೂ ಒಟ್ಟಿಗೆ ಸೇರಿದನಂತರ ಶರಲೇಖ ತನ್ನ ವಿವರಣೆ ಪ್ರಾರಂಭಿಸಿದ.

"ಈಗಿನ ದಿನಗಳಲ್ಲಿ ಡಿಜಿಟಲ್ ಅರೆಸ್ಟ್ ಎಂಬ ಕ್ರೈಮ್ ಆಗುತ್ತಿರುವುದನ್ನು ನೀವೆಲ್ಲರೂ ಕೇಳಿರಬಹುದು. ಕಾನೂನಿಗೆ ಹೆದರುವ ಒಬ್ಬ ಸಭ್ಯವ್ಯಕ್ತಿಯನ್ನು ಅವನ ಹೆದರುವ ಸ್ವಭಾವದಿಂದಲೇ ಬಂಧಿಸಿ ಅವನಿಂದ ಅಪಾರ ಹಣ ಕದಿಯುವ ಅಪರಾಧ ಇದು. ಈ ಸುನಂದಾ ಪ್ರಕರಣವೂ ಸಹಾ ಅದನ್ನೇ ಹೋಲುತ್ತದೆ. ದೇವಿ ಕನಸಿನಲ್ಲಿ ಪ್ರತ್ಯಕ್ಷಳಾದಳೆಂಬ ಸುಳ್ಳನ್ನು ನಂಬುವಂತೆ ದೇಳಿ, ಅನಂತರ ಒಂದು ಕೃತ್ರಿಮದಿಂದ ವಿಗ್ರಹ ಮರದ ಕೆಳಗೆ ಸಿಕ್ಕಿದಂತೆ ಮಾಡಿ, ಆಮೇಲೆ ಪ್ರಾಚೀನ ವಿಗ್ರಹವೊಂದು ದೊರೆತಿರುವುದರಿಂದ ಈ ಭೂಮಿ ಸರ್ಕಾರದ ವಶಕ್ಕೆ ಸೇರುವುದೆಂಬ ಭೀತಿಯನ್ನು ಮೂಡಿಸಿ ಹಣ ಸೆಳೆಯುವ ಜಾಲವಿದು. ನಿಮ್ಮ ತೋಟದ ಆಳು ಮುನಿಯಪ್ಪನನ್ನು ಹಣದ ಆಮಿಷ ತೋರಿಸಿ ಅವರ ಅಪರಾಧದ ಕೆಲಸಕ್ಕೆ ಸಹಕರಿಸುವಂತೆ ಆನಂದ್ ಅವನನ್ನು ಷಾಮೀಲು ಮಾಡಿಕೊಂಡಿದ್ದ. ಈ ರೀತಿ ಇರಬಹುದೆಂದು ನನಗೆ ತಿಳಿದಿದ್ದರಿಂದ ನಿನ್ನೆ ರವೀಶನೊಡನೆ ಮಾತನಾಡಿದಾಗ ತೋಟದ ಆಳುಗಳಲ್ಲಿ ಯಾರಾದರೂ ಈ ರೀತಿ ದ್ರೋಹಿಗಳಿರಬಹುದೇ

ಅಂತ ಕೇಳಿದ್ದೆ. ರವೀಶ ಬಹಳ ಚುರುಕು. ಮುನಿಯಪ್ಪ ಸದಾ ಅಸಮಾಧಾನದಿಂದ ಇರುತ್ತಿದ್ದುದನ್ನು ಅವನು ಗಮನಿಸಿದ್ದ. ಅವನನ್ನೇ ನಾವು ಮೊದಲು ಪಾಟೀಸವಾಲು ಮಾಡಿ ಸತ್ಯವನ್ನು ಹೊರಗೆಡಹಿದೆವು. ನಿನ್ನ ರಾತ್ರಿ ತಾನು ಅಗೆದಿದ್ದ ಹೊಂಡದಲ್ಲಿ ವಿಗ್ರಹ ಹುದುಗುವ ಸಂಚಿನ ಬಗ್ಗೆ ಬಾಯಿಬಿಟ್ಟ. ನಾವು ಇನ್ಸ್‌ಪೆಕ್ಟರ್ ಅವರಿಗೆ ಇದನ್ನೆಲ್ಲಾ ತಿಳಿಸಿ ಅವರ ನೆರವು ಕೋರಿದೆವು. ಮಿಕ್ಕದ್ದೆಲ್ಲಾ ನೀವೇ ನೋಡಿದಿರಿ."


ರವೀಶ ಮುಂದುವರಿಸಿ, "ಮುನಿಯಪ್ಪನಿಗೆ ಕುಡಿತದ ಚಟ. ಹಾಗಾಗಿ ಪಾಟೀಸವಾಲಿಗೆ ಅವನನ್ನೇ ಮೊದಲು ಆರಿಸಿಕೊಂಡೆ. ನಮ್ಮ ಅದೃಷ್ಟದಿಂದ ಅವನು ಸಿಕ್ಕಿಬಿದ್ದ" ಎಂದು ವಿವರಿಸಿದ.

ವಸುಂಧರಾ ಮಾತನಾಡುತ್ತಾ, "ಈಗ ನನ್ನ ಮನಸ್ಸು ನಿರಾಳವಾಯಿತು. ನಿಮ್ಮಿಬ್ಬರಿಗೂ ಅನಂತಾನಂತ ವಂದನೆಗಳು. ಹೇಗೂ ಇಷ್ಟು ದೂರ ಬಂದಿದ್ದೀರ, ಒಂದೆರಡು ದಿನ ಇಲ್ಲಿದ್ದು ಹಿಂತಿರುಗಬಹುದಲ್ಲಾ," ಅಂತ ಆದರದ ಆಹ್ವಾನ ನೀಡಿದರು.

ಹೇಮ, "ಹೌದು ಅಂಕಲ್, ಇದ್ದುಬಿಟ್ಟು ಹೋಗಿ. ಹೆಬ್ಬೆ ಜಲಪಾತ, ಭದ್ರಾ ಅರಣ್ಯಧಾಮ, ಮುಳ್ಳಯ್ಯನ ಗಿರಿ ಎಲ್ಲಾ ತೋರಿಸ್ತೇನೆ" ಅಂತ ದನಿಗೂಡಿಸಿದಳು.

"ಇಟ್ ಇಸ್ ಎನ್ ಆಫರ್ ವಿ ಕಾನ್ಟ್ ರೆಫ್ಯೂಸ್" ಎಂದು ಶರಲೇಖ ನಗುತ್ತಾ ಹೇಳಿದ.

■



## ಪ್ರೊ. ಅ.ರಾ.ಮಿತ್ರ

ಕೊರವಂಜಿಯ ಕಾಲದಿಂದ ಮತ್ತು ಅಪರಂಜಿಯ ಇಂದಿನವರೆಗೂ ಹಿತಚಿಂತಕರಾಗಿ ಮತ್ತು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸುತ್ತಿದ್ದ ಹಾಸ್ಯೋತ್ಸವಗಳ ಮಾರ್ಗ –ದರ್ಶಕರಾಗಿದ್ದ ನಮ್ಮೆಲ್ಲರ ಆತ್ಮೀಯರಾದ ಪ್ರೊ. ಅ.ರಾ.ಮಿತ್ರ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅ.ನ.ಕೃಷ್ಣರಾಯರ ಸ್ಮಾರಕ: ವಿದ್ಯಾರಣ್ಯ ಸಮಗ್ರ ಸಾಹಿತ್ಯ ಪ್ರಶಸ್ತಿ ಲಭಿಸಿದೆ. ಅಪರಂಜಿಯ ಓದುಗರು ಬರಹಗಾರರು ಟ್ರಸ್ಟಿಗಳು ಮತ್ತು ಸಂಪಾದಕ ಮಂಡಳಿಯ ಪರವಾಗಿ ಮಿತ್ರ ಅವರಿಗೆ ಅಭಿನಂದನೆಗಳು

# ಹುಟ್ಟಿದೂರು ಸ್ವರ್ಗಕ್ಕಿಂತ ಮಿಗಿಲೆಂದ ಭಗೀರಥರು

ಬಿ.ಕೆ.ಮೀನಾಕ್ಷಿ, ಮೈಸೂರು

ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ ಎನ್ನುವ ಮಾತು ಈ ಲೇಖನಕ್ಕೆ ಬಹು ಪ್ರಸ್ತುತವಾಗಿದೆ. ಕಾರಣ ಮಹಾನ್ ವ್ಯಕ್ತಿಯೊಬ್ಬರು ಹೇಗಾದರೂ ಮಾಡಿ ತಾನು ಹುಟ್ಟಿದೂರಿಗೆ (ಚನ್ನರಾಯಪಟ್ಟಣ ತಾಲ್ಲೂಕಿನ ಸಂತೇಶಿವರ) ತನ್ನ ತಾಲೂಕಿನ ಹಳ್ಳಿಗಳಿಗೆ ನೀರನ್ನು ಒದಗಿಸಿಕೊಡಲೇ ಬೇಕೆಂದು ಪಣ ತೊಟ್ಟು ನಿಂತರು. ಅದೂ ತಮ್ಮ ತೊಂಭತ್ತರ



ಹರೆಯದಲ್ಲಿ! ತನ್ನ ಆತ್ಮೀಯರಾದ ಶ್ರೀಯುತ ವಿಶ್ವೇಶ್ವರ ಭಟ್ಟರ ಮೂಲಕ ಆಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಸವರಾಜ ಬೊಮ್ಮಾಯಿಯವರನ್ನು ಭೇಟಿ ಮಾಡಿ, ಬರಗಾಲ ಪೀಡಿತವಾಗಬೇಕಿದ್ದ ತನ್ನೂರು ಮತ್ತು ತನ್ನೂರಿನ ಸುತ್ತಮುತ್ತಲಿನ ಸುಮಾರು ಹಳ್ಳಿಗಳಿಗೆ ಕಡೆಗೂ ನೀರನ್ನು ಹರಿಸಿದ ಭಗೀರಥ ಇವರು! ಅವರೇ ಮಹಾನ್ ಸಾಹಿತಿ, ಸರಸ್ವತಿ ಸಮ್ಮಾನ್ ಸಮೇತ ಇನ್ನೂ ಅನೇಕ ಪ್ರಶಸ್ತಿ ಪುರಸ್ಕೃತರಾದ ಡಾ. ಎಸ್. ಎಲ್. ಭೈರಪ್ಪನವರು.

ತನಗಾಗಿ, ತನ್ನ ಕುಟುಂಬಕ್ಕಾಗಿ ಏನನ್ನೂ ಕೇಳದೆ ತನ್ನೂರಿಗೆ ನೀರು ಕೊಡಿ ಎನ್ನುವವರು ಅಪರೂಪ. ನೀವು ಮಾರ್ಚ್ 9ನೇ ತಾರೀಖು ಭಾನುವಾರ ಸಂತೇಶಿವರಕ್ಕೆ ಬರಬೇಕಿತ್ತು ಅದೇನು ವೈಭೋಗ, ಅದೇನು ಸಂಭ್ರಮ, ಅದೇನು ಓಡಾಟ. ಊರಿಗೆ ಊರೇ ಶೃಂಗಾರಗೊಂಡಿತ್ತು. ಮನೆಮನೆಗೂ ತಳಿರು ತೋರಣ, ಬಾಳೇಕಂದುಗಳ ಅಲಂಕಾರ, ಪ್ರತಿಮನೆ ಮುಂದೆಯೂ ಗುಡಿಸಿ ಸಾರಿಸಿ ಬಣ್ಣ ತುಂಬಿದ ರಂಗೋಲಿಗಳು ರಾರಾಜಿಸುತ್ತಿದ್ದರೆ, ಹಳ್ಳಿಯ ಹೆಂಗಸರು ಸಿಂಗಾರಗೊಂಡು ವೇದಿಕೆಯತ್ತ ನಗುನಗುತ್ತಾ ಬರುತ್ತಿದ್ದಾರೆ. ಇದನ್ನು ಸಂತೇಶಿವರದ ಸಂಭ್ರಮ ಎನ್ನಬಹುದು.

ಹಿಂದಿನದಿನ ಸಂಜೆ ಏಳಕ್ಕೆ, ತೊಂಭತ್ತನಾಲ್ಕು ವರ್ಷದ ಭೈರಪ್ಪನವರು ಮೊದಲು ಗಂಗಾಧರೇಶ್ವರ ದೇವಸ್ಥಾನಕ್ಕೆ ಭೇಟಿ. ಸಹನಾವಿಜಯಕುಮಾರ್, ಭೈರಪ್ಪನವರ ತಂಗಿ ರಾಧಾ ಹೆಗಲಿಗೆ ಹೆಗಲಾಗಿ ನಿಧಾನವಾಗಿ ನಡೆಸಿಕೊಂಡು ಬಂದರು. ಬೀದಿಯ ಪ್ರತಿ ಮನೆಯ ಮುಂದೆಯೂ ನಿಂತು ಅವರನ್ನು ಹೊರಗೆ ಕರೆದು ವಿಚಾರಣೆ! ಯಾರ ಮಗಳು? ಯಾರ ಮಗ? ಅನ್ನುತ್ತಾ. ಅವರು ತಮ್ಮ ಸ್ವಂತ ಹೆಸರು ಹೇಳದೆ, ತಮ್ಮ ತಂದೆ, ತಾತ, ಅಜ್ಜಿ, ಅಮ್ಮಂದಿರ ಮೂಲಕ ತಮ್ಮ ಪರಿಚಯ ಮಾಡಿಕೊಂಡರು. ಭೈರಪ್ಪನವರು ಸಂತೇಶಿವರಕ್ಕೆ ಎಂಟನೇ ತಾರೀಖು ಕಾಲಿಟ್ಟ ಕ್ಷಣದಿಂದಲೇ ಜನ ಎಲ್ಲೆಲ್ಲಿಂದಲೋ ಬಂದರು ಗೃಹಭಂಗದಲ್ಲಿ ಬರೆದಿದೀರಲ್ಲಾ, ಅವರ ಮಗಳು ನಾನು ಅಂದರು. ಇನ್ಯಾರೋ ಬಂದರು, ಭಿತ್ತಿಲಿ ಬರೆದಿಲ್ವಾ ಅವರ ಮಗ ನಾನು ಅಂದರು. ಎಲ್ಲರ ಜೊತೆ ಸಂಪರ್ಕ ಬೇಕೇ ಬೇಕೆನ್ನುವಂತೆ ಒಂದೇ ಒಂದು ಮನೆ ಬಿಡದೆ

ವಿಚಾರಿಸಿಕೊಂಡರು. ಅಲ್ಲಿಂದ ಭೈರಪ್ಪನವರ ಎಲ್ಲ ಪುಸ್ತಕ ಪ್ರಶಸ್ತಿ, ಕೈಬರಹಗಳನ್ನಿಟ್ಟಿರುವ ಸಂಗ್ರಹಾಲಯಕ್ಕೆ ತೆರಳಿದರು. ಇಲ್ಲೊಂದು ರಮ್ಯವಾದ ಪ್ರಸಂಗ ನಡೆಯಿತು. ಅಲ್ಲಿಟ್ಟಿದ್ದ ಫೋಟೋ ಒಂದನ್ನು ತೋರಿಸಿ ಇದು ಯಾರು ಎಂದು ಕೇಳಿದರು. ಅದಕ್ಕೆ ಭೈರಪ್ಪನವರು ಅದನ್ನೇ ತದೇಕ ದೃಷ್ಟಿಯಿಂದ ನೋಡಿ, ಇನ್ಯಾರು, ನಮ್ ಯಜಮಾನತಿ ಅನ್ನಬೇಕೆ? ಆಗ ಭೈರಪ್ಪನವರ ಮುಖ ಕೆಂಪು ಕೆಂಪು, ಬಂದರೂ ಬಾರದ, ಕಂಡರೂ ಕಾಣದ ಕಿರುನಗು, ತಗ್ಗಿಸಿದ ತಲೆ......! ಸುತ್ತಲಿದ್ದವರೆಲ್ಲ ನಕ್ಕರು.

ಮಾರನೇದಿನ ಗಂಗೆ ಹರಿಸಿದ ಭಗೀರಥರಿಗೆ ಸುತ್ತೂ ಹಳ್ಳಿಯವರು ಸೇರಿ ಸನ್ಮಾನ! ಬೆಳ್ಳಿರಥದಲ್ಲಿ ಶ್ರೀಮತಿ ಸರಸ್ವತಮ್ಮನವರು ಮಲ್ಲಿಗೆ ಹೂವು ಮುಡಿದು, ರೇಶಿಮೆ ಸೀರೆಯುಟ್ಟು ಪತಿಯ ಜೊತೆ ಕಂಗೊಳಿಸಿದರು. ಪ್ರೇಕ್ಷಕರಿಗೆ ಅಂದು ಹಬ್ಬವೋ ಹಬ್ಬ!

ಮೆರವಣಿಗೆ ಬಂದ ಡಾ. ಭೈರಪ್ಪ ದಂಪತಿ ಜನರಿಗೆ ದೇವರಂತೆಯೇ ಗೋಚರಿಸಿದರು. ಅಲ್ಲಿ ಯಾರೂ ಅಪರಿಚಿತರಿಲ್ಲ, ದೂರದವರಲ್ಲ, ಎಲ್ಲರೂ ಒಬ್ಬರಿಗೊಬ್ಬರು ಆತ್ಮೀಯರೇ, ಬಂಧುಗಳೇ! ಸಮಾರಂಭದಲ್ಲಿ ಜನ ಬಿಸಿಲಿನಲ್ಲಿ ಕಿಕ್ಕಿರಿದು ನಿಂತು ಎಲ್ಲರ ಮನದ ಮಾತನ್ನು ಕೇಳಿದರು. ಬೊಮ್ಮಾಯಿಯವರು ಅತ್ಯಂತ ಆಪ್ತವಾಗಿ ತಮ್ಮ ಮನವನ್ನು ತೆರೆದಿಟ್ಟರು. ವಿಶ್ವೇಶ್ವರರ ಭಟ್ಟರು ಈ ಭಗೀರಥ ಪ್ರಯತ್ನದಲ್ಲಿ ತಮ್ಮ ಪಾತ್ರವನ್ನು ಆತ್ಮೀಯವಾಗಿ ಹೇಳಿಕೊಂಡರು. ಭೈರಪ್ಪನವರು ತಮ್ಮ ತಾಯಿಯನ್ನು ನೆನೆದು, ನನ್ನಮ್ಮನಿಂದಲೇ ನಾನಿವತ್ತು ಹೀಗಿರೋದು ಎಂದು ರಾವಣ ಸತ್ತ ನಂತರ ರಾಮ ಸುವರ್ಣನಗರಿ ಶ್ರೀಲಂಕೆಯಲ್ಲಿ ದೊರೆಯಾಗಲಿಲ್ಲವೇಕೆ ಎನ್ನುತ್ತ ಜನನೀ ಜನ್ಮಭೂಮಿಶ್ಚ ಉದಾಹರಣೆ ಕೊಟ್ಟರು. ಎಂತಹವನಿಗೂ ತನ್ನದೊಂದು ಊರು ಮನೆ ಎಂಬ ಗುರುತಿಸುವಿಕೆ ಇರಬೇಕೆಂದರು. ಸಂತೇಶಿವರದ ಜನ ತೃಪ್ತಿಯಾಗಿ ಬದುಕಲಿ, ಸಂತೋಷವಾಗಿರಲಿ ಎಂದರು.

ಮೇರು ಸಾಹಿತಿ ಭೈರಪ್ಪನವರು ಇಂದು ಜನರ ಮನಸ್ಸಿನ ಕಣ್ಮಣಿಯಾಗಿದ್ದಾರೆ, ಸಾಹಿತ್ಯಿಕವಾಗಿಯೂ, ಜನಸೇವಕರಾಗಿಯೂ. ಊರಿನ ಜನರನ್ನು ತಮ್ಮ ಕಾದಂಬರಿಗಳಲ್ಲಿ ಪಾತ್ರವನ್ನಾಗಿಸಿ ಗ್ರಾಮದ ಜನತೆಯನ್ನೂ ಚಿರಾಯುವಾಗಿಸಿದ್ದಾರೆ, ಗ್ರಾಮಕ್ಕೆ ಗಂಗೆ ಹರಿಸಿ ಘನತೆಯ ಶಿಖರ ತಲುಪಿದ್ದಾರೆ. ಒಬ್ಬ ಮನುಷ್ಯನಿಗೆ ಇದಕ್ಕಿಂತ ಸಾರ್ಥಕತೆ ಇನ್ನೇನೂ ಬೇಡವೆನಿಸುತ್ತದೆ. ಯಾವ ಪಂಥದವರಾದರೇನು ಮಾನವೀಯತೆ ಮುಖ್ಯವೆಂದು ಸಾರಿದ ನಮ್ಮ ಭೈರಪ್ಪನವರು, ಮಾನವತಾವಾದಿಗಳಿಗೆಲ್ಲ ಕಲಶಪ್ರಾಯರು. ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ಎಂಬುದನ್ನು ನಿಜ ಮಾಡಿ ತೋರಿಸಿದ ಮಹಾನ್ ವ್ಯಕ್ತಿ ನಮ್ಮ ಭೈರಪ್ಪನವರು. ಜನ ಹೇಳುತ್ತಾರೆ, ಈ ನನ್ನಪ್ಪುನ್ನ ಇನ್ ಮುಂದ್ಕೆ ನಮ್ ಮಮ್ಮಕ್ಳು, ಮೂಳ್ ಮಕ್ಳು ಸೈತ ನೆನ್ಯಾಕಬೇಕು ಕಣವ್ವಾ ಅಂತಾ ಕೆಲ್ಸ ಮಾಡ್ಬುಟ್ಟವ್ರೆ ಅನ್ನುತ್ತಾ ಕೈ ಮುಗಿಯುತ್ತಾರೆ. ಇನ್ನೇನು ಬೇಕು ಜೀವನಕ್ಕೆ? ಕಡೆಗಾಲದಲ್ಲಿ ತಮ್ಮನ್ನು ಎಲ್ಲರ ಹೃದಯದಲ್ಲೂ ಉಳಿಸಿಕೊಂಡರಲ್ಲಾ ಇದು ನಿಜವಾದ ಸಾಧನೆ. ಭೈರಪ್ಪನವರು ಯಾವತ್ತಿಗೂ ದೊಡ್ಡವರೇ...ದೊಡ್ಡ ಮನುಷ್ಯರೇ. ■



# *ಮಿತ್ರರೊಂದಿಗೆ ವಾಕ್–athon !*

✍ ರಾಂಕಿ ಬೆಳ್ಳೂರ್

ಭಾರತೀಯ ವಿದ್ಯಾ ಭವನದ ಖಿನ್ನ ಸಭಾಂಗಣದಲ್ಲಿ ಅಂದು ರವಿವಾರ ಬೆಳಿಗ್ಗೆಯಿಂದ ರಾತ್ರಿಯವರೆಗೂ ಹಿತವಾದ ಬಿಸಿಲು...ಯಾಕೆ ಹೇಳಿ? ಮಿತ್ರರಿದ್ದರೆ ಬಿಸಿಲಿರಲೇ ಬೇಕಲ್ವೇ! ..ರವಿಯೇ ಮಿತ್ರ. ಸಮಯಕ್ಕೆ ಸರಿಯಾಗಿ ಆಗಮಿಸಿದ ಮಿತ್ರ ದಂಪತಿಗಳಿಗೆ ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ಅನೇಕ ಮಿತ್ರರು, ಒಡನಾಡಿಗಳನ್ನು ಕಂಡು 'ಮಿತ್ರ'ರು ಬಹಳ ಆತ್ಮೀಯವಾಗಿ ಮಾತನಾಡಿಸುತ್ತಾ ವೇದಿಕೆಯತ್ತ ಸಾಗಿದರು.ಲಿಟ್ರಲಿ, ನಾವೆಲ್ಲ ಮಿತ್ರಕೂಟದಲ್ಲಿದ್ದೆವು !

ತೊಂಬತ್ತು ವಸಂತಗಳನ್ನು ಕಂಡ ಕನ್ನಡದ ಶ್ರೇಷ್ಠ ಸಾಹಿತಿ, ವಿಮರ್ಶಕ, ಭಾಷಣಕಾರರಾದ ಪ್ರೊ.ಅ.ರಾ.ಮಿತ್ರರವರ ಅವಲೋಕನ, ಅನಾವರಣ ಹಾಗು ಅಭಿನಂದನಾ ಸಮಾರಂಭಕ್ಕೆ ಇಡೀ ಖಿಂಚ ಸಭಾಂಗಣ ಹೌಸ್ ಫುಲ್ !

ಡಾ॥ ರಂಜನಿ ವಾಸುಕಿಯವರ ಮಧುರವಾದ ಪ್ರಾರ್ಥನೆ ಕಾರ್ಯಕ್ರಮಕ್ಕೆ ಶುಭಾರಂಭ ನೀಡಿತು. ಗಮಕ ವಾಚನ ಎಂದರೆ ವಿದುಷಿ ಗಂಗಮ್ಮ ಕೇಶವಮೂರ್ತಿ. ಈ ವಯಸ್ಸಿನಲ್ಲಿ ಅವರ ಶಾರೀರದಲ್ಲಿ ಇರುವ ಅರ್ಧ ಬಲ ನಮಗೆ ಇಡೀ ಶರೀರದಲ್ಲಿಲ್ಲ ! ಸೊಗಸಾದ ಪ್ರಸ್ತುತಿ ನೀಡಿದರು.

ತಮ್ಮ ಸಣ್ಣ ಕತೆಗಳ ಮೂಲಕ ಕನ್ನಡಿಗರ ಮನೆ ತಲುಪಿ ಯಶ ಸಾಧಿಸಿದವರು ಇವರು. ಆದರೆ ಇವರದು ಬಹಳ ದೊಡ್ಡ ಮನಸ್ಸು. 'ಮಿತ್ರಾವರಣ'ದ ದೀಪ್ತಿಗಳಲ್ಲಿ ರಮಣಶ್ರೀ ಸಮೂಹ ಸಂಸ್ಥೆಯ ಕೊಡುಗೆ ಅಪಾರ.

ಬರಹಗಾರರು ಮತ್ತು ರಮಣಶ್ರೀ ಹೋಟೆಲ್ ಉದ್ಯಮದ ಮುಖ್ಯಸ್ಥರು ಎಸ್. ಷಡಕ್ಷರಿ ಅವರು ಪ್ರಸ್ತಾವನೆ ಮಾಡಿ ಮಿತ್ರ ಅವರೊಂದಿಗಿನ ಅನನ್ಯ ಸಂಬಂಧ ಹಂಚಿಕೊಂಡರು.

ಅ.ರಾ.ಮಿತ್ರರ ಕೃತಿ ಅವಲೋಕನ, ಅನಾವರಣ ಹಾಗು ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ॥ ಚಂದ್ರಶೇಖರ ಕಂಬಾರ, ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇಯಾದ ಕೊಡುಗೆ ನೀಡಿದ ಅ.ರಾ.ಮಿತ್ರರಿಗೆ ಶತ್ರುಗಳಿಲ್ಲ. ಮಿತ್ರರ ಹಾಸ್ಯಕ್ಕೆ ಸಿಕ್ಕ ಮನ್ನಣೆ ಅವರ ವಿದ್ವತ್ತಿಗೆ ಸಿಕ್ಕಿಲ್ಲ. ಅವರ ಒಡನಾಟಕ್ಕೆ ಬಂದವರೆಲ್ಲರೂ ಮಿತ್ರರೇ ಆಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಖ್ಯಾತ ಸಾಹಿತಿ, ವಿಮರ್ಶಕರಾದ ಡಾ॥ ಟಿ.ವಿ.ವೆಂಕಟಾಚಲ ಶಾಸ್ತ್ರೀ ಮತ್ತು ಶತಾವಧಾನಿ ಡಾ॥ ರಾ.ಗಣೇಶ್ 'ಮಿತ್ರಾರ್ಜಿತ' ಅಭಿನಂದನಾ ಗ್ರಂಥದ ಬಿಡುಗಡೆ ಮಾಡಿದರು. ಮಿತ್ರ ಅವರ ಬರಹಗಳಲ್ಲಿ ಅಕ್ಷರಗಳ ಚಮತ್ಕಾರ ಕಾಣಬಹುದಾಗಿದೆ. ಹಾಸ್ಯದ ಜೊತೆಗೆ ಸಾಮಾಜಿಕ ವಿಮರ್ಶೆಯನ್ನೂ ಅವರು ಕೃತಿಗಳಲ್ಲಿ ಮಾಡಿದ್ದಾರೆ. ಮಿತ್ರ ಅವರು ಪರಿಪೂರ್ಣ ಹಾಗೂ ಧ್ವನಿ ಪೂರ್ಣವಾದ ಕಾವ್ಯವನ್ನು ಸೃಷ್ಟಿಸಿದ್ದಾರೆ. ಆದರೆ ವಿಮರ್ಶಾ ಲೋಕವು ಅವರ ಗಂಭೀರ ಸಾಹಿತ್ಯಕ್ಕೆ ಅಷ್ಟಾಗಿ ಮನ್ನಣೆ ನೀಡದ ಪರಿಣಾಮ, ಇಲ್ಲಿ ಅವರಿಗೆ ಮತ್ತು ಅವರ ಸಾಹಿತ್ಯಕ್ಕೆ ಸೂಕ್ತ ಸ್ಥಾನಮಾನ ದೊರೆಯಲಿಲ್ಲ ಎಂದು ಡಾ॥ ರಾ.ಗಣೇಶ್ ಬೇಸರ ವ್ಯಕ್ತ ಪಡಿಸಿದರು.

ಮೇಘದೂತ, ಛಂದೋಮಿತ್ರ ಕೃತಿಗಳ ಬಗ್ಗೆ ಡಾ॥ ಗಣೇಶ್, ಮಹಾಭಾರತದ

ಪಾತ್ರ ಸಂಗತಿಗಳು ಕೃತಿಯ ಬಗ್ಗೆ ಸೂರ್ಯಪ್ರಕಾಶ್ ಪಂಡಿತ್, ವಚನಕಾರರು ಮತ್ತು ಶಬ್ದಕಲ್ಪ ಕೃತಿಯ ಬಗ್ಗೆ ಸಿ.ಸೋಮಶೇಖರ, ಸ್ಮರಣೀಯರು ಟಿ.ಪಿ.ಕೈಲಾಸಂ ಬಗ್ಗೆ ವೈ.ವಿ.ಗುಂಡೂ ರಾವ್, ಲಲಿತ ಪ್ರಬಂಧಗಳು 'ಪ್ರೇಮನದಿಯ ದಡಗಳಲ್ಲಿ' ಕೃತಿಯ ಬಗ್ಗೆ ಹಾಸ್ಯ ಲೇಖಕ ಎಂ.ಎಸ್.ನರಸಿಂಹಮೂರ್ತಿ ಹಾಗೂ ರಾಮಾಯಣ ಮಿತ್ರ ಕೃತಿಯ ಬಗ್ಗೆ ಡಾ॥ ಅರ್ಚನಾ ಮಾತನಾಡಿದರು.

ಇದರ ನಡುವೆ ಮಿತ್ರ ಅವರು ರಚಿಸಿದ ಎರಡು ಸ್ಕಿಟ್ ಕಲಾಗಂಗೋತ್ರಿಯ ಬಿ.ವಿ.ರಾಜಾರಾಮ್ ತಂಡ ಸೊಗಸಾಗಿ ಪ್ರಸ್ತುತಪಡಿಸಿದರು.

ಮಾತುಗಳ ಮುಲಕ ಫುಡ್ ಫಾರ್ ಥಾಟ್ ಆಯಿತು. ಫುಡ್ ಫಾರ್ ಟಮ್ಮಿ ವ್ಯವಸ್ಥೆ ಶ್ರೀ ಷಡಕ್ಷರಿಯವರು ಏರ್ಪಾಡು ಮಾಡಿದ್ದರು [ತಿಂಡಿ, ಊಟ, ಸಂಜೆ ಕುರುಕಲು].

ನಾಡಿನ ಹೆಸರಾಂತ ಸಾಹಿತಿಗಳು, ಕಲಾವಿದರು, ದಿಗ್ಗಜರು ಈ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡು ಪ್ರೊ.ಅ.ರಾ.ಮಿತ್ರರ ಜೀವನ ಮತ್ತು ಸಾಧನೆಯ ಬಗ್ಗೆ ಬೆಳಕು ಚೆಲ್ಲಿದರು [ಸೂರ್ಯಂಗೇ ಟಾರ್ಚಾ ? ಅಂತ ಕೇಳ್ಬೇಡಿ!]

ಭೋಜನದ ನಂತರ ಗೀತ–ನೃತ್ಯ–ವೈದುಷ್ಯದ ಪ್ರದರ್ಶನವನ್ನು ವಿದುಷಿ ಡಾ॥ ನಾಗವಲ್ಲಿ ನಾಗರಾಜ್, ನೃತ್ಯ ಗುರು ಡಾ॥ ಶೋಭಾ ಶಶಿಕುಮಾರ್ ಮತ್ತು ಚಿತ್ರ ಕಲಾವಿದೆ ಮಂಜುಳಾ ಪ್ರೇಮಕುಮಾರ್ ಅದ್ಭುತವಾಗಿ ನಡೆಸಿಕೊಟ್ಟರು. ಹಾಡಿಗೆ ತಕ್ಕ ನೃತ್ಯ, ನೃತ್ಯಕ್ಕೆ ಅನುಗುಣವಾದ ಚಿತ್ರ ! ಬೈ ಒನ್ ಗೆಟ್ ಥ್ರೀ ಫ್ರೀ ಆಫರ್ ಹಾಗಿತ್ತು ಇದು!

ನರಸಿಂಹಮೂರ್ತಿ ಅವರು ಸಾರಸ್ವತ ಲೋಕಕ್ಕೆ ಮಿತ್ರ ನೀಡಿರುವ ಕಾಣಿಕೆ ಅಪಾರ ಎಂದರು. ಮಿತ್ರರೊಡನೆ ವಿದೇಶಿ ಪ್ರವಾಸದ ಕ್ಷಣಗಳನ್ನು ಹಂಚಿಕೊಂಡರು. ಪ್ರೊ.ಕೃಷ್ಣೇಗೌಡರು ಅ.ರಾ.ಮಿತ್ರ ಅವರ ಗುರು ಎಂದು ಅಕ್ಕ ಸಮ್ಮೇಳನಕ್ಕೆ ಹೋದಾಗಿನ ಪ್ರವಾಸವನ್ನು ನೆನೆದರು. ಮಿತ್ರರ ಹಿಂದೆ ದಿನವೆಲ್ಲ ಚಾಮರ ಹಿಡಿದು ನಿಲ್ಲಲ್ಲು ಸಿದ್ಧ ಎಂದರು.

ಸಂಜೆ ಸ್ನಾಕ್ಸ್‌ಗೂ ಮುನ್ನ ಇಂದುಶ್ರೀ ಅವರ ಗೊಂಬೆಯೊಡನೆ ಮಾತಿನಿಂದ ಚಿನಕುರಳಿ ಸಿಡಿಸಿದರು.

ಚಹಾ ವಿರಾಮದ ನಂತರ ಡಾ॥ಎಸ್ ಆರ್ ಲೀಲಾ ಅವರು ಅಭಿನಂದನಾ ನುಡಿಗಳನ್ನಾಡುತ್ತಾ ಇದೊಂದು ಅಪೂರ್ವ ಕಾರ್ಯಕ್ರಮ ಎಂದು ಹೇಳಿ ಅ.ರಾ.ಮಿತ್ರರು ನಾಡಿನ ಶ್ರೇಷ್ಠರ ಸಾಲಿನ ಹಾಸ್ಯಜ್ಞ ಎಂದರ್ಥದಲ್ಲಿ ಮಾತನಾಡಿದರು.

ಹೆಸರಾಂತ ಕನ್ನಡ ಬರಹಗಾರ ಮತ್ತು ದಾರ್ಶನಿಕನಾಗಿರುವ ಡಿ.ವಿ. ಗುಂಡಪ್ಪ ಅವರಿಗೆ ಆಪ್ತರಾಗಿದ್ದ ನಾಡೋಜ ಡಾ॥ ಎಸ್ ಆರ್ ರಾಮಸ್ವಾಮಿಯವರು ಅಭಿನಂದನಾ ಭಾಷಣ ಮಾಡಿ ಸಜ್ಜನರಲ್ಲಿ ಸಜ್ಜನ ಮನೋಧರ್ಮದ ಅ.ರಾ.ಮಿತ್ರ ಎಂದರು.

ಸಂಜೆ ಪ್ರೊ. ಅ.ರಾ.ಮಿತ್ರ ದಂಪತಿಗಳಿಗೆ ಗಣ್ಯರು ಸನ್ಮಾನ ಮಾಡಿದರು. ಸಭೆಯಲ್ಲಿ ಆತ್ಮತೃಪ್ತಿ ಕಾಣಿಸಿತು, ಕರತಾಡನ ಕೇಳಿಸಿತು.

ಸಭೆಯನ್ನುದ್ದೇಶಿಸಿ ಸಾರ್ಥಕ್ಯದ ಭಾವದಿಂದ ಎರಡೇ ಮಾತುಗಳನ್ನಾಡಿದರು ಶ್ರೀ ಮಿತ್ರರು. ಕಾರ್ಯಕ್ರಮದ ಉಸ್ತುವಾರಿಗಳಾಗಿದ್ದ ಶ್ರೀ ಅಣುಕು ರಮಾನಾಥ್ ಅಚ್ಚುಕಟ್ಟಾಗಿ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮದ ಅಗಾಧತೆ ಕಂಡು ಜನರು ಸುಸ್ತುವಾರಿಗಳಾದದ್ದಂತೂ ದಿಟ !

■

# ಬೇಂದ್ರೆ ಬದುಕಿನ ಕೆಲವು ಸ್ವಾರಸ್ಯಗಳು

ಬೇಂದ್ರೆಯವರಿಗೆ ಗೌರವ ಡಾಕ್ಟರೇಟ್ ಬಂದಾಗ ಪತ್ರಕರ್ತರೊಬ್ಬರು ಅವರ ಅಭಿಪ್ರಾಯ ಕೇಳಿದರು. ಬೇಂದ್ರೆಯವರು ಅವರು ಹುಚ್ಚರಿದ್ದಾರೆ ಅಂದಷ್ಟೇ ಹೇಳಿದರು. ಪತ್ರಕರ್ತ ಪೆಚ್ಚಾಗಿ ಬೇಂದ್ರಯವರ ಮುಂದಿನ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಾ ನಿಂತರು. ಆಗ ಬೇಂದ್ರೆಯವರು ನೋಡಪ್ಪಾ, ನಾನು ಹುಟ್ಟಿನಂದಲೇ ಡಾಕ್ಟರ್ ಇದೀನಿ ನನ್ನನ್ನು ಇನ್ನೆಂಥಾ ಡಾಕ್ಟರ್ ಮಾಡೋವರಿದಾರ ಅವರು ? ಅಂದರು. ಇದೂ ಪತ್ರಕರ್ತರಿಗೆ ಅರ್ಥವಾದಂತಿರಲಿಲ್ಲ. ಬೇಂದ್ರೆಯವರು ನನ್ನ ಹೆಸರನ್ನು ಪೂರ್ತಿ ಇಂಗ್ಲಿಷಿನಲ್ಲಿ ಹೇಳು ಅಂದರು. ನಂತರ ಅವರೇ ನಾನು ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಅಂದ್ರೆ. ಡಿ.ಆರ್.ಬೇಂದ್ರೆ ಇಂಗ್ಲಿಷಿನಲ್ಲಿ ಡಾಕ್ಟರ್ ಪದದ ಚಿಕ್ಕ ರೂಪ ಡಿ.ಆರ್.ಅಲ್ವೇ. ಅಂದಾಗ ಪತ್ರಕರ್ತನಾದಿಯಾಗಿ ಎಲ್ಲರೂ ನಕ್ಕರು.

ಒಬ್ಬರು ಬೇಂದ್ರೆಯವರ ಹತ್ತಿರ ನಿಮ್ಮ ಯಾರಿಗೂ ಹೇಳೋಣು ಬ್ಯಾಡ ಕವನ ನಮ್ಮ ಕಾಲೇಜು ಹುಡುಗರಿಗೆಲ್ಲಾ ಬಹಳ ಇಷ್ಟವಾಗಿದೆ ಅದರಲ್ಲೂ ಗಲ್ಲಾ ಗಲ್ಲಾ ಹಚ್ಚಿಕೊಂಡು ಎನ್ನುವ ಪದ ಕೇಳಿ ಕುಣಿದಾಡತಾರ ಅಂದರಂತೆ. ಆಗ ಬೇಂದ್ರಯವರ ಕಣ್ಣಲ್ಲಿ ನೀರಾಡಿತಂತೆ. ಬೇಂದ್ರೆಯವರು ಅವರ ಹತ್ತಿರ ಹೋಗಿ ಅವರ ಬೆನ್ನ ಮೇಲೆ ಕೈ ಹಾಕಿ, ಗಲ್ಲಾ ಗಲ್ಲಾ ಹತ್ತೋದು ಬರೀ ಪ್ರೇಯಸಿಯೊಂದಿಗಷ್ಟೆ ಅಂತ ತಿಳದಿ ಏನ ? ಸಣ್ಣ ಮಗೂನ ಎತ್ತಿಕೋ, ಅದರ ಗಲ್ಲ ನಿನ್ನ ಗಲ್ಲಾಕೆ ಹತ್ತತದ. ಪ್ರೇಮ, ಪ್ರೀತಿ, ವಾತ್ಸಲ್ಯ, ಭಕ್ತಿ ಇವೆಲ್ಲಾ ಪ್ರೀತಿಯ ವಿವಿಧ ಹಂತಗಳು, ಸಮವಯಸ್ಕರ ಪ್ರೀತಿಗೆ ಪ್ರೇಮ ಅಂತಾರ. ಹಿರಿಯರು ಕಿರಿಯರನ್ನು ಪ್ರೀತಿಸಿದಾಗ ವಾತ್ಸಲ್ಯ ಅಂತಾರ. ತಾಯಿಯ ಪ್ರೀತಿ ಮಾತೃ ವಾತ್ಸಲ್ಯ, ಕಿರಿಯರು ಹಿರಿಯರನ್ನು ಗೌರವ ಭಾವದಿಂದ ಪ್ರೀತಿಸಿದಾಗ ಭಕ್ತಿ ಅಂತಾರ. ಯಾರಿಗೂ ಹೇಳೋಣ ಬ್ಯಾಡ ಸಂತಿಗೆ ಹೋಗಿಬರೋಣ ಅಂತೀರಲ್ಲೋ? ಆ ಭಾವದಿಂದ ಕವಿತೆಯನ್ನು ಓದಿ ಅಂದರಂತೆ.

ಒಮ್ಮೆ ಒಂದು ಕಾಲೇಜಿನಲ್ಲಿ ಬೇಂದ್ರೆಯವರ ಉಪನ್ಯಾಸವನ್ನು ಏರ್ಪಡಿಸಿದ್ದರು. ಉಪನ್ಯಾಸದ ದಿನ ಬೇಂದ್ರೆಯವರನ್ನು ಪರಿಚಯಿಸುವ ಕೆಲಸ ಒಬ್ಬರು ಉಪನ್ಯಸಕಿಗೆ ಬಂದಿತ್ತು. ಅವರು ಬೇಂದ್ರೆ ಕಾವ್ಯವನ್ನು ಕುರಿತು ಪಿ.ಎಚ್.ಡಿ. ಅಧ್ಯಯನವನ್ನು ಮಾಡುತ್ತಿದ್ದರು. ಹೀಗಾಗಿ ಅವರಿಗೆ ಬೇಂದ್ರೆ ಅವರ ಬಗ್ಗೆ ಭಕ್ತಿ, ಗೌರವ ಜಾಸ್ತಿ ಇತ್ತು. ಅವರು ಬೇಂದ್ರೆಯವರನ್ನು ಬಹಳ ಆಳವಾಗಿ ಪರಿಚಯಿಸುವ ಭರದಲ್ಲಿ ಪದೇ ಪದೇ ಬೆಂದ್ರೆ ಬೇಂದ್ರೆ ಅಂತ ಹೇಳುತ್ತಲೇ ಇದ್ದರು. ಬೇಂದ್ರೆಯವರನ್ನು ಪರಿಚಯಿಸುವಷ್ಟು ಸಮಯದಲ್ಲಿ ಆಕೆ ಕಡೇ ಪಕ್ಷ ಹತ್ತು ಹದಿನೈದು ಸಲವಾದರೂ ಬೆಂದ್ರೆ ಬೇಂದ್ರೆ ಆಗಬಹುದು ಎನ್ನುವ ಮಾತನ್ನು ಹೇಳಿದ್ದರು. ಇದನ್ನು ಕೇಳಿ ಬಹುಶ: ಬೇಂದ್ರೆಯವರಿಗೂ ಜಿಗುಪ್ಸೆ ಬಂದಿತ್ತು. ಬೇಂದ್ರೆಯವರ ಉಪನ್ಯಾಸದ ಸಮಯ ಬಂದಾಗ ಬೇಂದ್ರೆ ಉಪನ್ಯಾಸ ಮಾಡುವ ಮೊದಲು ಆ ಉಪನ್ಯಾಸಕಿಯ ಕಡೆ ತಿರುಗಿ ತಂಗಿ, ನೀನು ಹೇಳಿದುದು ಖರೆ, ಆದರೆ ಒಂದು ಮಾತನ್ನು ಮರೆಯಬೇಡ ಬೆಂದವರೆಲ್ಲರೂ ಬೇಂದ್ರೆಯವಾಗುವುದಿಲ್ಲ, ಆಗುವುದು ಸಾಧ್ಯವೂ ಇಲ್ಲ, ಬೆಂದವರು ಬೂದಿಯಾಗುತ್ತಾರಷ್ಟೆ ಅಂದು ತಮ್ಮ ಉಪನ್ಯಾಸ ಮುಂದುವರಿಸಿದರು.


ಬೇಂದ್ರೆಯವರಿಗೆ ಸ್ತ್ರೀಯರು ಎಂದರೆ ಅಪಾರವಾದ ಗೌರವ. ಅವರು ಸಭ್ಯ ಸಮಾಜನ ಅಡಿಪಾಯ ಎಂದು ನಂಬಿದ್ದರು. ಒಂದು ಮುಂಜಾನೆ ಬೇಂದ್ರೆಯವರು ತಮ್ಮ ಸ್ನೇಹಿತರೊಂದಿಗೆ ವಾಯುವಿಹಾರ ಮಾಡುತ್ತಿದ್ದರಂತೆ. ಒಂದು ಮನೆಯ ಮುಂದೆ

ಒಬ್ಬ ಹುಡುಗ ತನ್ನ ಜೊತೆಯ ಹುಡುಗರಿಗೆ ಅತ್ಯಂತ ಅಶ್ಲೀಲ ಪದಗಳಿಂದ ಬೈಯುತ್ತಿದ್ದನಂತೆ. ಅದನ್ನು ಕೇಳಿದ ಬೇಂದ್ರೆಯವರು ಅಲ್ಲೇ ಇದ್ದ ಇನ್ನೊಬ್ಬ ಹುಡುಗನನ್ನು ಕರೆದು ಈ ಹುಡುಗನ ತಾಯಿಯನ್ನು ಕರೆದುಕೊಂಡು ಬಾ ಅಂದರಂತೆ. ಆಕೆ ಬಂದ ಮೇಲೆ ಬೇಂದ್ರೆಯವರು ಆ ಹುಡುಗನಿಗೆ ಏನಪ್ಪಾ ಇಷ್ಟು ಹೊತ್ತೂ ನೀನು ಬೈಯುತ್ತಿದ್ದೆಯಲ್ಲಾ ಆ ಬೈಗುಳಗಳನ್ನು ಈಗ ನಿನ್ನ ತಾಯಿಯ ಮುಂದೆಯೂ ಬೈಯಿ ಅಂದರಂತೆ. ಹುಡುಗನಿಗೆ ಏನೂ ಆಗಲಿಲ್ಲ, ತಾಯಿಗೆ ಬಹಳ ಮುಜುಗರವಾಯಿತು. ಅಷ್ಟೊತ್ತಿಗೆ ಅಲ್ಲಿ ತುಂಬಾ ಜನ ಸೇರಿದ್ದರು. ಆಗ ಬೇಂದ್ರೆಯವರು ಈ ಹುಡುಗನಿಗೆ ಇಷ್ಟೊಂದು ವೈವಿಧ್ಯಮಯ ಬೈಗುಳಗಳು ಬಂದದ್ದಾದರೂ ಹೇಗೆ. ಇವನನ್ನು ಯಾರೂ ತಿದ್ದಿಲ್ಲವೇ. ಈ ಹುಡುಗನಿಗೆ ಏನೋ ಹತಾಷೆ ಇದೆ. ಅದು ಬೈಗುಳಗಳ ರೂಪದಲ್ಲಿ ಹೊರಬರುತ್ತಿದೆ. ಆ ಹತಾಷೆ ಏನು ಎನ್ನುವುದನ್ನು ತಿಳಿಯುವ ಕೆಲಸ ಯಾರು ಮಾಡಬೇಕು. ಇನ್ಯಾರು ತಾಯಿ ಅಂದು ಆ ತಾಯಿಯ ಕಡೆ ತಿರುಗಿ, ಮನೆಯೇ ಮೊದಲ ಪಾಠಶಾಲೆ ಜನನಿ ತಾನೇ ಮೊದಲ ಗುರು ಎನ್ನುವ ವಾಕ್ಯ ನಿನಗೆ ತಿಳಿದಿದೆಯೇ ತಾಯಿ. ಹೋಗು ನಿನ್ನ ಮಗನನ್ನು ಮನೆಗೆ ಕರೆದುಕೊಂಡು ಹೋಗಿ ಸುಧಾರಿಸು ಎಂದು ಕಳಿಸಿದರು. ■

## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



" ಅಬ್ಬ , ಏನು ಮಳೆಗಾಳಿಯಪ್ಪ !!"

# ಮುಗಿಸಿಬಿಡೋದು

**ಬೇಲೂರು ರಾಮಮೂರ್ತಿ**

ಬೆಳ್ ಬೆಳಗ್ಗೆ ಸೋಮು ಮೇಲೆ ಸೋಮಿ ಮುನಿಸಿಕೊಂಡಿದ್ದಳು. ತರಕಾರಿ ತನ್ನಿ ಅಂದರೆ ನಾನು ತಂದ ತರಕಾರಿನ ನೀನು ಒಪ್ಪೋಲ್ಲ ಅಂತ ತಕರಾರು ತೆಗೆದಿದ್ದ. ಅದಕ್ಕೆ ಸೋಮಿನೇ ಮನೆಯ ಹತ್ತಿರ ಇದ್ದ ತರಕಾರಿ ಮಾಲ್‌ಗೆ ಹೋಗಿ ತರಕಾರಿ ತರೋ ಹೊತ್ತಿಗೆ ಮನೆಯಲ್ಲಿ ಸೋಮು ಜೊತೆ ನಾಲ್ಕು ಜನ ಮಾತಾಡ್ತಾ ಕೂತಿದ್ದರು. ಯಾರೋ ಸ್ನೇಹಿತರು ಇರಬೇಕು ಅಂದುಕೊಂಡು ಸೋಮಿ ಒಳಗೆ ಹೋಗುತ್ತಿರುವಾಗ ಬಂದವರ ಪೈಕಿ ಒಬ್ಬ ಸೋಮುಗೆ ನೀವು ನಾನು ಹೇಳಿದ ಹಾಗೆ ಮಾಡಿ ಸರ್ ಆ ಸುಂದರಮ್ಮನನ್ನು ಮುಗಿಸಿಬಿಡಿ. ಅದೇನೂ ನಿಮಗೆ ಕಷ್ಟವಲ್ಲ ಅಂದ. ಅದಕ್ಕೆ ಸೋಮು ನನಗೂ ಎಷ್ಟೋ ಸಲ ಸುಂದರಮ್ಮನನ್ನು ಮುಗಿಸಿಬಿಡಬೇಕು ಅನಿಸಿದೆ. ಆದರೆ ಹಾಗೆ ಮುಗಿಸಿಬಿಟ್ಟರೆ ಕಷ್ಟ. ಜನ ಏನಂತಾರೆ ಅನ್ನೋ ಭಯ. ಇನ್ನೊಂದೆರಡು ತಿಂಗಳಾದರೂ ಸರಿ ಅವಳನ್ನು ಮುಗಿಸುವ ಗುರಿ ಇದೆ. ಆದರೆ ಅದಕ್ಕೆ ಮುಂಚೆ ಸರಿಯಾಗಿ ಪ್ರಿಪೇರ್ ಆಗಬೇಕು ಅಂದ. ಆಗ ಇನ್ನೊಬ್ಬ ನೋಡಿ ಸರ್ ಜನ ಎಲ್ಲ ಸುಂದರಮ್ಮನಿಗೆ ಉಗೀತಾ ಇದಾರೆ, ಅವಳಿಂದ ಯಾರಿಗೂ ಏನೂ ಉಪಯೋಗ ಆಗಿಲ್ಲ. ಇನ್ನೂ ತೊಂದರೆಯೇ ಹೆಚ್ಚು. ಅವಳನ್ನು ಮುಗಿಸಿಬಿಟ್ಟರೆ ಜನ ನಿರಾಳವಾಗಬಹುದು ಅಂದ. ಸೋಮಿಗೆ ಅಯ್ಯೋ ರಾಮ ಇದೇನು ಬಂತು ಇವರಿಗೆ, ಸುಂದರಮ್ಮ ಯಾರು, ಅವಳನ್ನು ಇವರು ಯಾಕೆ ಮುಗಿಸಬೇಕು. ಹಾಗೆ ಮುಗಿಸಿಬಿಟ್ಟರೆ ಪೊಲೀಸಿನವರು ಇವರನ್ನು ಸುಮ್ಮನೆ ಬಿಡುತ್ತಾರೆಯೇ ಅಂತ ಯೋಚಿಸುತ್ತಿದ್ದಾಗ ಕಾಲಿಂಗ್ ಬೆಲ್ ಸದ್ದಾಯಿತು. ಸೋಮಿನೇ ಹೋಗಿ ಬಾಗಿಲು ತೆಗೆದಳು. ಅದಕ್ಕೂ ಮುನ್ನ ಸೋಮು ಮುಂದೆ ಕೂತಿದ್ದವರನ್ನು ತಿನ್ನೋ ಹಾಗೆ ನೋಡಿಕೊಂಡು ಹೋದಳು. ಆಗ ಒಬ್ಬ ಮೇಡಂ ನಮಗೆ ತಿನ್ನೋಕೆ ಏನೋ ತಂದುಕೊಡ್ತಾರೆ ಅಂದ್ಕೊಂಡಿದ್ದರೆ ನಮ್ಮನ್ನೇ ತಿನ್ನೋ ಹಾಗೆ ನೋಡ್ಕೊಂಡು ಹೋದ್ರಲ್ಲಪ್ಪ ಅಂದ. ಸೋಮಿ ಬಾಗಿಲು ತೆಗೆದಾಗ ಅಲ್ಲಿ ಒಬ್ಬ ಪೋಲೀಸಿನವರು ನಿಂತಿದ್ದರು. ಸೋಮಿಗೆ ಗಾಬರಿ. ಅಲ್ಲಿ ನೋಡಿದ್ರೆ ಸೋಮು ಸುಂದರಮ್ಮನನ್ನು ಮುಗಿಸುವ ಮಾತಾಡ್ತಾ ಇದಾರೆ. ಅಷ್ಟರಲ್ಲಿ ಪೊಲೀಸು ಅಗಲೇ ಬಂದಾಯಿತು. ಏನಪ್ಪಾ ಗತಿ ಅಂದು ಒಳಗೆ ಬಂದು ರೀ ಪೋ ಪೋ ಪೋಲೀಸು ಬಂದಿದಾರೆ ಅಂದಳು. ಎಲ್ಲರೂ ಗಾಬರಿಯಿಂದ ಬಾಗಿಲ ಕಡೆ ನೋಡಿದರು. ಸೋಮು ಸ್ವಲ್ಪ ಇರಿ ಬಂದೆ ಅಂತ ಹೊರಗೆ ಬಂದು ನೋಡಿದರೆ ಪೋಲೀಸ್ ವರದರಾಜು ಬಂದಿದ್ದರು. ಸೋಮು ಅವರನ್ನು ನೋಡಿ ಏನು ಸಮಾಚಾರ ಅಂತ ಕೇಳಿದ. ಅದೇ ಸರ್ ನೀವು ಇವತ್ತು ಬನ್ನಿ ಅಂತ ಹೇಳಿದ್ರಿ. ನನಗೆ ತುಂಬಾ ಅರ್ಜಂಟ್ ಇದೆ ಅಂದ ವರದರಾಜು. ಅಯ್ಯೋ ನಾನು ಮರೆತೇಬಿಟ್ಟಿದ್ದೆ. ಒಂದ್ ಕೆಲಸ ಮಾಡಿ ಒಂದು ಹತ್ತು ನಿಮಿಷ ಕೂತಿರಿ. ನನ್ನ ಸ್ನೇಹಿತರನ್ನು ಕಳಿಸಿಬಿಟ್ಟು ಬರ್ತೀನಿ ಅಂದು ಸೋಮಿ ಕಡೆ ನೋಡಿ ಅವರು ಪೋಲೀಸ್ ಯೂನಿಫಾರಂನಲ್ಲಿ ಬಂದಿದಾರೆ ಅಂದಾಕ್ಷಣ ನೀನು ಕ್ಲೋರೋಫಾರಂ ತಗೊಂಡೋಳ ಹಾಗೆ ಆಡಬೇಡ. ವರದರಾಜು ನನ್ನ ಸ್ನೇಹಿತರು. ಅವರಿಗೆ ನನ್ನಿಂದ ಏನೋ ಸಹಾಯ ಆಗಬೇಕು ಅದಕ್ಕೆ ಬಂದಿದಾರೆ. ಅವರಿಗೆ ಬಿಸಿ ಬಿಸಿ ಕಾಫಿ ಕೊಡು. ಹಾಗೇ ನನ್ನ ಸ್ನೇಹಿತರಿಗೂ ಕೊಡು ಅಂದ. ಅದಕ್ಕೆ ಸೋಮಿ ಆ ಕೊಲೆಗಡುಕರಿಗೆ ನಾನ್ಯಾಕೆ ಕಾಫಿ ಕೊಡ್ಲಿ ಅಂದಳು. ವರದರಾಜು ಚುರುಕಾಗಿ ಯಾರು ಸರ್ ಕೊಲೆಗಡುಕರು ಅಂತ ಕೇಳಿದರು. ಅದಕ್ಕೆ ಸೋಮಿ ಅಂಥಾದ್ದೇನೂ ಇಲ್ಲ. ನೀವು ಪೇಪರ್ ಓದುತ್ತಾ ಕಾಫಿ ಕುಡೀರಿ ನಾನು ಈಗಲೇ ಬಂದೆ ಅಂದು ಮತ್ತೆ

ಸ್ನೇಹಿತರ ಬಳಿ ಕುಳಿತ. ಸರಿ ಅವರನ್ನು ಬೇಗ ಕಳಿಸೋಣ ಅಂತ ಸುಂದರಮ್ಮನನ್ನು ಮುಗಿಸೋ ವಿಚಾರದಲ್ಲಿ ನಾನು ಯೋಚನೆ ಮಾಡ್ತೀನಿ ನೀವು ಹೊರಡಿ ಅಂದ. ಅವರಲ್ಲೊಬ್ಬ ಇದೇನು ಸರ್ ಯೋಚನೆ ಮಾಡ್ತೀನಿ ಅಂತೀರ. ಅಲ್ಲ ಸರ್ ಸುಂದರಮ್ಮನನ್ನು ಮುಗಿಸೋದೇ ಸರಿ ಅಂತ ನಿಮ್ಮ ಮನಸಿಗೂ ಅನಿಸ್ತಿಲ್ವಾ. ಹೇಗೆ ಮುಗಿಸಬೇಕು ಅನ್ನೋದನ್ನು ನೀವು ಯೋಚನೆ ಮಾಡಿ. ಯಾಕೇಂದ್ರೆ ಸುಂದರಮ್ಮನನ್ನು ಮುಗಿಸೋದೂ ಸಹ ಸಹಜವಾಗಿರಬೇಕು ಅಲ್ವಾ. ಯಾರಿಗೂ ಅನುಮಾನ ಬರಬಾರದು ಅಂದ. ಸೋಮು ತಲೆಯಾಡಿಸಿ ಅನುಮಾನ ಬಂದರೆ ಒಂದು ರೀತಿ ಒಳ್ಳೇದು, ಅನುಮಾನ ಬರದಿದ್ದರೆ ಇನ್ನೊಂದು ರೀತಿ ಒಳ್ಳೇದು. ಅದಕ್ಕೇ ಯೋಚನೆ ಮಾಡ್ತೀನಿ ಅಂದಿದ್ದು ಅಂದ. ಮತ್ತೊಬ್ಬ ನೋಡಿ ಸರ್ ನಮಗೇನೋ ಸುಂದರಮ್ಮ ಮುಂದಿನ ವಾರವೇ ಇಲ್ಲದಿದ್ದರೆ ಚೆಂದ. ಅವಳಿದ್ರೆ ಯಾಕೋ ನಮಗೆ ಸರಿಹೋಗೋದೇ ಇಲ್ಲ. ನಾವು ನಮ್ಮ ಸ್ನೇಹಿತರ ಜೊತೆನೂ ಚರ್ಚೆ ಮಾಡಿದೆವು. ಅವರಲ್ಲಿ ಬಹಳಷ್ಟು ಜನ ಸುಂದರಮ್ಮನನ್ನು ಮುಗಿಸೋದೇ ಸರಿ. ನೀವು ಸೋಮುಗೆ ಹೇಳಿ ಅಂದಿದಾರೆ ಅಂದ. ಸೋಮಿ ಬೈದುಕೊಂಡು, ಸಿಟ್ಟಿನ ಮುಖದಿಂದ ಅವರಿಗೆಲ್ಲಾ ಅರ್ಧರ್ಧ ಲೋಟ ಕಾಫಿ ತಂದುಕೊಟ್ಟು ಇವರ್‍ಯಾಕ್ರೀ ಸುಂದರಮ್ಮನನ್ನು ಮುಗಿಸಬೇಕು. ಮುಗಿಸಿ ಇವರು ಜೈಲಿಗೆ ಹೋದರೆ ನೀವು ಬಿಡಿಸಿಕೊಂಡು ಬರ್‍ತೀರಾ. ಕಾಫಿ ಕುಡಿದು ಹೊರಡಿ. ಸುಂದರಮ್ಮನನ್ನು ಮುಗಿಸೋ ವಿಚಾರ ಇನ್ಯಾರಿಗಾದರೂ ಹೇಳಿ ಅಂದಳು. ಸೋಮಿ ವರದರಾಜುಗೆ ಕಾಫಿ ಕೊಟ್ಟು ಒಳಗೆ ಆಡುತ್ತಿರುವ ಮಾತುಗಳನ್ನು ಕೇಳಿಸಿಕೊಳ್ಳಿ ಅಂತ ಮೆಲ್ಲಗೆ ಹೇಳಿ ಬಂದಳು. ಅವಳು ಹಿಂದಕ್ಕೆ ಬಂದಾಗ ಒಬ್ಬ ಮೇಡಂ ಕಾಫಿ ಚನ್ನಾಗಿದೆ. ಆದರೆ ಸುಂದರಮ್ಮನನ್ನು ಬೇರೆ ಯಾರೂ ಮುಗಿಸೋಕೆ ಆಗಲ್ಲ ಮೇಡಂ. ಈ ವಿಚಾರ ನಿಮಗೂ ಗೊತ್ತಿರಬೇಕು ಅದೇನಿದ್ರೂ ಸೋಮುನೇ ಮಾಡಬೇಕು ಅಂದ. ಸೋಮಿ ಸಿಟ್ಟಿನಿಂದ ಸೋಮು ಕಡೆ ನೋಡಿ ರೀ ಹುಳಿಗೆ ಬೆಂಡೇಕಾಯಿ ಹೆಚ್ಚಿಕೊಡಬೇಕು ಬನ್ನಿ ಅಂದು ಒಳಗೆ ಹೋದಳು. ಸೋಮು ಏಳುತ್ತಾ ಸರಿ ನೀವು ಹೊರಡಿ ನಾನು ಯೋಚನೆ ಮಾಡ್ತೀನಿ ಅಂದ. ಆಗ ಇನ್ನೊಬ್ಬ ಸರ್ ನಿಮಗೆ ಮಾವಿನ ತೋಪು ಗೊತ್ತಲ್ಲ. ಹಿಂದೊಂದು ಸಾರಿ ಅಲ್ಲಿ ಹೋಗಿದ್ರಿ. ಸುಂದರಮ್ಮನನ್ನು ಅಲ್ಲಿಗೇ ಬರುವ ಹಾಗೆ ಮಾಡಿ ಒಂದೇ ಸಾರಿಗೆ ಮುಗಿಸಿಬಿಡಿ ಸರ್. ಮುಂದೇನಾಗುತ್ತೋ ನೋಡ್ಕೊಳೋಣ. ಬೇಕಾದರೆ ಮುಗಿಸಿದ ಮೇಲೆ ಅವಳ ಬಾಡಿನ ಅಲ್ಲೇ ಇರುವ ಕೆರೆಗೆ ಹಾಕಿಬಿಡಬಹುದು. ಯಾರಿಗೂ ಅವಳು ಎಲ್ಲಿ ಹೋದಳು ಅಂತ ಗೊತ್ತಾಗೋದೇ ಇಲ್ಲ. ಅಗ ಜನರಿಗೆ ಎಂಥಾ ಥ್ರಿಲ್ ಇರುತ್ತೆ ಗೊತ್ತಾ ಸರ್. ಇಡೀ



ಊರಿನವರು ಸುಂದರಮ್ಮನ ಬಗೆಗೇ ಮಾತಾಡ್ಕೊತಾ ಇರ್ತಾರೆ. ಅವಳು ಕಾಣದೇ ಇರೋದು ಒಂದು ಕುತೂಹಲವಾದರೆ ಅವಳು ಮೂರ್ನಾಲ್ಕು ದಿನ ಆದ ಮೇಲೆ ಕೆರೆಯ ನೀರಿನ ಮೇಲೆ ತೇಲುತ್ತಿರುವಾಗ ಇನ್ನೊಂದು ಕುತೂಹಲ ಅಲ್ವಾ ಸರ್ ಅಂದ. ಕಾಫಿ ಕುಡಿತಾ ಅಂದಿನ ಪೇಪರ್ ಓದುತ್ತಿದ್ದ ವರದರಾಜು ಒಂದು ಕ್ಷಣ ಕಾಫಿ ಕುಡಿಯುವುದನ್ನೂ ನಿಲ್ಲಿಸಿ, ಪೇಪರ್ ಓದೋದನ್ನೂ ನಿಲ್ಲಿಸಿ ಒಳಗಿನ ಮಾತುಗಳನ್ನು ಕೇಳಿಸಿಕೊಂಡ. ಆ ಪೀಡೆಗಳು ಇನ್ನೂ ಹೋಗಲಿಲ್ವಲ್ಲಾ ಅಂತ ಸೋಮಿ ಮತ್ತೆ ಸೋಮಿನ ರೀ ಬೆಂಡೇಕಾಯಿ ಅಂದಳು. ಒಬ್ಬ ನಕ್ಕು ಏನ್ಸಾರ್ ನಿಮ್ಮನೆಯವರು ಬೆಂಡೇಕಾಯಿ ಬೆಂಡೇಕಾಯಿ ಅಂತ ನಿಮ್ಮನ್ನು ಬೆಂಡೆತ್ತುತ್ತಿದ್ದಾರೆ ಅಂದ. ಅವರೆಲ್ಲಾ ಹೊರಡೋ ಮುಂಚೆ ಮತ್ತೊಬ್ಬ ಸೋಮುಗೆ ಕೈ ಮುಗಿದು ನೋಡಿ ಸರ್ ನೀವು ನಮ್ಮ ಮಾತಿಗೂ ಬೆಲೆ ಕೊಡಬೇಕು. ನಮ್ಮೆಲ್ಲರ ಒಕ್ಕೊರಲಿನ ಅಭಿಮತ ನೀವು ಸುಂದರಮ್ಮನನ್ನು ಮುಗಿಸಬೇಕು ಅನ್ನೋದು. ಬೇಕಾದರೆ ಇನ್ನೊಂದಿಷ್ಟು ಜನರನ್ನು ಕರೆದುಕೊಂಡು ಬಂದು ಅವರಿಂದಲೂ ಹೇಳಿಸ್ತೀನಿ ಅಂದ. ಸೋಮು ನಕ್ಕು ಅದೆಲ್ಲಾ ಏನೂ ಬೇಡ. ನಾನು ಸುಂದರಮ್ಮನನ್ನು ಮುಗಿಸೋ ಕುರಿತು ಸೀರಿಯಸ್ಸಾಗಿ ಯೋಚನೆ ಮಾಡ್ತೀನಿ ಅಂದ. ಮುಂದಿನ ವಾರನೇ ಮುಗಿಸಿಬಿಡಿ ಸರ್ ಅಂತ ಮತ್ತೊಬ್ಬ. ಹಾಗೆಲ್ಲಾ ಒಂದೇ ವಾರಕ್ಕೆ ಮುಗಿಸೋಕೆ ಆಗಲ್ಲ. ಒಂದೆರಡು ವಾರ ಸಮಯ ಬೇಕಾಗುತ್ತೆ. ಇವೆಲ್ಲ ನಿಮಗೆ ಗೊತ್ತಾಗೋಲ್ಲ. ನೀವು ಹೊರಡಿ ಅಂದು ಅವರನ್ನೆಲ್ಲ ಹೊರಗೆ ಕಳಿಸುವಾಗ ವರದರಾಜು ಕಾಣಲೇ ಇಲ್ಲ. ದಂ ಹೊಡ್ಕೊಂಡು ಬರೋಕೆ ಹೋಗಿರಬೇಕು ಅಂತ ಸೋಮು ಒಳಗೆ ಬಂದು ಸೋಮಿ ಕೊಟ್ಟ ಬೆಂಡೇಕಾಯಿ ಹೆಚ್ಚೋಕೆ ಷುರು ಮಾಡಿದ. ಸೋಮಿ ಒಳಗಿಂದ ಬಂದು ರೀ ಅವರೆಲ್ಲಾ ಯಾರ್ರೀ, ಯಾಕ್ರೀ ಅವರೆಲ್ಲಾ ನಿಮ್ಮ ಕೈನಿಂದ ಕೊಲೆ ಮಾಡಿಸಬೇಕು ಅಂತ ಓಡಾಡ್ತಿದಾರೆ ಅಂತ ಕೇಳಿದಳು. ಸೋಮು ಅಚ್ಚರಿಯಿಂದ ಕೊಲೆನಾ ಯಾರದ್ದೇ ಅಂತ ಕೇಳಿದ. ಇನ್ಯಾರದ್ದು ಸುಂದರಮ್ಮನದು, ಕಣಿ ಬೇರೆ ಕೇಳ್ತೀರಾ ಅಂದಳು. ಸೋಮು ಅಯ್ಯೋ ಪೆದ್ದಿ ಅಂತ ಏನೋ ಹೇಳುತ್ತಿರುವಾಗ ಮತ್ತೆ ಬಾಗಿಲು ಸದ್ದಾಯಿತು. ಸೋಮಿ ಬಾಗಿಲು ತೆಗೆದರೆ ಇಬ್ಬರು ಪೋಲೀಸು ನಿಂತಿದ್ದರು. ಅವರು ಸೋಮುನ ನೋಡಿ ಸರ್ ನಮ್ಮ ಸಾಹೇಬರು ನಿಮ್ಮನ್ನು ಅರ್ಜಂಟಾಗಿ ಕರ್ಕೊಂಡು ಬಾ ಅಂತ ಹೇಳಿದಾರೆ ಅಂದಾಗ ಸೋಮಿ ಇದೇನಪ್ಪಾ ಗ್ರಹಚಾರ ಅಂತ ಯೋಚನೆ ಮಾಡುತ್ತಿರುವಾಗ ಅವರಿಬ್ಬರೂ ಬಂದು ಸೋಮುನ ಎಳ್ಕೊಂಡು ಜೀಪಿನಲ್ಲಿ ಕೂರಿಸಿಕೊಂಡು ಹೊರಟೇಹೋದರು. ಸೋಮು ಈ ಇಬ್ಬರು ಪೋಲೀಸರು ಯಾರು, ವರದರಾಜು ಎಲ್ಲಿ ಹೋದರು ಅಂತ ಯೋಚಿಸಿದ. ಪೋಲೀಸ್ ಸ್ಟೇಷನ್ ಬಂದಾಗ ಅವನಿಗೆ ಎರಡು ಅಚ್ಚರಿ ಕಾದಿತ್ತು. ಒಂದು ಅವನ ಮನೆಯಲ್ಲಿ ತುಸು ಹೊತ್ತಿನ ಹಿಂದೆ ಇದ್ದವರೆಲ್ಲಾ ಈಗ ಸ್ಟೇಷನ್ನಿನಲ್ಲೇ ಇದ್ದರು. ಜೊತೆಗೆ ವರದರಾಜುನೂ ಅಲ್ಲೇ ಇದ್ದರು.

ಏನು ನಡೆದಿದೆ ಅನ್ನೋದು ಸೋಮುಗೆ ತಿಳಿದುಹೋಯಿತು. ಅವನು ಇನ್ಸ್‌ಪೆಕ್ಟರ್ ಮುಂದೆ ಕೂತು ಸರ್ ನೀವು ಏನೂ ಪ್ರಶ್ನೆ ಕೇಳಬೇಡಿ. ನಾನೇ ಹೇಳುತ್ತೇನೆ ಅಂದು ಸ್ಟೇಷನ್ನಿನಲ್ಲೇ, ಸಾಹೇಬರ ಟೇಬಲ್ಲಿನಲ್ಲೇ ಇದ್ದ ಕಾಮನಬಿಲ್ಲು ಪತ್ರಿಕೆಯನ್ನು ಬಿಡಿಸಿ ಅದರಲ್ಲಿ ಸೋಮು ಬರೆದಿರುವ  ಸುಂದರಿಯ ಬೆನ್ನು ಹತ್ತಿ ಎನ್ನುವ ಕಾದಂಬರಿ ಪ್ರಕಟವಾಗಿರುವುದನ್ನು ತೋರಿಸಿದ. ಸಾಹೇಬರಿಗೆ ಅಚ್ಚರಿಯಾಯಿತು. ಸರ್. ಅನೇಕ ಅಭಿಮಾನಿಗಳಂತೆ ಇವರೂ ನನ್ನ ಸಾಹಿತ್ಯದ ಅಭಿಮಾನಿಗಳು, ಅದರಲ್ಲೂ ಸುಂದರಿಯ ಬೆನ್ನು ಹತ್ತಿ ಕಾದಂಬರಿಯನ್ನು ಓದಿ ನನಗೆ ಪ್ರತೀವಾರ ಹೇಳುತ್ತಿರುತ್ತಾರೆ. ಇವತ್ತು ಬಂದು ಇದರಲ್ಲಿ ಇರುವ ಸುಂದರಮ್ಮನ ಪಾತ್ರವನ್ನು ಸಾಯಿಸಿಬಿಡಿ. ಆಗ ಕಾದಂಬರಿಗೆ

ಒಂದು ತಿರುವು ಬರುತ್ತೆ. ಜನರಿಗೆ ಕುತೂಹಲವೂ ಹೆಚ್ಚಾಗುತ್ತೆ ಅಂದರು. ಅದನ್ನೇ ಬೆಳಗ್ಗೆ ಎಲ್ಲವೂ ಚರ್ಚೆ ಮಾಡುತ್ತಿದ್ದೆವು. ಒಬ್ಬ ಕಾದಂಬರಿಕಾರನಾಗಿ ಯಾವ ಪಾತ್ರವನ್ನು ಹೇಗೆ ಬೆಳೆಸಬೇಕು, ಹೇಗೆ ಸಾಯಿಸಬೇಕು ಅನ್ನೋದರ ಬಗೆಗೆ ನನ್ನದೇ ಆದ ಕಲ್ಪನೆ ಇರುತ್ತೆ. ಅದಕ್ಕೊಂದು ಚೌಕಟ್ಟೂ ಇರುತ್ತೆ. ನಾವಾಡುವ ಮಾತುಗಳನ್ನು ವರದರಾಜು ಕೇಳಿಸಿಕೊಂಡು ಇವರನ್ನೂ ಬಂಧಿಸಿದ್ದಾರೆ. ನೀವು ಕಳಿಸಿದ ಇಬ್ಬರು ನನ್ನನ್ನೂ ಇಲ್ಲಿಗೆ ಕರೆದುಕೊಂಡು ಬಂದಿದ್ದಾರೆ ಅಂದ. ಇನ್ಸ್‌ಪೆಕ್ಟರ್ ನಕ್ಕು ಹೌದೇನ್ರಿ, ನಾನು ನನ್ನ ಹೆಂಡ್ತಿ ಇಬ್ಬರೂ ನಿಮ್ಮ ಕಾದಂಬರಿನ ಓದ್ತಾ ಇದೀವಿ ಕಣ್ರೀ. ಅವರೆಲ್ಲಾ ಹೇಳಿದ ಹಾಗೆ ನೀವು ಸುಂದರಮ್ಮನನ್ನು ಮುಗಿಸೋದು ಒಳ್ಳೇದು. ಆಗ ಕಾದಂಬರಿಗೆ ಒಂದು ಒಳ್ಳೇ ತಿರುವು ಬರುತ್ತೆ. ನಾನು ಹೇಳ್ತಿದೀನಿ, ನೀವು ಸುಂದರಮ್ಮನನ್ನು ಮುಗಿಸ್ರೀ ಅಂದು ನಕ್ಕರು. ವರದರಾಜು ಆದಿಯಾಗಿ ಎಲ್ಲರೂ ನಿರಾಳವಾಗಿ ನಕ್ಕರು. ನಂತರ ಇನ್ಸ್‌ಪೆಕ್ಟರು ರೀ ಪ್ರಪ್ರಥಮವಾಗಿ ಒಬ್ಬ ಜನಪ್ರಿಯ ಲೇಖಕರು ನಮ್ಮ ಸ್ಟೇಷನ್ನಿಗೆ ಬಂದಿದಾರೆ ಅಂದರೆ ಅವರನ್ನು ಸುಮ್ಮನೆ ಕಳಿಸೋದು ಸಾಧ್ಯವೇ ಅಂದು ಸಿಹಿ ಖಾರ ಕಾಫಿ ಎಲ್ಲ ತರಿಸಿ ಜೊತೆಗೆ ಸೋಮುಗೆ ಸನ್ಮಾನವನ್ನು ಮಾಡುವ ಹೊತ್ತಿಗೆ ಸೋಮಿ ಸ್ಟೇಷನ್ನಿಗೆ ಹೋದ ಸೋಮುಗೆ ಏನಾಯ್ತೋ ಅಂತ ಓಡೋಡಿ ಬಂದಳು. ಅವಳನ್ನೂ ಸೇರಿಸಿ ಸೋಮು ದಂಪತಿಗಳಿಗೆ ಸನ್ಮಾನ ಮಾಡಿದರು. ಎಲ್ಲರಿಗೂ ನಿರಾಳ. ಆದರೂ ಸೋಮಿ ಅಸಮಾಧಾನ ಇನ್ನೂ ಆರಿರಲಿಲ್ಲ. ಸೋಮು ಸ್ನೇಹಿತರಿಗೆ ರೀ ನೀವೆಲ್ಲಾ ಯಾಕ್ರೀ ಒಗಟೊಗಟಾಗಿ ಮಾತಾಡ್ತಿದ್ರಿ. ಕಾದಂಬರಿ ವಿಚಾರ ಅಂತ ತಿಳಿಯಲೇ ಇಲ್ಲ. ಬರೀ ಸುಂದರಮ್ಮನನ್ನು ಮುಗಿಸಿ ಮುಗಿಸಿ ಅಂತ ಸೋಮುಗೆ ಹೇಳ್ತಿದ್ರಿ ಅಷ್ಟೆ. ನಾನು ಕಾಫಿ ತಂದು ಕೊಟ್ಟಾಗಲಾದರೂ ನನಗೆ ಹೇಳಿದ್ರೆ ಈ ತಾಪತ್ರಯ ಎಲ್ಲ ಇರ್ತಲೇ ಇರ್ಲಿಲ್ಲ ಅಲ್ವಾ ಅಂದಳು. ಇನ್ಸ್‌ಪೆಕ್ಟರು ಇರ್ಲಿ ಬಿಡಿ ಮೇಡಂ, ಸೋಮು ಈಗ ನೀವು ಮನೆಗೆ ಹೋಗಿ, ಮೊದಲು ಸುಂದರಮ್ಮನನ್ನು ಮುಗಿಸಿ ಅಲ್ಲೀವರೆಗೂ ನಿಮ್ಮನೆಯವರು ನಿಮಗೆ ತೊಂದರೆ ಕೊಡೋಲ್ಲ ಅಂದು ನಕ್ಕರು. ಎಲ್ಲರೂ ನಕ್ಕು ನಿರಾಳರಾಗಿ ಮನೆಗೆ ಹೊರಟರು. ಆಗ ಸೋಮು ಇರು ಒಂದು ಚೂಪಾಗಿರೋ ಚಾಕು ತಗೊಂಡು ಹೋಗೋಣ ಅಂದ. ಯಾಕ್ರೀ ಸುಂದರಮ್ಮನನ್ನು ಮುಗಿಸೋಕಾ ಅಂತ ಕೇಳಿದಳು ಸೋಮಿ. ಅಲ್ಲ ಕಣೆ, ಮನೇಲಿರೋ ಚಾಕು ಮೊಂಡಾಗಿದೆ, ನಿನ್ನ ಹಾಗೆ, ಬೆಂಡೇಕಾಯಿ ಹೆಚ್ಚೋಕೇ ಆಗ್ತಿಲ್ಲ ಅಂದು ನಕ್ಕು ಸೋಮಿ ಭುಜ ಹಿಡಿದು ನಡೆದ. ■

**ಜಸ್ಟ್ ಬಿಗ್ ಬಾಸ್ಕೆಟ್..** –ಸುಮನಾ

"..ಆಯ್ತೇನೋ ಗುಂಡಾ ಎಷ್ಟು ಹೊತ್ತು??ಇನ್ನೂ ರೆಡಿಯಾಗೋಕೆ. ಟೈಂ..ಆಯ್ತು ಅಪ್ಪ, ಅಣ್ಣ, ತಂಗಿ ಎಲ್ಲಾ ಕಾಯ್ತಾ ಇದಾರೆ..ಅಂದ್ರು ಅಮ್ಮ..

ಆಯ್ತಾಯ್ತು "ಜಸ್ಟ್ ಬಿಗ್ ಬಾಸ್ಕೆಟ್ "ಅಷ್ಟೇ ಅಂದ ಗುಂಡ..ಅದೇನೋ ಹಾಗಂದ್ರೇ..ನಾನು ಯಾವ ಬಿಗ್ ಬಾಸ್ಕೆಟ್ಗೂ ಆರ್ಡರ್ ಕೊಟ್ಟಿಲ್ಲ, ಈಗ ಹೊರಡಬೇಕು ಅಷ್ಟೇ ಅಂದ್ರು.. ಅಯ್ಯೋ ಅಮ್ಮ, ಅಷ್ಟೂ ಗೊತ್ತಾಗಲ್ವಾ ಜಸ್ಟ್ ಬಿಗ್ ಬಾಸ್ಕೆಟ್ ಅಂದ್ರೆ. ಜಸ್ಟ್".ಹತ್ತು ನಿಮಿಷ "ಅಂತ ಅಷ್ಟೇ..

ಟಿ.ವಿ.ನಲ್ಲಿ ನೋಡು ಬರೀ ಅದೇ ಜಾಹೀರಾತು..ಹತ್ತು ನಿಮಿಷಕ್ಕೆ ಹೊಸ ಹೆಸರೇ "ಬಿಗ್ ಬಾಸ್ಕೆಟ್ "ಅಂತ ಬರ್ತಿರುತ್ತೆ..ಅಂತ ಗುಂಡ ಅಂದಾಗ ,ವಾವ್ ಗುಂಡ, ಚೆನ್ನಾಗಿ ಹೇಳ್ದೆ ನೋಡು ಅಂತ ಬಿದ್ದು ಬಿದ್ದೂ ನಕ್ಕರು..

# ನಿಮಗೆ ಮೊಮ್ಮಗಳಿದ್ದಾಳೆಯೇ ?

ಡಾ. ಸಿ.ಕೆ. ರೇಣುಕಾರ್ಯ

ಕೃಷ್ಣಯ್ಯಂಗಾರ್‌ಗೆ ಇಬ್ಬರು ಹೆಣ್ಣು ಮಕ್ಕಳು. ಇಬ್ಬರಿಗೂ ಮದುವೆಯಾಗಿ ಚೆನ್ನಾಗಿ ಸೆಟ್ಲಾಗಿದ್ದಾರೆ. ಒಬ್ಬರನ್ನು ಬೆಂಗಳೂರಿಗೆ ಕೊಟ್ಟಿದ್ದಾರೆ. ಇನ್ನೊಬ್ಬರು ಅಮೆರಿಕೆಯಲ್ಲಿದ್ದಾರೆ. ಇಬ್ಬರಿಗೂ ಒಬ್ಬೊಬ್ಬರು ಹೆಣ್ಣು ಮಕ್ಕಳು. ಇದರ ಬಗ್ಗೆ ಕೃಷ್ಣಯ್ಯಂಗಾರ್ ಹೆಂಡತಿ ಆಂಡಾಳಮ್ಮನಿಗೆ ಬಹಳ ಸಂಭ್ರಮ. ಈ ಇಬ್ಬರು ಮೊಮ್ಮಕ್ಕಳ ವಿಷಯವೇ ಅವರಿಗೆ ಸರ್ವಸ್ವ. ಬಂದವರು, ಹೋದವರು, ಪರಿಚಯದವರು, ಹಾಲು ಹಾಕುವವರು, ಎಲೆಕ್ಟ್ರಿಸಿಟಿ, ಪೇಪರ್ ಮತ್ತು ನೀರಿನ ಬಿಲ್ ಕೊಡುವವರು ಎಲ್ಲರಿಗೂ ಅವರ ಮೊಮ್ಮಕ್ಕಳ ವಿಷಯವನ್ನು ವಿವರವಾಗಿ ಹೇಳುತ್ತಿದ್ದರು. 2 ವರ್ಷದ ಅವರ ಮೊಮ್ಮಕ್ಕಳು ಎಷ್ಟು ಮುದ್ದಾಗಿದ್ದಾರೆ, ಅವರ ಚಟುವಟಿಕೆಗಳೇನು ಎನ್ನುವುದನ್ನು ಸ್ವಲ್ಪವೂ ಬೇಜಾರಿಲ್ಲದೆ, ಪದೇ ಪದೇ ಎಲ್ಲರಿಗೂ ವಿವರಿಸುತ್ತಿದ್ದರು. ಕೃಷ್ಣಯ್ಯಂಗಾರರಿಗಂತೂ ಇದು ದಿನಂಪ್ರತಿಯ ವ್ಯವಹಾರವಾದ್ದರಿಂದ ಮತ್ತು ಇದರ ಬಗ್ಗೆಯೆಲ್ಲಾ ತುಂಬಾ ಸಾಧಾರಣ ಆಸಕ್ತಿ ಇದ್ದುದರಿಂದ, ಅಷ್ಟಾಗಿ ಇದಕ್ಕೆ ಅವರು ಗಮನ ಕೊಡದೆ, ಎಲ್ಲ ಮೊಮ್ಮಕ್ಕಳಂತೆ ಇವರು ಎನ್ನುವ ಧೋರಣೆಯಲ್ಲಿದ್ದರು. ಅವರಿಗೆ, ಆಂಡಾಳಮ್ಮ ಮೊಮ್ಮಕ್ಕಳ ಶೃತಿ ಕೇಳಿ ಕೇಳಿ ನಿಜವಾಗಿ ಬೇಜಾರಾಗಿತ್ತು. ಅವರು ಅನೇಕ ಬಾರಿ 'ಆಂಡಾಳು, ಎಷ್ಟು ಜನರಿಗೆ ಎಷ್ಟು ಬಾರಿ ನಿನ್ನ ಮೊಮ್ಮಕ್ಕಳ ಪ್ರವರ ಹೇಳುತ್ತೀ !' ಎಂದು ಕೇಳುತ್ತಿದ್ದರು. ಆಂಡಾಳಮ್ಮ ಮಾತ್ರ "ಸುಮ್ಮನಿರಿ, ನಿಮಗೆ ಗಂಡಸರಿಗೆ ಏನು ಗೊತ್ತಾಗತ್ತೆ ? ನನ್ನ ಮೊಮ್ಮಕ್ಕಳು, ನನ್ನ ಸಂತೋಷ ಎಂದು ಹೇಳಿ ಕೃಷ್ಣಯ್ಯಂಗಾರರ ಬಾಯಿ ಮುಚ್ಚಿಸುತ್ತಿದ್ದರು".




ಈ ಮಧ್ಯೆ ಬೆಂಗಳೂರಿನಲ್ಲಿರುವ ಮಗಳಿಗೆ, ಇನ್ನೊಂದು ಹೆಣ್ಣು ಮಗುವಾಯಿತು. ಆಂಡಾಳಮ್ಮನಿಗೆ ಸಂಭ್ರಮವೋ ಸಂಭ್ರಮ. ಬಾಣಂತನಕ್ಕೆಂದು ಬೆಂಗಳೂರಿಗೆ ಮಗುವಾದ ತಕ್ಷಣವೇ ಹೋದರು. ನಂತರ ಕೃಷ್ಣಯ್ಯಂಗಾರರಿಗೆ ಕರೆ. ಬೆಂಗಳೂರಲ್ಲೇ ಬಂದು ಒಂದು ತಿಂಗಳು ಇರಬೇಕೆಂದು ಅಪ್ಪಣೆ.

ಕೃಷ್ಣಯ್ಯಂಗಾರರು, ಮೈಸೂರಿನಿಂದ ಬೆಂಗಳೂರಿಗೆ ಟ್ರೈನಿನಲ್ಲಿ ಸೆಕೆಂಡ್ ಎ.ಸಿಗೆ

ರಿಸರ್ವ್ ಮಾಡಿಸಿಕೊಂಡಿದ್ದರು. ಅವರು ಟ್ರೈನ್ ಹತ್ತಿದಾಗ ಒಂದರ ಹಿಂದೆ ಒಂದು, ಎರಡೆರಡು ಸೀಟಿನ ಕಂಪಾರ್ಟ್‌ಮೆಂಟ್ ಅದು. ಇವರು ರಿಸರ್ವ್ ಮಾಡಿದ್ದ ಸೀಟಿನ ಪಕ್ಕ ಒಬ್ಬರು ಹೆಂಗಸು ಕುಳಿತಿದ್ದರು. ಈ ಸೀಟುಗಳ ಹಿಂದೆ, ಅದರ ಹಿಂದಿನ ಎರಡೆರಡು ಸೀಟುಗಳಲ್ಲಿ ಒಬ್ಬೊಬ್ಬರೆ ಹೆಂಗಸರು ಕುಳಿತಿದ್ದರು. ಕೃಷ್ಣಯ್ಯಂಗಾರರು, ತಮ್ಮ ಸೀಟಿನಲ್ಲಿ ಕೂರುವುದಕ್ಕೆ ಮುಂಚೆ ಆ ಹೆಂಗಸನ್ನು ಕೇಳಿದರು. "ನಿಮಗೆ ಮೊಮ್ಮಗಳಿದ್ದಾಳೆಯೇ ?" ಅದಕ್ಕೆ ಆ ಹೆಂಗಸು "ಇದ್ದಾಳೆ ತುಂಬಾ ಮುದ್ದಾದ ಹುಡುಗಿ, ತುಂಬಾ ಚೂಟಿ, ಅಜ್ಜಿಯೆಂದರೆ ಪ್ರಾಣ. ಹೀಗೆ ಮುಂದುವರಿಸಿದರು". ಕೃಷ್ಣಯ್ಯಂಗಾರ್, ತಮಗೆ ರಿಸರ್ವ್ ಆಗಿದ್ದ ಸೀಟಿನಲ್ಲಿ ಕೂರಲಿಲ್ಲ. ಒಬ್ಬರೆ ಕುಳಿತಿದ್ದ ಎರಡನೆಯ ಸಾಲಿನಲ್ಲಿದ್ದ ಆ ಹೆಂಗಸನ್ನು ಕೇಳಿದರು. "ನಿಮಗೆ ಮೊಮ್ಮಗಳಿದ್ದಾಳೆಯೇ ?" ಆಕೆ ಹೇಳಿದಳು. "ಓ ಹೌದು, ಮೂರು ವರ್ಷದವಳು, ತುಂಬಾ ಬುದ್ಧಿವಂತೆ, ಅವಳಿಗೆ ಎಲ್ಲಾ ದೇಶದ ಮುಖ್ಯ ಪಟ್ಟಣಗಳ ಹೆಸರು ಈಗಲೇ ಗೊತ್ತು. ಲಿಮ್ಕಾ ಬುಕ್ಕಿಗೆ ಅವಳ ಹೆಸರು ಹೋಗುತ್ತದೆ ....."

ತಮ್ಮ ಮಾತನ್ನು ನಿಲ್ಲಿಸದೇ ಒಂದೇ ಸಮನೆ ಮುಂದುವರಿಸಿದರು. ಕೃಷ್ಣಯ್ಯಂಗಾರ್ ತಕ್ಷಣ ಮೂರನೇ ಸಾಲಿಗೆ ಹೋಗಿ ಅಲ್ಲಿರುವ ಹೆಂಗಸನ್ನು ಕೇಳಿದರು. "ನಿಮಗೆ ಮೊಮ್ಮಗಳಿದ್ದಾಳೆಯೇ ?" ಅವರು ಹೇಳಿದರು. "ಮೊಮ್ಮಗಳೇ ? ನನಗೆ ಮದುವೆಯೇ ಆಗಿಲ್ಲ. ಇನ್ನು ಮೊಮ್ಮಗಳೆಲ್ಲಿ ಬಂತು ?"


ತಕ್ಷಣ ಕೃಷ್ಣಯ್ಯಂಗಾರ್ ಆ ಹೆಂಗಸಿನ ಪಕ್ಕದ ಸೀಟಿನಲ್ಲಿ ಆಸೀನರಾದರು. ಯಾರ ಮೊಮ್ಮಗಳ ಸ್ತುತಿಯೂ ಇಲ್ಲದೆ ಬೆಂಗಳೂರನ್ನು ನಿಶ್ಚಿಂತೆಯಾಗಿ ಸೇರಿದರು. ಮದ್ದೂರಿನಲ್ಲಿ ತಮ್ಮ ಜೊತೆಗೆ ಆ ಹೆಂಗಸಿಗೂ ಮದ್ದೂರೊಡೆ ಕೊಡಿಸಿದರು.

ನಿಮಗೆ ಚೂಟಿಯಾದ ಮೊಮ್ಮಗಳಿದ್ದಾಳೆಯೇ ? ಕೃಷ್ಣಯ್ಯಂಗಾರರಿಗೆ ಹೇಳೋಣ!

■

## ಬೊಜ್ಜು ಕರಗಿಸೋದು

ತೀರಾ ನಲವತ್ತಕ್ಕೇ ಬಂದು ಅಮರಿಕೊಂಡ ಬೊಜ್ಜನ್ನು ಕರಗಿಸೋಕೆ ಸೋಮು ಇನ್ನಿಲ್ಲದ ಪ್ರಯತ್ನಪಡುತ್ತಿದ್ದ. ಏನು ಮಾಡಿದರೂ ಒಂದು ಇಂಚೂ ಕರಗಿರಲಿಲ್ಲ. ಅನೇಕಾನೇಕ ವೈದ್ಯರ ಬಳಿ ಹೋಗಿ ಅವರು ಹೇಳಿದ್ದನ್ನೆಲ್ಲಾ ಮಾಡಿದ. ಪಥ್ಯ, ವ್ಯಾಯಾಮ ಇತ್ಯಾದಿಗಳು ನಿರಂತರವಾಗಿ ನಡೆದವು. ಊರಿಗೆ ಹೊಸದಾಗಿ ಒಬ್ಬರು ವೈದ್ಯರು ಬಂದಿದ್ದಾರೆ ಎಂದು ತಿಳಿದು ಅವರ ಬಳಿ ಹೋಗಿ ಸೋಮು ತನ್ನ ಅಳಲನ್ನು ತೋಡಿಕೊಂಡ. ಅದಕ್ಕೆ ವೈದ್ಯರು ಕೆಲವೊಂದು ಸಲಹೆಗಳನ್ನು ನೀಡಿ ಕಡೆಗೆ ಬೊಜ್ಜು ಕರಗಿಸುವ ವಿಚಾರದಲ್ಲಿ ಬೇಜಾರು ಮಾಡ್ಕೊಬೇಡಿ. ನಿರಂತರ ಪ್ರಯತ್ನ ಅಗತ್ಯ. ನೀವು ಮಾಡಿರುವ ಆಸ್ತಿಯನ್ನು ಕರಗಿಸೋಕೆ ನಿಮಗೆ ಬೇಕಾದಷ್ಟು ಜನ ಸಿಗಬಹುದು. ಅದರೆ ನೀವು ಸಂಪಾದಿಸಿದ ಬೊಜ್ಜನ್ನು ನೀವೇ ಕರಗಿಸಬೇಕು ಎಂದು ಭುಜ ಕುಣಿಸಿ ನಕ್ಕಾಗ ಸೋಮು ಯಾವಾಗ ಕರಗುತ್ತೊ ಏನು ಕಥೆನೋ ಅಂದುಕೊಂಡು ಬಂದ.


ಚಿಂತನ
ಮಂಥನ
ವಿನೂತನ !!!
ವಿಶುಯಲ್ಸ್ : ರಾಂಕಿ



# ಕೇಳಿಸದಿರುವ ಲಕ್ಕಿಗಳು.....

ಎಚ್.ಗೋಪಾಲಕೃಷ್ಣ

ನನಗೊಬ್ಬ ಗೆಳೆಯ ಇದ್ದಾನೆ, ನಾನು ಕೆಲಸಕ್ಕೆ ಸೇರಿದ ದಿನದಿಂದ ಗೊತ್ತಿರುವವನು. ಇಷ್ಟು ದೀರ್ಘ ಅವಧಿಯಲ್ಲಿ ನೆನಪಿನಿಂದ ಅದೆಷ್ಟು ಸಾವಿರ ಜನ ಮರೆಯಾದರೋ ಅವರ ಲೆಕ್ಕ ಇಲ್ಲ. ಸುಮಾರು ಸಲ ಹಿಂದೆ ನನ್ನ ಸಂಗಡ ಹಗಲೂ ರಾತ್ರಿ ಇದ್ದವರೂ ಸಹ ಕೊಂಚ ಕಾಲದ ನಂತರ ಎದುರು ಬಂದು ನಿಂತು ನಾನ್ಯಾರು ಗೊತ್ತಾ ಅಂತ ಕೇಳಿಬಿಟ್ಟರು ಅಂದರೆ ನಾನು ಖಂಡಿತ ತಬ್ಬಿಬ್ಬು ಹೊಡೆದು ಹೋಗ್ತೀನಿ. ಅವರು ಯಾರು ಅಂತ ನೆನಪಾಗದೆ ನನ್ನ ವಿಧಿಯನ್ನು, ದೈವವನ್ನು ಮತ್ತು ನನ್ನನ್ನೇ ಚೆನ್ನಾಗಿ ಬೈದುಕೊಳ್ಳುತ್ತೇನೆ. ಇಂತಹ ಮನೋಭಾವದ ನನ್ನಲ್ಲಿ ಯಾರೋ ಒಬ್ಬ ಇನ್ನೂ ಪಟ್ಟಾಗಿ ಕುಳಿತಿದ್ದಾನೆ ಎಂದರೆ ಅವನ ಹೆಚ್ಚುಗಾರಿಕೆ ಏನು?ಇವನು ಯಾಕೆ ನನ್ನ ತಲೆಯಲ್ಲಿ ಇನ್ನೂ ಯಾಕೆ ಕೂತಿದ್ದಾನೆ ಎಂದು ಸಾವಿರ ಸಲ ಯೋಚಿಸಿ ಲೆಕ್ಕ ಪಕ್ಕ ಮಾಡಿದ್ದೇನೇ. ಈ ಸ್ನೇಹಿತನ ಅಥವಾ ಶತ್ರುವಿನ ಸ್ಪೆಶಾಲಿಟಿ ಏನಿರಬಹುದು ಎಂದು ಹಲವು ಬಾರಿ ಚಿಂತಿಸಿದ್ದೇನೆ. ರಿಸರ್ಚ್ ಸಹ ಮಾಡಿದ್ದೇನೆ.

ಈಗ ನನ್ನ ರಿಸರ್ಚ್ ಬಗ್ಗೆ...

ಇವನು ಒಂದು ರೀತಿ ವಿಚಿತ್ರದವನು. ಎದುರು ಬರ್ತಾ ಇರ್ತಾನಾ? ಇದ್ದಕ್ಕಿದ್ದ ಹಾಗೆ "ಸ್ಟಾಪ್" ಅನ್ನುತ್ತಾನೆ. ನೀವು ಸ್ಟಾಪ್ ಮಾಡುತ್ತೀರಿ.

"ಐ ವಿಲ್ ಟೆಕ್ ಒನ್ ಮಿನಿಟ್ ..."ಅನ್ನುತ್ತಾನೆ.

"ಯು ನೋ ಮಾರ್ಕಿಪೋಲೋ ..."ಅಂತ ಕೇಳುತ್ತಾನೆ.

ಸಹಜವಾಗಿ ನಿಮಗೆ ಅವನು ಕೇಳಿದ ಮಾರ್ಕಿಪೋಲೋ ಗೊತ್ತಿರಲ್ಲ. ಗೊತ್ತಿಲ್ಲ ಅಂತ ತಲೆ ಆಡಿಸುತ್ತೀರಿ.

"ವೈಟ್ ಐ ವಿಲ್ ಟೆಲ್ ಯು ಅಬೌಟ್ ಹಿಂ ..."ಅಂತ ಒಂದು ಗಂಟೆ ನಿಮಗೆ ಉಸಿರು ಆಡಲು ಅವಕಾಶ ಕೊಡದೇ ಸಿಗಿದು ಹಾಕಿ ಬಿಡ್ತಾನೆ.

ಅದರ ಮಾರನೇ ದಿವಸವೋ ಅಥವಾ ಅದರ ಮರುದಿನ ಮತ್ತೆ ಅವನ ಭೇಟಿ ಆಗುತ್ತೆ.

ಎದುರು ಬರ್ತಾ ಇರ್ತಾನಾ? ಇದ್ದಕ್ಕಿದ್ದ ಹಾಗೆ ಸ್ಟಾಪ್ ಅನ್ನುತ್ತಾನೆ. ನೀವು ಸ್ಟಾಪ್ ಮಾಡುತ್ತೀರಿ.

"ಐ ವಿಲ್ ಟೆಕ್ ಒನ್ ಮಿನಿಟ್ ..."ಅನ್ನುತ್ತಾನೆ.

"ಯು ನೋ ಬೆಟರ್ ಫ್ಲೈ ..."ಅಂತ ಕೇಳುತ್ತಾನೆ.

ಸಹಜವಾಗಿ ನಿಮಗೆ ಅವನು ಕೇಳಿದ ಬೆಟರ್ ಫ್ಲೈ ಗೊತ್ತಿರಲ್ಲ. ಗೊತ್ತಿಲ್ಲ ಅಂತ ತಲೆ ಆಡಿಸುತ್ತಿರಿ.

"ವೈಟ್ ಐ ವಿಲ್ ಟೆಲ್ ಯು ಅಬೌಟ್ ಹಿಂ ...."ಅಂತ ಒಂದು ಗಂಟೆ ನಿಮಗೆ ಉಸಿರು ಆಡಲು ಅವಕಾಶ ಕೊಡದೇ ಸಿಗಿದು ಹಾಕಿ ಬಿಡ್ತಾನೆ...

ಮಾರನೇ ದಿವಸ ಸಿಕ್ತಾನೆ. ಇದ್ದಕ್ಕಿದ್ದ ಹಾಗೆ ಸ್ಟಾಪ್ ಅನ್ನುತ್ತಾನೆ. ನೀವು ಸ್ಟಾಪ್ ಮಾಡುತ್ತೀರಿ.

"ಐ ವಿಲ್ ಟೇಕ್ ಒನ್ ಮಿನಿಟ್...." ಅನ್ನುತ್ತಾನೆ.

"ಯು ನೋ ಗುಲ್ಕೇಟ್ ಶಾ ..."ಅಂತ ಕೇಳುತ್ತಾನೆ....

ನೀವು ಎಂದಿನ ಹಾಗೆ ಗೊತ್ತಿಲ್ಲ ಅಂತ ತಲೆ ಆಡಿಸುತ್ತೀರಿ.

ಜೇಬಿನಿಂದ ಒಂದು ಕಂತೆ ಪೇಪರ್ ತೆಗೆಯುತ್ತಾನೆ. ಮೊದಲನೇ ಪುಟದಿಂದ ಹಿಡಿದು ಕೊನೆ ಪುಟದ ತನಕ ಗುಲ್ಕೇಟ್ ಬಗ್ಗೆ ಹೇಳುತ್ತಾನೆ. ಕೊನೆಯಲ್ಲಿ ಒಂದು ಷರಾ ಈ ಎಲ್ಲಾ ಮೀಟಿಂಗ್ ನಂತರ ಇದ್ದೇ ಇರುತ್ತೆ. ಅದೇನು ಅಂದರೆ ಅವರೆಲ್ಲಾ ಇಂಗ್ಲಿಷ್ ನವರು, ನಾವು ಇಂಡಿಯನ್ಸ್ ದಡ್ಡರು. ಅವರಿಂದ ನಾವು ಕಲಿಯಬೇಕಾದ್ದು ಬೇಕಾದಷ್ಟು ಇದೆ.. ಇದು ಝಿಸ್ಟ್.




ಇದು ಪ್ರತಿದಿವಸ ದಿವಸಕ್ಕೆ ತಲಾ ಮೂರು ಸಲದ ಹಾಗೆ ಒಂದೋ ಎರಡೋ ವರ್ಷ ಸತತವಾಗಿ ನಡೆದರೆ ನೀವೇನು ಮಾಡ್ತೀರಿ?

ನಾನೂ ಅದನ್ನೇ ಮಾಡುತ್ತಿದ್ದೆ. ದೂರದಲ್ಲಿ ಅವನನ್ನು ನೋಡಿದರೆ ಸಾಕು, ಪಕ್ಕದ ರಸ್ತೆಗೆ ಓಡಿ ಬಿಡ್ತಾ ಇದ್ದೆ. ಅವನು ಅಲ್ಲಿಗೂ ಅಟ್ಟಿಸಿಕೊಂಡು ಬರೋನು. ಯಾವದಾದರೂ ಕಾಂಪೌಂಡ್ ಹಾರಿ ಅವಿತು ಕೊಳ್ತಾ ಇದ್ದೆ. ಅವನು ಹೋದ ಅರ್ಧಗಂಟೆ ನಂತರ ಹೈಡ್ ಔಟ್ ನಿಂದ ಆಚೆ ಬಂದು ಅವನೆಲ್ಲೂ ಕಾಣಿಸುತ್ತಿಲ್ಲ ಅಂತ ಕನ್ಫರ್ಮ್ ಮಾಡಿಕೊಂಡು ಮುಂದೆ ಹೆಜ್ಜೆ ಇಡ್ತಾ ಇದ್ದೆ.

ಇಷ್ಟು ಪ್ರಶಾರಿನ ನನಗೂ ಮೊನ್ನೆ ನನ್ನ ಅದೃಷ್ಟ ಕೈ ಕೊಟ್ಟಿತು. ಅದು ಆಗಿದ್ದು ಹೀಗೆ..

ನನ್ನ ಪಾಡಿಗೆ ನಾನು ನಮ್ಮ ಗಲ್ಲಿನಲ್ಲಿ ಹೋಗ್ತಾ ಇದ್ದೇನೆ, ಯಾವ ನಾಯಿ ಕಣ್ಣಿಗೂ ನಾನು ಬಿದ್ದಿಲ್ಲ, ಯಾವುದೂ ಈಗ ಅಟ್ಟಿಸಿಕೊಂಡು ಬರಲ್ಲ.... ಅಂತ ಖುಷಿಯಾಗಿ ದೀರ್ಘವಾಗಿ ಉಸಿರು ಎಳೆದುಕೊಂಡು ತಲೆ ಎತ್ತಿ ಮೂಗನ್ನು ಭೂಮಿಗೆ ಸಮಾನಾಂತರವಾಗಿ ಇಟ್ಟುಕೊಂಡು ಉಚ್ವಾಸ ನಿಶ್ವಾಸ ಮಾಡಿಕೊಂಡು ಜಗತ್ತು ಎಷ್ಟು ಸುಂದರವಾಗಿದೆ, ಯಾವಾಗಲೂ ಹೀಗೇ ಇರಲಿ, ಸರ್ವ ಜನಾಂಗದ ಶಾಂತಿಯ ತೋಟ ವಾಗಿರಲಿ ಅಂತ ಜಗತ್ತನ್ನು ಬಹಳ ಅಪರೂಪಕ್ಕೆ ಇಷ್ಟ ಪಟ್ಟು ಒಂದು ಮೀಟರ್ ಉದ್ದದ ಹದಿನೈದು ಇಪ್ಪತ್ತು ಹೆಜ್ಜೆ ಹಾಕಿದ್ದೆ.

"ಏ ಏ ಸ್ಟಾಪ್ ಸ್ಟಾಪ್ ಸ್ಟಾಪ್ ಮ್ಯಾನ್...' ಎನ್ನುವ ಹಿಂದೆ ಎಲ್ಲೋ ಪರಿಚಿತ

ವಾಗಿದ್ದ ದನಿ ಕಿವಿಗೆ ಅಪ್ಪಳಿಸ ಬೇಕೇ? ನಿಮ್ಮ ಊಹೆ ಸರಿ, ಅದೇ ನನ್ನ ಹಿತ ಚಿಂತಕ ಹಿಂದೆ ಬರ್ತಾ ಇದ್ದ. ನನ್ನನ್ನು ನೋಡಿದ. ಅವನಿಗೆ ಕಳೆದುಹೋದ ಕರು ಸಿಕ್ಕಿದರೆ ಅದರ ಅಮ್ಮನಿಗೆ ಆಗುವ ಸಂತೋಷ ಆಗಿತ್ತು...!

ನನ್ನನ್ನು ನಿಲ್ಲಿಸಿದ.

"ಹೌ ಆರ್ ಯು..." ಅಂದ.

"ಎಷ್ಟು ವರ್ಷ ಆಗಿತ್ತು ನಿನ್ನ ನೋಡಿ.. "ಅಂದ.

"ಡೂ ಯು ನೋ ಗಾರ್ಮೆಂಟ್ ಹಾರ್ಡ್..."ಅಂತ ಕೇಳಿದ.

ಸತ್ಯವಾಗಲು ನಿಜ ಹೇಳ್ತೀನಿ ನನಗೆ ಈ ಗಾರ್ಮೆಂಟ್ ಹಾರ್ಡ್ ಅಂದರೆ ಏನೂಂತ ಗೊತ್ತಿಲ್ಲ. ಅವನು ಹೇಳಿದ್ದು ನನಗೆ ಸರಿಯಾಗಿ ಕೇಳಿಸಿತಾ ಅಂತ ಡೌಟ್ ಬರಬೇಕೇ? ಇಂತಹ ಡೌಟು ಮುಂದೆ ನನ್ನನ್ನ ಹೇಗೆ ಕಾಪಾಡಿತು ಅಂತ ನಿಮಗೆ ವಿವರಿಸಬೇಕು. ಈಗ ಅದಕ್ಕೇ ಬರ್ತಾ ಇದೀನಿ.

"ಏನು ನೀನು ಕೇಳಿದ್ದು ..."ಅಂತ ಅವನ ಬಾಯಿ ಹತ್ತಿರ ನನ್ನ ಕಿವಿ ಇಟ್ಟೆ.

"ಡೂ ಯು ನೋ ಗಾರ್ಮೆಂಟ್ ಹಾರ್ಡ್..." ಅಂತ ಮತ್ತೆ ಕೇಳಿದ.

"ಏನೂ....."ಅಂದೆ.

ಇದು ಈ ಪದವೇ ಈ ಎರಡಕ್ಷರದ ನಾಲ್ಕು ಮಾತ್ರೆಗಳ ಪದವೇ ನನ್ನ ಮುಂದಿನ ಲೈಫ್‌ನಲ್ಲಿ ಟರ್ನಿಂಗ್ ಪಾಯಿಂಟ್ ಆಗಿದ್ದು.

"ಹೋ... ಕಿವಿ ಕೇಳಲ್ಲವಾ.. ಕೆಪ್ಪ ಆಗಿಬಿಟ್ಟೆಯಾ....."ಅಂದ!

ಬ್ಲೆಸಿಂಗ್ ಇನ್ ಡಿಸ್ ಗೈಸ್ ಅಂತಾರೆ ನೋಡಿ ಅದು ನೆನಪಿಗೆ ಆ ಕ್ಷಣ ಬರಬೇಕೇ ?

ಮತ್ತೆ "ಏನೂ................"ಅಂತ ದೀರ್ಘ ರಾಗ ಎಳೆದೆ.

"ಪೂರ್ತಿ ಢಮಾರ್ ಆಯ್ತಾ.... ಹಹಹ..."ಅಂದ.

"ಎಷ್ಟು ದಿವಸ ಇಂದ ಹೀಗೆ....?"ಅಂದ.

ನಾನು ಇವನು ಹೇಳ್ತಾ ಇದಾನೆ ಅಂತ ಅರ್ಥ ಆಗದೇ ಮತ್ತೆ "ಏನೂ..." ಅಂದೆ.

"ಸರಿ ಫುಲ್ ಕೆಪ್ಪಾ ಆಗ್ಬಿಟ್ಟಿದ್ದೀ.... ರೆಫಾರ್ಡ್ ಗೋವೆಸ್ ಗೊತ್ತಾ...?"

"ಏನೂ... "ಅಂದೆ.

"ಹೋಗಿ ಫಸ್ಟ್ ಕಿವಿ ಚೆಕ್ ಮಾಡಿಸ್ಕೋ. ನನ್ನ ಹೆಂಡತಿಗೂ ಇದೇ ಪ್ರಾಬ್ಲಮ್ಮು. ಕೃಷ್ಣ ಪ್ರಸಾದ್ ಗೆ ತೋರಿಸಿದೆ. ಎಪ್ಪತ್ತೆಂಟು ಸಾವಿರ ಮೇಷಿಣಿಗೆ...."ಅಂದ.

ಪಿಳಿ ಪಿಳಿ ಕಣ್ಣು ಬಿಡ್ತಾ ಅವನು ಏನು ಹೇಳ್ತಾ ಇದಾನೆ ಅಂತ ಥಿಂಕ್ ಮಾಡ್ತಾ ಇದ್ದೆ. ಯಾವ ಮೆಶಿನ್‌ಗೆ ಅಷ್ಟೊಂದು ದುಡ್ಡು ಅಂತ ತಲೆ ಒಳಗೆ ಬ್ರೇನು ಲೆಕ್ಕ ಹಾಕ್ತಾ ಇತ್ತು.

ಅವನು ಮುಂದುವರೆಸಿದ

"ಕಿವಿ ಕೆಪ್ಪು ಅಂದಕೂಡಲೇ ಡಾಕ್ಟರ್ ಹತ್ತಿರ ಹೋಗಿ ಬಿಡಬೇಕು.. ಕಿವಿ ತೋರಿಸಿ ಮೆಶಿನ್ ಹಾಕಿಸಿಕೊ ಬೇಕು.. ಇಲ್ಲ ಅಂದರೆ ಮಿಕ್ಕವರಿಗೆಲ್ಲ ಎಷ್ಟು ತೊಂದರೆ

ನೋಡು...."ಅಂತ ಒಂದು ಗಂಟೆ ನನಗೆ ಕೇಳಿಸುತ್ತಾ ಇದೆಯೋ ಇಲ್ಲವೋ ಅನ್ನುವ ಚಿಂತೆ ಇಲ್ಲದೆ ಕೊರೆದ, ಕೊರೆದ ಮತ್ತು ಕೊರೆದ. ಅವನು ಉಸಿರು ತೆಗೆದು ಕೊಳ್ಳಲು ಮೂರು ಸೆಕೆಂಡ್ ಮಾತು ನಿಲ್ಲಿಸಿದ ನೋಡಿ, ಆಗ

"ಏನು ನೀನು ಹೇಳಿದ್ದು....?" ಅಂದೆ.

"ಹೋಗು ಗೋಪಾಲ್, ಮೊದಲು ಕೃಷ್ಣ ಪ್ರಸಾದ್ ಹತ್ರ ಹೋಗು ಕಿವಿ ತೋರಿಸು. ಮೆಶಿನ್ ಹಾಕ್ಕೊ ಕಿವಿಗೆ...

ನಿನ್ನಿಂದ ಎಷ್ಟು ತೊಂದರೆ ನೋಡು ನಮಗೆಲ್ಲ. ಎಷ್ಟು ಜೋರಾಗಿ ಕಿರುಚಬೇಕು ನಿಮ್ಮಂತಹವರ ಹತ್ತಿರ...."

ಅವನ ಮಾತು ಮುಗಿಯೂವರೆಗೆ ಕಾದೆ.

"ಲೂಸ್ ಲಚ್ಚೀನಾರಾಯಣ. ಒಂದು ಹೇಳ್ತೀನಿ ಕೇಳು, ಮೊದಲು ಕೇಳಿಸಿಕೊ, ಆಮೇಲೆ ನಿನ್ನ ಮಾತು...."ಅವನ ಹೆಸರು ಲಚ್ಚೀನಾರಾಯಣ. ಫುಲ್ ಲೂಸ್ ಅಂತ ನಾವುಗಳು ಲೂಸ್ ಲಚ್ಚೀನಾರಾಯಣ ಅಂತ ಕೂಗುತ್ತಾ ಇದ್ದೇವೆ.

ಲಚ್ಚೀನಾರಾಯಣ ಡಂಬ್ ಹೊಡೆದ. ಮೊದಲಿಗೆ ಜೀವನದಲ್ಲಿ ಮೊದಲ ಬಾರಿಗೆ ಒಬ್ಬ ಅವನನ್ನು ಲೂಸ್ ಎಂದು ಕರೆದಿದ್ದ!

"ಲೂಸ್ ಲಚ್ಚೀನಾರಾಯಣ. ಒಂದು ಹೇಳ್ತೀನಿ ಕೇಳು, ಮೊದಲು ಕೇಳಿಸಿಕೊ, ರಸ್ತೇಲಿ ಆ ಕೊನೆಯಿಂದ ಈ ಕೊನೆವರೆಗೆ ನಿನ್ನಂತಹ ನೂರು ಜನ ಕ್ರ್ಯಾಕ್‌ಗಳು ನನಗೆ ಸಿಕ್ತಾರೆ. ಪ್ರತಿಯೊಬ್ಬ ಕ್ರ್ಯಾಕ್ ನಿನ್ನ ತರಹವೇ ನನಗೆ ಕೊರಿತಾ ಹೋದರೆ ನನ್ನ ಆರೋಗ್ಯದ ಗತಿ ಏನಯ್ಯಾ? ಅದರಲ್ಲೂ ಕಿವಿಗೆ ಮೆಶಿನ್ ಸಿಕ್ಕಿಸಿಕೊಂಡು ನಿನ್ನ ಗಂಟಲು ನೋವು ನಾನ್ಯಾಕೆ ಕಡಿಮೆ ಮಾಡಬೇಕು...?....

"ಜೀವಮಾನ ಪೂರ್ತಿ ಸಾಯೋಗಂಟ ಯಾವ ಮೆಶೀನ್ ಕಿವಿ ಹತ್ತಿರ ಬರಬಾರದು ಹಾಗೆ ಕಾವಲು ಕಾಯ್ತೀನಿ. ಕಿರುಚಿ ಕಿರುಚಿ ನಿಮ್ಮಂತೋರ ಗಂಟಲು ಹಾಳಾಗಲಿ, ನನಗೇನು? ಲೂಸ್‌ಗಳಿಂದ ತಪ್ಪಿಸ್ಕೋ ಬೇಕು ಅಂದರೆ ಇದೇ ಒಳ್ಳೇ ಪ್ಲಾನು...."

ಲಚ್ಚೀನಾರಾಯಣ ಬಾಯಿ ಆಆ ಆ ಆ ಅಂತ ಆಕಾಶದಷ್ಟು ಅಗಲ ಮಾಡಿ ನಿಂತನಾ?

ರಾಜ್ಯ ಗೆದ್ದ ಚಕ್ರವರ್ತಿ ಗತ್ತಿನಲ್ಲಿ ಹೆಜ್ಜೆ ಹಾಕುತ್ತಾ ಗೂಡು ಸೇರಿದೆ. ಕೊರಿಯೋ ಕೋರಿಯೋ ಗ್ರಾಫರ್‌ಗಳಿಗೆ ಒಂದು ಒಳ್ಳೇ ಮದ್ದು ಕಂಡು ಹಿಡಿದಿದ್ದೀನಿ.

ಸಿಕ್ಕವರಿಗೆಲ್ಲಾ ಕೊರೆಯುವ ಜನರೇ ಕೋರೀತೀರಾ, ನಿಮಗೆ ಒಂದೊಳ್ಳೆ ಪಾಠ ಕಲಿಸ್ತಿನಿ.....!

■

**ಅಪಾರ್ಥ** **ವಿ.ವಿಜಯೇಂದ್ರ ರಾವ್**

ಒಮ್ಮೆ ಚಪಾತಿಗೂ, ನಾನ್‌ಗೂ ಓಡುವ ಪಂದ್ಯ ಏರ್ಪಡಿಸಿದ್ದರು.ಅದರಲ್ಲಿ ಚಪಾತಿಗೆ ಜಯವಾಯಿತು. ಆದರೆ, ಟ್ರೋಫಿಯನ್ನು ನಾನ್‌ಗೆ ಕೊಟ್ಟರು. ಯಾಕೆಂದರೆ... ಚಪಾತಿ ಹತ್ತಿರ ಬಂದು ಆಯೋಜಕರು ನಿಮ್ಮಲ್ಲಿ ಯಾರು ಗೆದ್ದಿರಿ ಎಂದು ಕೇಳಿದಾಗ, ಚಪಾತಿಯು ನಾನು ಎಂದಿತು. ಅವರು ಅಪಾರ್ಥ ಮಾಡಿಕೊಂಡು ನಾನ್‌ಗೆ ಪ್ರಶಸ್ತಿ ಕೊಟ್ಟರಂತೆ......!

ದಂಸಆ

- ✓ ಎಲ್ಲಾ ತುಂಬಾ ಚೆನ್ನಾಗಿದೆ ಎಂದು ಯಾರೂ ದೂರುವುದೇ ಇಲ್ಲ!
- ✓ ನೀವು ಖಿನ್ನರಾಗಿದ್ದರೆ ಭೂತಕಾಲದಲ್ಲಿದ್ದೀರಿ ಎಂದರ್ಥ; ಆತಂಕದಲ್ಲಿದ್ದೀರಿ ಎಂದರೆ ಭವಿಷ್ಯ ಕಾಲದಲ್ಲಿದ್ದೀರಿ ಎಂದರ್ಥ; ನೆಮ್ಮದಿಯಿಂದ ಇದ್ದರೆ ವರ್ತಮಾನ ಕಾಲದಲ್ಲಿದ್ದೀರಿ ಎಂದರ್ಥ.
- ✓ ಎ ಮ್ಯಾನ್ ಟೋಲ್ಡ್ ಬುದ್ಧ 'ಐ ವಾಂಟ್ ಹ್ಯಾಪಿನೆಸ್'. ಬುದ್ಧ ಸೆಡ್: ಫಸ್ಟ್ ರಿಮುವ್ 'ಐ' ದಟ್ಸ್ ಇಗೊ. ದೆನ್ ರಿಮುವ್ 'ವಾಂಟ್'. ದಟ್ಸ್ ಡಿಸೈರ್. ಸೀ, ನೌ ಯು ಆರ್ ಲೆಫ್ಟ್ ವಿತ್ 'ಹ್ಯಾಪಿನೆಸ್'.
- ✓ ಖಾಲಿ ಜೇಬು ಸಾವಿರ ಪಾಠಗಳನ್ನು ಕಲಿಸುತ್ತದೆ. ಆದರೆ ತುಂಬಿದ ಜೇಬು ಸಾವಿರ ವಿಧಗಳಲ್ಲಿ ನಿಮ್ಮನ್ನು ಕೆಡಿಸುತ್ತದೆ.
- ✓ ಶತ್ರುವನ್ನು ಆಕ್ರಮಣಕ್ಕೆ ಕಾಯುವಂತೆ ಮಾಡುವುದೂ ಸಹ ಯುದ್ಧದ ಒಂದು ಭಾಗ.
- ✓ ಲೈಫ್ ಡಸ್ ನಾಟ್ ಹ್ಯಾವ್ ಟು ಬಿ ಪರ್ಫೆಕ್ಟ್ ಟು ಬಿ ವಂಡರ್‌ಫುಲ್.
- ✓ ಸಮಸ್ಯೆಯನ್ನು ಸರಿಯಾಗಿ ಅರ್ಥೈಸಿದರೆ ಪರಿಹಾರ ಸಿಕ್ಕಂತೆ ಎನ್ನಬಹುದು.
- ✓ ಮರಳಿ ಬರುವುದು ನೆನಪುಗಳು ಮಾತ್ರ, ಸಮಯವಲ್ಲ.
- ✓ ದಿ ಮ್ಯಾನ್ ಹು ಸೇಸ್ ಹಿಸ್ ವೈಫ್ ಕಾಂಟ್ ಟೇಕ್ ಎ ಜೋಕ್ ಫರಗೆಟ್ಸ್ ದಟ್ ಶಿ ಟುಕ್ ಹಿಮ್.
- ✓ ಸರಿಯಾದ್ದು ಸರಿಯೇ ಯಾರೂ ಮಾಡದೇ ಇದ್ದರೂ ಸಹ. ತಪ್ಪು ತಪ್ಪೇ ಎಲ್ಲರೂ ಅದನ್ನು ಮಾಡುತ್ತಿದ್ದರೂ ಸಹ.
- ✓ ವೇಸ್ಟ್ ನೊ ಮೋರ್ ಟೈಂ ಆರ್ಗುಯಿಂಗ್ ಅಬೌಟ್ ವಾಟ್ ಎ ಗುಡ್ ಮ್ಯಾನ್ ಶುಡ್ ಬಿ. ಬಿ ಒನ್.
- ✓ ಸಾಲ ಕೇಳಲು ಬಂದವನು ಹೇಳುವ ಕತೆಗಿಂತ ಉತ್ತಮ ಕತೆ ಹೇಳುವ ವ್ಯಕ್ತಿ ಇನ್ನೊಬ್ಬನಿಲ್ಲ.
- ✓ ನಮ್ಮ ಇತಿಮಿತಿಗಳನ್ನು ನಾವು ಒಪ್ಪಿಕೊಂಡರೆ ಅವುಗಳನ್ನು ಮೀರಿ ಹೋಗಲು ಸಾಧ್ಯ.
- ✓ ಎರವಲು ಪಡೆದ ಸ್ವೆಟರ್ ನಿಮ್ಮನ್ನು ಬೆಚ್ಚಗಿರಿಸುವುದಿಲ್ಲ.
- ✓ ನೊಬಡಿ ಈಸ್ ಪರ್ಫೆಕ್ಟ್, ಐ ಅಮ್ ನೊಬಡಿ. ದೇರ್ ಫೋರ್ ಐ ಅಮ್ ಪರ್ಫೆಕ್ಟ್.

■

# ಗುಂಡಣ್ಣನ ಪಥ್ಯ

ವಿಲಾಸ ನಾ ಹುದ್ದಾರ

ಗುಂಡಣ್ಣ ನೀರಾವರಿ ಇಲಾಖೆಯೊಳಗ ಹಿರಿಯ ಲೆಕ್ಕಿಗ. ಅವನ ಆರೋಗ್ಯ ಬರೋಬರಿ ಇಲ್ಲದದ್ದಕ್ಕ ಸುಮಾರು ಹದಿನೈದ ವರ್ಷಗಳಿಂದ ಮುಖ್ಯ ಕಚೇರಿಯೊಳಗ ಇದ್ದಾ. ಅವಂಗ ಮಧುಮೇಹ, ರಕ್ತದ ಒತ್ತಡ ಮತ್ತಿತರ ಜಡ್ಡುಗಳು ಕಾಡ್ತಿದ್ವು. ಅವನ ಹೇಂಣ್ತಿ ಪ್ರಯತ್ನದಿಂದ ಎಲ್ಲ್ಯು ಬ್ಯಾರೆಕಡೆ ವರ್ಗ ಆಗಿರಲಿಲ್ಲ. ಅಲ್ಲದ ಅಂವಾ ಭಾಳ ಛೊಲೊ ಕೆಲಸಾ ಮಾಡ್ತಾನ, ಎಲ್ಲಾ ಕೆಲಸಾ ಗೊತ್ತ ಅವಂಗ. ಎಲ್ಲಾರ್ನೂ ಹಚಗೊಂಡ ಹೋಗ್ತಾನ ಮತ್ತ ಎಲ್ಲಾರಿಗೂ ಗುಂಡಣ್ಣ ಅಂದ್ರ ಬಾಳ ಪ್ರೀತಿ. ಗುಂಡಣ್ಣ ದಂಪತಿಗಳಿಗೆ ಎರಡು ಮಕ್ಕಳು, ಮೊದನೇದಾಕಿ ಮಗಳು, ಈಗ ಇಂಜಿನೀಯರಿಂಗ್ ಮೂರನೇ ವರ್ಷ ಮತ್ತ ಎರಡನೇದಾಂವ ಮಗಾ, ಇಂಜಿನೀಯರಿಂಗ ಮೊದಲನೇ ವರ್ಷ. ಈಗ ಬ್ಯಾರೆ ಕಡೆ ವರ್ಗ ಆದ್ರ ಒಬ್ಬನ ಹೋಗಬೇಕ. ಅವನ ಹೇಂಣ್ತಿಗೆ ಅದ್ರದ ಕಾಳಜಿ. ಯಾಕಂದ್ರ, ಗುಂಡಣ್ಣಗ ಬಾಯಿ ಚಪಲಾ ಭಾಳ. ಆಕೀ ಹೆಂಗೋ ಕಷ್ಟ ಪಟ್ಟ ಅದನ್ನ ನಿಯಂತ್ರಣದೊಳಗ ಇಟ್ಟಿದ್ಲು. ಧರ್ಮಪತ್ನಿಗೆ ಗಂಡನ ಆರೋಗ್ಯದ ಕಾಳಜಿ, ಆದ್ರ ಗುಂಡಣ್ಣನ ವಿಚಾರನ ಬ್ಯಾರೆ. ಸುಡಗಾಡ ಈ ಜಡ್ಡುಗಳು ವಕ್ಕರಿಸಿ ಇಪ್ಪತ್ತೈದು ವರ್ಷ ಆದ್ವು. ಎಷ್ಟ ದಿವಸ ಅಂತರೇ ಬಾಯಿ ಕಟ್ಟೋದು. ಎಂದರೇ ಒಂದ ದಿವಸ ಸಾಯೋದಂತು ಖರೆ ಆದ, ತಿಂದ ಉಂಡ ಸತ್ರಾತು. ಇದರಿಂದ ದೇಹಕ್ಕೂ, ಆತ್ಮಕ್ಕೂ ಸಮಾಧಾನ. ಹಿಂಗಾಗಿ ಈಗೀಗ ಅಂವಾ ಅರ್ಧಾಂಗಿ ಕಣ್ಣ ತಪ್ಪಿಸಿ ಹಟಕ್ಕ ಬಿದ್ದಂಗ ತನಗ ಬೇಕಾದದ್ದ ತಿನ್ತಿದ್ದಾ. ಗಂಡನ ಈ ಹಟಾ ನೋಡಿ ಯಾವದ ಕಾರಣಕ್ಕ ಗಂಡಗ ಬ್ಯಾರೆ ಊರಿಗೆ ಬದ್ಲಿ ಆದ್ರ ಹೇಂಣ್ತಿಗೆ ಅವನ ಒಬ್ಬನ್ನ ಕಳಸೋದ ನೆನಿಸಿಕೊಂಡ್ರ ಎದಿ ಧಸಕ್ಕ ಅಂತಿತ್ತು.

ಆಕೀ ಎದಿ ಧಸಕ್ ಅನ್ನೋ ದಿನಾ ಬಂದ ಬಿಟ್ತು. ಗುಂಡಣ್ಣಗ ಲೇಖಾಧಿಕಾರಿ (ಅಕೌಂಟ್ಸ್ ಆಫೀಸರ್) ಆಗಿ ಬಡ್ತಿ ಕೊಟ್ಟ ಪ್ರೊಜೆಕ್ಟ್ ಸೈಟಿಗೆ ಬದ್ಲಿ ಆತು. ಅವನ ಧರ್ಮಪತ್ನಿ ಭಾಳ ಪ್ರಯತ್ನ ಮಾಡಿದ್ಲು. ಆದ್ರ ಎಮ್.ಡಿ. ಗೂ ಏನೂ ಮಾಡ್ಲಿಕ್ಕೆ ಬರೋ ಹಂಗ ಇರ್ಲಿಲ್ಲ. ಯಾಕಂದ್ರ ಮುಖ್ಯ ಕಚೇರಿಯೊಳಗ ಲೇಖಾಧಿಕಾರೀದು ಒಂದ ಜಗಾ ಇತ್ತು. ಮತ್ತ ಸದ್ಯಕ್ಕ ಲೇಖಾಧಿಕಾರಿ ಇದ್ದವರು ನಿವೃತ್ತಿ ಆಗ್ಲಿಕ್ಕೆ ಎರಡ ವರ್ಷ ಇದ್ವು. ಹಿಂಗಾಗಿ ಎರಡ ವರ್ಷರೇ ಗಂಡಣ್ಣಗ ಪ್ರೊಜೆಕ್ಟ್ ಆಫೀಸಿಗೆ ಹೋಗೋ ಅನಿವಾರ್ಯತೆ ಇತ್ತು.

ಮನಸ್ಸಿಲ್ಲದ ಮನಸ್ಸಿನಿಂದ ಸಾಮಾನು, ಸರಂಜಾಮು ತೊಗೊಂಡು ಗುಂಡಣ್ಣನ ಕರ್ಕೊಂಡ ಪ್ರೊಜೆಕ್ಟ್ ಆಫೀಸಿಗೆ ಬಾಡಿಗೆ ಕಾರಿನೊಳಗ ಬಂದ ಇಳದ್ಲು. ಚೀಫ್ ಇಂಜಿನೀಯರು ಗುರ್ತಿನವರ ಇದ್ರು. ಅಲ್ಲದ ಅವರಿಗೆ ಗುಂಡಣ್ಣನ ವಿಷಯ ಎಲ್ಲಾ ತಿಳಿದಿತ್ತು. ಗುಂಡಣ್ಣನ ಮ್ಯಾಲೆ ಅಭಿಮಾನಾನೂ ಇತ್ತು. ಗುಂಡಣ್ಣ ಪತ್ನಿ ಸಮೇತ ಅವರ ಮುಂದ ಕೂತಾ. ಅವನ ಹೇಂಣ್ತಿ ಮಾರೀ ಮ್ಯಾಲೆ ಇದ್ದ ಚಿಂತಿ ಗೆರಿ ನೋಡಿ,

"ಏನೂ ಚಿಂತಿ ಮಾಡಬ್ಯಾಡ್ರಿ. ಹೆಂಗೂ ಗುಂಡಣ್ಣ ಇರೋದು ಒಬ್ರ. ಮತ್ತ ನಮ್ಮ ಸೈಟ್ ಇಂಜಿನೀಯರ್ ಆನಂದನೂ ಒಬ್ರ ಇರ್ತಾರ. ಇನ್ನೂ ಲಗ್ನ ಅಗಿಲ್ಲಾ. ಅವರ ಕ್ವಾರ್ಟರ್ಸ್ ದೊಡ್ಡದ ಅದ. ಇವ್ರೂ ಅವನ ಜೊತೀನ ಇರ್ಲಿ. ಆನಂದಗೂ ಎಲ್ಲಾ ಹೇಳೇನಿ. ಆನಂದಗೂ ಗುಂಡಣ್ಣ ಗೊತ್ತ ಇದ್ದಾರ. ಹೆಂಗೂ ಶನಿವಾರ,ರವಿವಾರ ಗುಂಡಣ್ಣ ನಿಮ್ಮ ಕಡೆ ಬರ್ತಾರ. ಆ ಎರಡ ದಿವಸ ಆನಂದ ತನಗೇನ ಬೇಕೋ ಅದನ್ನ

ಕ್ಯಾಂಟೀನ ಸುಬ್ಬಣ್ಣನ ಕಡೀಂದ ಮಾಡ್ಸಕೊಂಡ ತಿನ್ಲಿಕ್ಕೆ ಹೇಳೇನಿ. ಉಳಕೀ ದಿವಸ ಸಿಹಿ ತಿನಸು, ಕರದದ್ದು ಕ್ಯಾಂಟೀನಿನಿಂದ ತರಸಬ್ಯಾಡ ಅಂತ ಹೇಳೇನಿ. ಬರೀ ಸಿಹಿ ಇಲ್ಲದ ಸಾತ್ವಿಕ ಆಹಾರ ತರಸ್ಲಿಕ್ಕೆ ಹೇಳೇನಿ. ಅದರಂತ ಸುಬ್ಬಣ್ಣಗೂ ಹೇಳೇನಿ. ಗುಂಡಣ್ಣ ಎಷ್ಟ ಹೇಳೀದ್ರೂ ಅವನ ಮಾತ ಕೇಳಬ್ಯಾಡ ಅಂತ ಹೇಳೇನಿ. ಮತ್ತ, ಗುಂಡಣ್ಣ ನೀವೂ ಅವಂಗ ಒತ್ತಾಯಿಸ ಬ್ಯಾಡ್ರೀ. ತಿಳೀತಿಲ್ಲೋ. ವೈನಿ, ನೀವೂ ಏನೂ ಕಾಳಜಿ ಮಾಡದ ತಿರಿಗಿ ಹೋಗ್ರೀ. ಹೋಗೋಕಿಂತ ಮೊದ್ಲೇಕ ಆನಂದಗ ಭೆಟ್ಟಿ ಆಗ್ರಿ. ನಾ ಅವಂಗ ಸೈಟಿನಿಂದ ಬರ್ಲಿಕ್ಕೆ ಹೇಳಿದ್ದೆ. ಹೊರಗ ಬಂದಿರ ಬಹುದು. ಭೆಟ್ಟಿ ಆಗಿ, ಒಮ್ಮೆ ಕ್ವಾರ್ಟರ್ಸ್ ನೋಡಿ, ನೀವೂ ಏನೂ ಚಿಂತಿ ತಲ್ಯಾಗ ಇಟ್ಗೊಳ್ಳದ ನಿಶ್ಚಿಂತಿ ಆಗಿ ಹೋಗ್ರಿ."

ಗುಂಡಣ್ಣ ದಂಪತಿಗಳು ಹೊರಗ ಬರೋದಕ್ಕ ಆನಂದನೂ ಬಂದಾ. ಅವನ ಜೊತಿ ಅವನ ಕ್ವಾರ್ಟರ್ಸ್ ನೋಡ್ಲಿಕ್ಕೆ ಹೋದ್ರು. ಎರಡು ಬೆಡ್ ರೂಮುಗಳು, ಹಾಲು, ಊಟದ ಕೋಣೆ, ಲಿವ್ವಿಂಗ್ ರೂಮು ಇದ್ದ ಸಾಕಷ್ಟು ದೊಡ್ಡದಾಗಿತ್ತು. ಎಲ್ಲಾ ನೋಡಿ, ತೃಪ್ತಿ ಆಗಿ,




"ಆನಂದ ಇವ್ರ ತಿನಿಸಿನ ಕಡೆ ಸ್ವಲ್ಪ ಲಕ್ಷ್ಯ ಇರ್ಲಿ... ಇವರಿಗೆ ಬಾಯಿ ಮ್ಯಾಲೇ ಕಂಟ್ರೋಲ್ ಇಲ್ಲಾ.. ಬಾಯಿ ಚಪಲ ಜಾಸ್ತಿ.."

ಗುಂಡಣ್ಣ ಆಕೀ ಹೇಳಿದ್ದು ಕೇಳಿಸೀಯೂ ಕೇಳಿಸಿಲ್ಲದವರ್ಹಂಗ ಆ ಕಡೆ ಈ ಕಡೆ ನೋಡ್ಲಿಕತ್ತಿದ್ದಾ. ಅದು ತನಗ ಸಂಬಂಧ ಇಲ್ಲದವರ್ಹಂಗ.

"ವೈನಿ, ನೀವೇನೂ ಕಾಳಜಿ ಮಾಡಬ್ಯಾಡ್ರಿ...... ನನಗೂ ಅವರ ಜೋಡಿ ಡೈಟ್ ಮಾಡಿದ್ಹಂಗ ಆಗ್ತದ.... ಶುಕ್ರವಾರ ರಾತ್ರಿಯಿಂದ ರವಿವಾರ ರಾತ್ರಿವರೆಗೆ ನಾ ಒಬ್ನ ಇರ್ತೇನಲ್ಲಾ... ಆಗ ನನಗ ಬೇಕಾದ್ದು ಮಾಡಿಸಿಕೊಂಡ ತಿಂತೇನಿ... ನನ್ನ ಪ್ರಕೃತಿಗೂ, ಆರೋಗ್ಯಕ್ಕೂ ಸಹಾಯ ಆಗ್ತದ..."

ಮನಸ್ಸಿನೊಳಗ ತಳಮಳಾ ಇದ್ರೂ, ಆನಂದ ಮಾತ ಕೇಳಿ ಸಮಾಧಾನ ಹೊಂದಿ, ತೊಗೊಂಡ ಹೋದ ಭಾಡಿಗಿ ಕಾರಿನೊಳಗ ಗುಂಡಣ್ಣನ ಧರ್ಮಪತ್ನಿ ತಿರಿಗಿ ಊರಿಗೆ ಬಂದ್ಲು.

ಗುಂಡಣ್ಣ ಅನಂದಗ ಹೊಂದ್ಕೊಂಡನೋ, ಆನಂದ ಗುಂಡಣ್ಣಗ ಹೊಂದ್ಕೊಂಡನೋ ಗೊತ್ತಿಲ್ಲ. ಒಟ್ಟಿನ ಮ್ಯಾಲೆ ಎಲ್ಲಾ ಸುರಳೀತ ನಡೀತ ಮೊದಲನೇ ಎರಡ ವಾರಾ.

ಗುಂಡಣ್ಣ ಶಾಂತ ಆಗೇ ಇದ್ದಾ. ಮೂರನೇ ವಾರದಾಗ ಮಂಗಳವಾರ ಗುಂಡಣ್ಣ ಲಗೂನೆ ತಯ್ಯಾರಾಗಿ,

"ಆನಂದ, ನನಗ ಕೆಲಸಾ ಜಾಸ್ತಿ ಅದ, ನಿಮಗ ಗೊತ್ತ ಅದಲಾ, ಅಕೌಂಟ್ಸ್‌ದವರಿಗೆ ಯಾವಾಗಲೂ ಜಾಸ್ತ ಕೆಲಸಾ ಅಂತ. ವಾರಕ್ಕ ಎರಡ,ಮೂರು ದಿವಸಾ ಲಗೂನೆ ಹೋಗ್ತೇನಿ. ಬ್ರೆಕ್‌ಫಾಸ್ಟ್ ಕ್ಯಾಂಟೀನದಾಗ ಮಾಡ್ತೇನಿ. ನಿಮ್ಮ ಒಬ್ಬರಿಗೇ ಇಲ್ಲೇ ಕಳಸಲಿಕ್ಕೆ ಸುಬ್ಬಣ್ಣಗ ಹೇಳ್ತೇನಿ. ಊಟಕ್ಕನೂ ಬರೂದಿಲ್ಲಾ. ರಾತ್ರಿ ಮಾತ್ರ ಇಬ್ರೂ ಕೂಡೇ ಊಟಾ ಮಾಡೋಣು."

ಆನಂದಗೂ ಗೊತ್ತಿತ್ತು ಅಕೌಂಟ್ಸ್‌ದವರಿಗೆ ಯಾವಾಗಲೂ ಜಾಸ್ತ ಕೆಲಸಾ ಅಂತ. ಹೂಂ ಅಂತ ಗೋಣ ಹಾಕಿದಾ. ಇದ ರೀತಿ ವಾರಕ್ಕ ಮೂರ ದಿವಸಾ ಗುಂಡಣ್ಣ ಲಗೂನೆ ಹೋಗ್ಲಿಕತ್ತಾ. ಸುಮಾರು ಒಂದ ತಿಂಗಳ ಹಿಂಗ ನಡೀತು. ಆನಂದಗೂ ಪಥ್ಯ ಸ್ವಲ್ಪ ತ್ರಾಸ ಆದ್ರೂ, ಪ್ರಕೃತಿ ಸುಧಾರಿಸಿದ್ಹಂಗ ಅನಿಸ್ತು.

ಗುಂಡಣ್ಣ ಕೆಲಸಕ್ಕ ಹೋಗಿದ್ರು. ಆನಂದ ಕೆಲಸಕ್ಕ ಹೋಗ್ಲಿಕ್ಕೆ ತಯ್ಯಾರ ಆಗಿ ಬ್ರೆಕ್‌ಫಾಸ್ಟ ಬರೋ ಹಾದಿ ಕಾಯ್ಲಿಕತ್ತಿದ್ದಾ. ಅಷ್ಟರೊಳಗ ಸೈಟ್‌ನಿಂದ ಲಗೂನೆ ಬರ್ಲಿಕ್ಕೆ ಫೋನ್ ಬಂತು. ಬ್ರೆಕ್‌ಫಾಸ್ಟಗೆ ಕಾಯದ ಕ್ಯಾಂಟೀನದೊಳಗ ತಿಂದ್ರಾತು ಅಂತ ಅನ್ಕೊಂಡ ಸೀದಾ ಕ್ಯಾಂಟೀನ್‌ಗೆ ಬಂದಾ. ಆನಂದ ಕ್ಯಾಂಟೀನದೊಳಗ ಕಾಲ ಇಡೋದಕ್ಕ ಕಣ್ಣಿಗೆ ಸುಬ್ಬಣ್ಣ ಟ್ರೇದೊಳಗ ಗುಲಾಬಜಾಮೂನು, ಸಿರಾ ಮತ್ತ ಪುರೀ–ಭಾಜಿ ತೊಗೊಂಡ ಹೊಂಟದ್ದು ಕಾಣಿಸ್ತು. ಅಂವಾ ಒಂದ ಟೇಬಲ್ ಹತ್ರ ಹೋಗಿ ಇನ್ನೇನ ಟೇಬಲ್ ಮ್ಯಾಲೆ ಇಡಬೇಕ, ಆನಂದ ಒಳಗ ಬರೋದ ನೋಡಿ ಸುಬ್ಬಣ್ಣನ ಮಾರಿ ಇಂಗ ತಿಂದ ಮಂಗ್ಯಾನ ಹಂಗ ಆತು. ಆನಂದಗ ಆಶ್ಚರ್ಯ ಆತು, ಇಂವ್ಯಾಕ ನನ್ನ ನೋಡಿ ಗಾಬರಿ ಆದ ಅಂತ. ಅಷ್ಟರೊಳಗ ಆನಂದ ಲಕ್ಷ್ಯ ಇವನಿಗೆ ಬೆನ್ನ ಮಾಡಿ ಕೂತ ವ್ಯಕ್ತಿ ಕಡೆ ಹೋತು. ಆ ವ್ಯಕ್ತಿ ಸುಬ್ಬಣ್ಣನ ಕೈಯಾಗಿಂದ ಗುಲಾಬ ಜಾಮೂನ ಪ್ಲೇಟ್ ಕಸ್ಕೊಂಡ. ಚಮಚಾದೊಳಗ ಸ್ವಲ್ಪ ಗುಲಾಬ ಜಾಮೂನ ತೊಗೊಂಡ ಬಾಯಾಗ ಹಾಕ್ಕೊಂಡ ಕಣ್ಣುಮುಚ್ಚಿ ಆ ರುಚಿ ಸವಿದು ಕಣ್ಣು ತಗದಾ, ಎದುರಿಗೆ ಆನಂದ. ಕಣ್ಣ ಕಣ್ಣ ಬಿಟ್ಕೋತ ನುಂಗಿದಾ. ಗುಂಡಣ್ಣನ ಆ ಅವತಾರ ಮತ್ತ ಅವನ ಮುಂದ ಇದ್ದ ಸಿರಾ, ಉಳಿದ ಗುಲಾಬ ಜಾಮೂನ ಮತ್ತ ಪುರಿ ಪಲ್ಯ ನೋಡಿ' ಅಲ್ಲಾ, ನಾ ಈ ಮನುಷ್ಯಾನ ಸಲುವಾಗಿ ಇಷ್ಟ ಸಣ್ಣ ವಯಸ್ಸಿನಾಗ ಎಲ್ಲಾ ಬಿಟ್ಟು, ದಿವಸಾ ಅವಲಕ್ಕಿ, ಉಪ್ಪಿಟ್ಟ, ಚಪಾತಿ ತಿಂತಿದ್ರ, ಇಂವಾ ಇಲ್ಲೆ ಪಟ್ಟಾಗಿ ಕೂತು ಎಲ್ಲಾ ತಿನ್ಕೋತ ಮಜಾ ಮಾಡ್ಲಿಕತ್ತಾನಲಾ....' ಅಂತ ಅನಕೊಂಡಾ... ಅವಂಗ ನಗಬೇಕೋ ಅಳಬೇಕೋ ತಿಳೀಲಿಲ್ಲಾ. ಕೈಯಾಗ ಫೋನ್ ತೊಗೊಂಡಾ. ಅದನ್ನ ನೋಡಿ ಗುಂಡಣ್ಣ ಕೈ ಮುಗದು ಬ್ಯಾಡಾ, ಬ್ಯಾಡ ಅಂತ ಗೋಣ ಅಳ್ಯಾಡಿಸ್ಕೋತ ದಯನೀಯವಾದ ಮಾರೀ ಮಾಡಿದಾ.

(ಶ್ರೀ ಗೋವಿಂದ ಕಟ್ಟಿ ಅವರು ಹೇಳಿದ ಘಟನೆ ಆಧಾರಿತ)

................................ ಶ್ರೀ ಕೃಷ್ಣಾರ್ಪಣಮಸ್ತು ............................

■

# ಸಣ್ಣಮ್ಮನ ಸೊಸೆ

ಪುಷ್ಪಲತಾ

ಇನ್ನೇನು ಮಳೆಗಾಲ ಕಾಲಿಡುತ್ತಿದ್ದಂತೆ ಕಪ್ಪೆಗಳ ಕೂಗು ಕಾಡಿನಲ್ಲಿ ಮಾರ್ದನಿಸುತ್ತಿತ್ತು. ಇಂಬಳಗಳು ಇನ್ನು ತಮ್ಮ ಆಟ ಶುರು ಎಂಬಂತೆ ತಲೆ ಎತ್ತುತಿದ್ದವು. ಅವುಗಳ ನಡು ನಡುವೆಯೇ ತಪ್ಪಿಸಿಕೊಳ್ಳುವಂತೆ ಹೆಜ್ಜೆ ಹಾಕುತ್ತಾ ಬರುತ್ತಿದ್ದವ ದೂರದಿಂದ ಕಾಡು ಮನುಷ್ಯನಂತೆ ಕಾಣುತಿದ್ದ. ಮಳೆಗೆಂದು ಕೊಪ್ಪೆ ಮಾಡಿದ್ದ ಅವನ ಕಂಬಳಿಯಿಂದ ನೀರು ಜಿನುಗುತ್ತಿತ್ತು. ಕಾಡಿನ ನಡುವಿನ ಕಾಲುದಾರಿಯಲ್ಲಿ ಮೋಡದ ಮರೆಯಲ್ಲಿ ಗವ್ ಎನ್ನುವ ಕತ್ತಲೆಯಲ್ಲಿ ಎಲ್ಲವೂ ಮೊದಲೇ ಅಸ್ಪಷ್ಟ. ಕಪ್ಪು ಕಂಬಳಿಯ ಮರೆಯಲ್ಲಿ ಒಬ್ಬ ಮನುಷ್ಯ ಬರುತ್ತಿರುವುದನ್ನು ವಾಸನೆ ಗ್ರಹಿಸುವ ಜೀವಿಗಳಲ್ಲದೆ ಬೇರೆ ಯಾರೂ ಪತ್ತೆ ಮಾಡುವಂತೆ ಇರಲಿಲ್ಲ. ಅವರೊಂದಿಗೆ ಬದುಕಿದ್ದ ಯಾವುದೋ ಪ್ರಾಣಿ ಎಂದುಕೊಳ್ಳಬಹುದಿತ್ತು. ಚಪ್ಪಲಿ ಇಲ್ಲದ ಕಾಲನ್ನು ಒದ್ದೆಯಾದ ಎಲೆ ದರುಕಿನ ಮೇಲೆ ಪಟ ಪಟನೆ ನಡೆಯುತ್ತಾ ಕಾಡಿನ ಹಳು ಬಿಟ್ಟು ತೋಟದ ಬೇಲಿ ದಾಟಿ ಆಚೀಚೆ ನೋಡುತ್ತಾ ಬಣ ದಾಟಿ ದಾಟಿ ಹೊರಟವನ ಗುರುತು ಸಿಗದೆ ಡಿಂಗ ರಂಪ ಎಬ್ಬಿಸಿತ್ತು.ಮಳೆ ಜಿನುಗುವುದು ನಿಂತಿತ್ತು.ತೋಟದ ಅಂಚಿಗೆ ತಾಗಿದ್ದ ಹೊಳೆಯನ್ನೇ ದಿಟ್ಟಿಸುತ್ತಾ ಬಾಲ ಆಡಿಸುತ್ತಾ ನಿಂತಿದ್ದ ಡಿಂಗ ಇನ್ಯಾವುದೋ ಮೂಲೆಯಿಂದ ಅನಿರೀಕ್ಷಿತ ಆಗಮನಕ್ಕೆ ಬೆಚ್ಚಿ ಬಿದ್ದಿತ್ತು. ಸದಾ ಕುರ್ಕಿ ಭಯಕ್ಕೆ ಎಚ್ಚೆತ್ತು ತನ್ನ ಜೀವ ರಕ್ಷಣೆಗೆ ಮುಂದಾಗಿರುತಿದ್ದ ಡಿಂಗನಿಗೆ ಅಸ್ಪಷ್ಟ ಆಕೃತಿ ಕಾಣಿಸಿದ್ದೆ ದೊಡ್ಡದಾಗಿ ಬೊಗಳುತ್ತ ಹಿಂದೆ ಓಡಿದ್ದು ಮನೆ ಕಾಣುತ್ತಿದೆ ಎನ್ನುವಷ್ಟು ಹತ್ತಿರ ಹೋದ ಬಳಿಕ ತನ್ನ ಶೌರ್ಯ ತೋರಿಸುವಂತೆ ಆರ್ಭಟಿಸಿತು.

ಈಗಷ್ಟೇ ತನ್ನ ಒಡೆಯನೊಂದಿಗೆ ಬಲೆ ಬಿಡಲು ಹೊಳೆ ಕಡೆ ಹೋಗಿದ್ದನ್ನು ಗಮನಿಸಿದ್ದ ಗೌರಿ ನಿನ್ನ ಬಿಟ್ಟು ಹೋದ್ರ ಹೊಳೆಗೆ ...ಬಾ ಮಗ ....ಎಂದು ಸಂತೈಸುವ ದನಿಯಲ್ಲಿ ಕರೆದಳು. ದೊಡ್ಡಪ್ಪನೊಂದಿಗೆ ಹೋಗಿದ್ದ ಗುಂಡು, ಡಿಂಗನನ್ನು ಇತ್ತ ಓಡಿಸಿ ಹೋಗಿರಬಹುದು. ಅದೇ ಸಿಟ್ಟಿಗೆ ಹೀಗೆ ಕೂಗುತ್ತಿರುವುದು ಎಂದು ತಿಳಿದವಳು ಪಾತ್ರೆ ತೊಳೆಯುತ್ತಲೇ ತನ್ನತ್ತ ಕರೆಯುತ್ತಿದ್ದಳು.

ಡಿಂಗ ಮಾತ್ರ ಅದು ಮನುಷ್ಯರ ಆಕೃತಿ ಎಂದು ಸರಿಯಾಗಿ ಕಾಣುವವರೆಗೂ ಒಂದು ಕಣ್ಣು ಮನೆಯತ್ತ ಇನ್ನೊಂದು ಕಣ್ಣು ದಾರಿಯತ್ತ ತಿರುಗಿಸುತ್ತಾ ಕೂಗುತ್ತಲೇ ಇತ್ತು. ಯಾರಾದರೂ ಬಂದರೇ ಎಂದು ಬಚ್ಚಲಿನಿಂದಲೇ ಬಗ್ಗಿ ನೋಡಿದ ಗೌರಿ ಓಹ್... ಬಾವರು....

ಈ ಮಳೆಯಲ್ಲಿ ಇವರು ಎತ್ಲ ಕಡೆಯಿಂದ ಬರ್ತಿದ್ದಾರೆ ಎಂದು ಯೋಚಿಸುತ್ತಾ ಕಡಿಮಾಡಿಗೆ ಬಂದು ನಿಂತಳು.

ಅಷ್ಟರಲ್ಲಿ ಇನ್ನೊಂದು ದಾರಿಯಿಂದ ಬಂದ ಸಣ್ಣಮ್ಮ ಗೌರಿ.....ಮಳೆ ಹೆಜ್ಜೆ ಇಡೋಕು ಬಿಡೋ ತರ ಇಲ್ಲೇ.... ಎನ್ನುತ್ತಲೇ ಅಂಗಳಕ್ಕೆ ಬಂದರು.

ಕಂಬಳಿ ಸುತ್ತಲೇ ನೋಡುತಿದ್ದ ಡಿಂಗನಿಗೆ ಸಣ್ಣಮ್ಮ ನ ಆಗಮನದ ಸುಳಿವೆ ಸಿಕ್ಕಿರಲಿಲ್ಲವೋ ಇಲ್ಲ ಗುರುತು ಸಿಕ್ಕಿತೋ ಕೂಗದೆ ಅಲ್ಲೇ ಬಾಲ ಅಲ್ಲಾಡಿಸಿತು. ಡಾಕಪ್ಪ ಸಣ್ಣಮ್ಮ ಇಬ್ಬರೂ ಮುಖ ಮುಖ ನೋಡಿಕೊಂಡು ಕುಶಲೋಪರಿ ಮಾತನಾಡುತ್ತಾ ಒಳ ಬಂದರು. ಇಬ್ಬರು ಕತೆಗಾರರೇ...ಎಂದುಕೊಳ್ಳುತ್ತಾ ಗೌರಿ ಚಾ ಮಾಡಲು ಒಳ ನಡೆದರೆ ಡಿಂಗ ಬೆಂಕಿ ಕಾಯಿಸಲು ಒಲೆಯತ್ತ ಕುಳಿತು ಇವರ ಅನ್ವೇಷಣೆಯ ಮಧ್ಯೆ

ಮರೆತ ಟೀಪು ಎಲ್ಲಿ ಹೋಯಿತು ಎಂದು ಹುಡುಕಿತು.

ದೊಡ್ಡಪ್ಪನೊಂದಿಗೆ ಉಕ್ಕಡ (ಚಿಕ್ಕ ದೋಣಿ) ದಲ್ಲಿ ಕುಳಿತು ಸುತ್ತಲೂ ನೋಡಿ ಆನಂದಿಸುತಿದ್ದ ಗುಂಡ ಡಿಂಗನನ್ನು ಅತ್ತಿತ್ತ ಹುಡುಕುತಿದ್ದ. ಡಿಂಗನಿಗೆ ಈಜು ಬರುವುದರಿಂದ ತಾನು ಬಿಸ್ಕೆಟ್ ಕೊಟ್ಟು ಗಳಿಸಿದ್ದ ವಿಶ್ವಾಸಕ್ಕೆ ಹಿಂದೆ ಈಜುತ್ತಾ ಬರುತ್ತಿರಬಹುದು ಎಂಬ ಅವನ ಪೆದ್ದು ಯೋಚನೆ ಫಲ ಕೊಡಲಿಲ್ಲ. ಹಿಂದಿರುಗಿ ನೋಡಿದಷ್ಟು ದೂರ ನೀರು ಹೊರತು ಡಿಂಗ ಕಾಣಲಿಲ್ಲ.ಇನ್ನು ದಡದ ಸುತ್ತಲೂ ಎಷ್ಟು ಕಣ್ಣಾಯಿಸಿದರೂ ಕಾಣದ ಡಿಂಗನನ್ನು ಮನದಲ್ಲೇ ಕಾದು ಕಾದು ಬೈದುಕೊಂಡು ನಿರಾಸೆಪಟ್ಟವ ದೊಡ್ಡಪ್ಪನನ್ನು ಕೇಳಿದ್ದ.

ಡಿಂಗ ಹಿಂದೆ ಬರಲ್ಲ ದೊಡ್ಡಪ್ಪ..

ಕಾನಿಗೆ ಹೊರಟರೆ ಮೊದ್ಲು ಬರ್ತಿತ್ತು ಆಮೇಲೆ ಕುರ್ಕಿ ಭಯ ಅಂತ ನಾ ಬಿಟ್ಟು ಹೋಗೋಕೆ ಶುರು ಮಾಡಿದೆ. ನಾವು ಕರೆದ್ರೆ ಬರ್ತಾನೆ ಎಲ್ಲರ ಹಿಂದೆನು ಹೋಗಲ್ಲ. ಎಂದವರು ಬಲೆ ಬಿಡುವುದರಲ್ಲಿ ನಿರತರಾದರು.

ವಾಸ್ತವದಲ್ಲಿ ಡಿಂಗ ಅಷ್ಟೆಲ್ಲ ತೊಂದರೆ ತೆಗೆದುಕೊಳ್ಳುವ ನಾಯಿಯೇ ಅಲ್ಲವಾಗಿತ್ತು. ಕಾಡಿಗೆ ಹೋಗುವುದು ಒಡೆಯನ ಮೇಲಿನ ಪ್ರೀತಿಗೆ ವಿನಃ ಹಸಿ ಮಾಂಸ ಮೀನು ತಿನ್ನುವ ಯಾವುದೇ ಅಭ್ಯಾಸ ಅದಕ್ಕಿರಲಿಲ್ಲ. ಬೇಕಿರುವುದೆಲ್ಲ ಹೊತ್ತು ಹೊತ್ತಿಗೂ ತಟ್ಟೆಯಲ್ಲಿ ಸಿಗುತ್ತಿತ್ತು ಪ್ರೀತಿ ಸಮೇತ. ಹೀಗಿರುವಾಗ ಅದು ಗುಂಡನ ಚಿಕ್ಕ ಬಿಸ್ಕೆಟ್ ತುಣುಕಿಗೆ ಆ ಮಳೆಯಲ್ಲಿ ಹೊಳೆಗೆ ಹಾರಿ ಹಿಂದೆ ಹೋಗುವುದು ಅದರ ಕಲ್ಪನಾ ಶಕ್ತಿಗೂ ಮೀರಿದ್ದು.ಜಿನುಗುವ ಮಳೆಯಲ್ಲಿ ನೆನೆದು ಬೆಂಕಿ ಕಾಯಿಸುತ್ತ ಕುಳಿತಿದ್ದ ಡಿಂಗ ಟೀ ಲೋಟದ ಸದ್ದಿಗೆ ದಿಗ್ಗನೆ ಎದ್ದು ಬಾಗಿಲ ಬಳಿ ಓಡಿತು. ಎಷ್ಟೇ ಇಣುಕಿದರು ಒಳಗಿನ ದೀಪದ ಬೆಳಕಿಗೆ ಟೀ ಜೊತೆ ಅವರು ತಿನ್ನುತ್ತಿರುವುದು ಕಾಣಿಸಲಿಲ್ಲ.ಆದರೆ ಡಿಂಗ ಬಾಗಿಲಿಗೆ ಬಂದಿದ್ದು ಗೌರಿಗೆ ಕಾಣಿಸಿತು. ಕೈಲಿದ್ದ ಬ್ರೆಡ್ ಕವರ್ ತಂದವರು ಪುಟ್ಟಿ ಇದ್ದಿದ್ರೆ ಇದಷ್ಟು ಇವ್ನಿಗೆ ಆಗ್ತಿತ್ತು ಎನ್ನುತ್ತಾ ಎರಡು ಬ್ರೆಡ್ ಕೊಟ್ಟು ಟೀಪುವಿಗೆ ಹುಡುಕಿದರು.

ಗುಂಡ ದೊಡ್ಡಾಪ್ಪನೊಂದಿಗೆ ಕತೆಗೆ ಇಳಿದಿದ್ದ ಹಿಂದಿನ ಕಾಲದ ಬೇಟೆಯನ್ನು ವಿವರಿಸುತ್ತಿದ್ದರೆ ಗುಂಡನಿಗೆ ಆಯಾ ಕಾಲದಲ್ಲಿ ತಾನು ಹುಟ್ಟಬಾರದಿತ್ತೆ ಎನ್ನಿಸುತ್ತಿತ್ತು. ಬಲೆ ಬಿಟ್ಟು ಉಕ್ಕಡ ಮನೆಯತ್ತ ತಿರುಗಿಸುವ ಹೊತ್ತಿಗೆ ದಡದಲ್ಲಿ ನಿಂತಿದ್ದ ಟೀಪು ಒದ್ದೆಯಾಗಿ ಓಡುತ್ತಾ ಬರುತ್ತಿರುವುದು ನೋಡಿ ಗುಂಡನ ಕಣ್ಣು ತುಂಬಿ ಬಂತು.


ತಮ್ಮನ್ನು ಹಿಂಬಾಲಿಸಿ ಸುತ್ತುವರಿದು ದಡ ಬಳಸಿ ಬಂದಿದ್ದ ಟೀಪು ಪ್ರೀತಿ ಆ ಕ್ಷಣಕ್ಕೆ ಜಗತ್ತಿನ ಎಲ್ಲ ಕುಶಿ ಮೀರಿದ್ದು ಎನ್ನಿಸಿತು.

ಇತ್ತ ಟೀ ಕುಡಿದು ಮಾತನಾಡುತ್ತಾ ಡಾಕಪ್ಪ ಅಚಾನಕ್ ಆಗಿ ನಿನ್ನೆ ಗೀತಾ ಬಂದಿದ್ದು ಸೂಜಿ ಮೆಣಸು ಕೇಳ್ತು ಎಂತ ಮಾಡಕೆ ಅವು ಅಂದಿದ್ದು ಸಣ್ಣಮ್ಮ ನ ರೋಷವೇಶಕ್ಕೆ ಕಾರಣವಾಗಿತ್ತು. ಡಾಕಪ್ಪ ಪೇಚಾಟಕ್ಕೆ ಸಿಲುಕಿದಂತೆ ಕುಳಿತ. ಗೌರಿ ವಿಷಯ ಬದಲಿಸಲು ಅಡಿಕೆ ಹರಿವಾಣ ಕೊಟ್ಟ ಉಪಾಯ ಅರವತ್ತರ ಮುದುಕಿಯ ಅನುಭವದೆದುರು ನೀರು ಪಾಲಾಯ್ತು. ಸಣ್ಣಮ್ಮ ಜೋರಾಗಿ ಸೊಸೆಗೆ ಬಯ್ಯುತ್ತಾ ನಾನು ಮನೇಲಿ ಇಲ್ಲದಾಗೆಲ್ಲ ತಿರುಗೋದೆ ಕೆಲ್ಸ ಎಂದು ಗೌರಿಗೆ ಸೊಸೆಯ ನೂರು ದೂರು ಹೇಳುತ್ತಲೇ ಮನೆಯತ್ತ ಹೆಜ್ಜೆ ಬೀಸಿದರು. ಡಾಕಪ್ಪ ತನ್ನಿಂದ ಅನಾಹುತ ಆಯಿತೆಂಬ ಅಪರಾಧಿ ಮುಖದಲ್ಲಿ ಅಂತರ್ಧಾನರಾದರು.ಗುಂಡ ಅಲ್ಲಿಂದಲೇ ಡಿಂಗನಿಗೆ

ಬಯ್ಯುತ್ತಾ ಟಿಪುವನ್ನು ಮುದ್ದಾಡುತ್ತಾ ಸ್ನಾನದ ಮನೆಗೆ ಹೋದ.

ಟೀಪು ಒದ್ದೆ ಮೈ ಕೊಡವುತ್ತಾ ಬೆಂಕಿಯತ್ತ ಓಡಿತು. ಗುಂಡನ ಕೈಗೆ ದೊಡ್ಡಪ್ಪ ಕೊಟ್ಟ ಮೀನಿನ ಚೀಲವನ್ನು ನೋಡುತ್ತಲೇ ಡಿಂಗ ಬಾಲ ಆಡಿಸಿತು. ದೊಡ್ಡಮ್ಮ ಸಣ್ಣಮ್ಮನ ಅವಾಂತರ ಹೇಳುತ್ತಾ ಬಚ್ಚಲಿಗೆ ಬಂದಾಗ ಮೀನಿನ ಚೀಲ ತೋರಿಸಿ ಇದರ ಸಾರು ಡಿಂಗನಿಗೆ ಮಾತ್ರ ಹಾಕಬೇಡ ಎಂದು ಕಟ್ಟಪ್ಪಣೆ ಮಾಡಿದ. ಡಿಂಗ ಗುಂಡನ ಕೈಲಿರುವ ಚೀಲವನ್ನು ದಿಟ್ಟಿಸುತ್ತಾ ನಿಂತಿತ್ತು.

■



**ಕೊರವಂಜಿಯಿಂದ**

# ಪಥ್ಯದ ಪರಿಣಾಮ

ಚೌ ಚೌ, ಮದ್ದೂರು ವಡೆ, ಖಾರು ಬಂದಿ. ಓಂಪುಡಿ, ಬಾಳೇಕಾಯಿ ಬಜೆ, ನಾನು–ಒಂದು ಮೇಜಿನ ಸುತ್ತ ಕುಳಿತು. ನಮ್ಮ ವಿರಾಟಭವನದ ಆರಾಮಕೋಣೆಯ ಪೂರ್ವ ದಿಕ್ಕಿನಲ್ಲಿ, ಪರಶುವಿನ ಪರಿಚಾರಿಕೆಗಾಗಿ ಕಾದಿದ್ದೆವು. ಮಲ್ಲಾರಿರಾಯರು ನಮಗೆಲ್ಲರಿಗಿಂತಲೂ ಕೆಲವು ನಿಮಿಷಗಳ ಮುಂದೆಯೇ ಬಂದಿದ್ದು, ಈಶಾನ್ಯ ದಿಕ್ಕಿನಲ್ಲಿ ಆಗಲೇ ತಮ್ಮ ಖಾರದ ಗೋಡಂಬಿಯಲ್ಲಿ ಐದಾರು ಚೂರುಗಳನ್ನು ಅನುಭವಿಸಿದ್ದರು. ಅದೇ ಸಮಯದಲ್ಲಿ ನಮ್ಮ ವಿರಾಟಭವನದ ಕೆಂಪು ಬೆಕ್ಕು. ಇದ್ದಕ್ಕಿದ್ದ ಹಾಗೆಯೇ ಉಪ್ಪರಿಗೆಯ ಮೆಟ್ಟಲುಗಳ ಮೇಲೆ, ಮೇಲಿಂದ ಕೆಳಗೆ ಉರುಳಿಕೊಂಡು ಬಂದು, ಒಂದು ಬಾರಿ ಸುತ್ತಲೂ ನೋಡಿ, ನಮ್ಮನ್ನು ಶಪಿಸಿ, ಮೈ ಕೊಡವಿಕೊಂಡು, ಅಡುಗೆಯ ಮನೆ ಕಡೆ ಓಡಿತು.

"ಪ್ರಾಯಶಃ ಎಡವಿರಬೇಕು." ಅಂದರು ಓಂಪುಡಿ.

"ಛೇ ! ಬೆಕ್ಕು ಎಂದಿಗೂ ಎಡವೊಲ್ಲ. ಆ ಪ್ರಾರಬ್ಧ ಕರ್ಮವೆಲ್ಲಾ ನಮ್ಮ ಮನುಷ್ಯ ಜಾತಿಗೇ ಅಂಟಿಕೊಂಡಿರೋದು. ಈಗ ಏನಿದ್ದರೂ ಪ್ರಾಯಶಃ ಒಂದು ಇಲಿ ಪ್ರಾಯಶಃ ಹೆಣ್ಣಿಲಿ ಇರಬೇಕು. ಈ ಬೆಕ್ಕಿನಿಂದ ತಲೆ ತಪ್ಪಿಸಿಕೊಂಡಿರಬೇಕು." ಅಂದರು ಖಾರಾ ಬೂಂದಿ.

ನಮ್ಮ ವಿರಾಟ ಭವನದಲ್ಲಿ ಚರ್ಚೆಗಳು ಆಗಾಗ ಈ ರೀತಿ ಉನ್ನತ ಮಟ್ಟವನ್ನು ಮುಟ್ಟುವುದುಂಟು.

ಪರುಶು ನಮ್ಮ ಮಾಮೂಲುಗಳನ್ನು ನಮ್ಮ ಮುಂದೆ ತಂದಿಟ್ಟ.

"ಏನ್ರಿ ನೀವು ಹೇಳೋದು? ಬೆಕ್ಕಿಗೆ ಇಲಿ ಬೇಟೆಯಲ್ಲಿ ಅಪಘಾತವೇ ? ನನಗೆ ಎಂದಾದರೂ ಬಾಳೇಕಾಯಿ ಬಜೆ ಗಂಟಲಲ್ಲಿ ಸಿಕ್ಕಿಕೊಂಡು ಅಪಘಾತವಾಗುತ್ತೆ ?" ಅನ್ನುತ್ತಾ ಬಾಳೇಕಾಯಿ ಬಜೆ, ಒಂದು ಬಾಳೇಕಾಯಿ ಬಜೆಯನ್ನು ಅನಾಮತ್ತಾಗಿ ಬಾಯಿಗೆ ತುರುಕಿಕೊಂಡು, ತೇಲುಗಣ್ಣು ಮೇಲುಗಣ್ಣು ಮಾಡಿ, ಕೆಮ್ಮಿ, ಒಂದು ಲೋಟ ನೀರು ಕುಡಿದು ಶಾಂತವಾಗಿ ನಮ್ಮ ಕಡೆ ನೋಡಿದರು.

ಪರುಶು ಬೆಕ್ಕಿನ ಅಪಘಾತದ ಕಾರಣ ತಿಳಿಸಿದ.

"ನಮ್ಮ ಮಾಲೀಕರು ರಂಭನ ಮೇಲಿಂದ ಒದ್ದರು. ರಂಭ ಅವರ ಮಂಚ ದಡೀಲಿ ಸೇರಿಕೊಂಡು ಇಲಿ ಬೇಟೆ ಮಾಡ್ತಾ ಗಲಾಟೆ ಮಾಡಿತಂತೆ. ಅದಕ್ಕೆ ರೇಗಿ ಒದ್ದರು."

ನನಗೆ ತಿಳಿದ ಹಾಗೆ ವಿರಾಟ ಭವನದ ಮಾಲೀಕರು ಗಣೇಶರಾಯರು ತುಂಬಾ ಸಾಧುವಾದ ಮನುಷ್ಯ, ಒಂದು ಇರುವೆಯನ್ನು ಕೂಡ ತುಳಿದು ಕೊಂದವರಲ್ಲ. ನಮ್ಮೆಗೆಲ್ಲರಿಗೂ ಆಶ್ಚರ್ಯವಾಯ್ತು.

"ಈಗ್ಗೆ ಒಂದು ವಾರದಿಂದ ಗಣೇಶರಾಯರು ಪಥ್ಯದಲ್ಲಿದ್ದಾರೆ. ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿ ಕೇವಲ ಹುರಿನುಚ್ಚಿನ ಗಂಜಿ. ಅದಕ್ಕೆ ಸಕ್ಕರೆಯೂ ಇಲ್ಲ. ಉಪ್ಪು ಇಲ್ಲ." ಅಂದ ಪರುಶು.

"ಅಯ್ಯೋ ಪಾಪ !" ಅಂದೆವು ನಾವೆಲ್ಲರೂ ಏಕ ಕಠದಿಂದ.

"ಅಯ್ಯೋ ಪಾಪ ಅನ್ನುವುದು ಸುಲಭ. ಆದರೆ ಪಥ್ಯದ ಯಾತನೆಯನ್ನು ಅನುಭವಿಸುವುದು ಕಷ್ಟ !"

ಮಲ್ಹಾರಿರಾಯರ ಅಧಿಕಾರ ವಾಣಿಯನ್ನು ಕೇಳಿ ನಾವೆಲ್ಲ ಈಶಾನ್ಯ ದಿಕ್ಕಿಗೆ ತಿರುಗಿದೆವು.

"ನನ್ನ ಭಾವಮೈದುನನ ಮಗ ಏಕಾಂಬರ..."

"ಅಂದರೆ 'ವಿರಹಪ್ರಲಾಪ'ದ ಉಜ್ವಲಕುಮಾರನಲ್ಲದೇ ?"

ಖಾರಾ ಬೂಂದಿಯ ಈ ಪ್ರಶ್ನೆಗೆ ಮಲ್ಹಾರಿರಾಯರು ಚಕಿತರಾದರು.

"ಸಾಕ್ಷಾತ್ ಅವನೆ ! ಆದರೆ ನಮ್ಮ ಏಕಾಂಬರ ಉಜ್ವಲಕುಮಾರನಾದ ಸಂಗತಿ ನಿಮಗೆ ಹೇಗೆ ಗೊತ್ತು ?"

ಓಹೋ–ನೀವೇ ಹಿಂದೆ ಹೇಳಿದ್ದಿರಲ್ಲ !

ಹಾಗಿದ್ದ ಮೇಲೆ ಅನುಕೂಲವೇ ಆಯ್ತು, ಇವತ್ತು ನಾನು ಅವನ ವಿಚಾರವನ್ನೇ ಹೇಳಲು ಶುರುಮಾಡಿದ್ದೆ.

ಅಂದರೆ–ಏಕಾಂಬರ ಇದೇ ರೀತಿ ಬೆಕ್ಕನ್ನು ಒದ್ದನೆ ? ಬಾಳೇಕಾಯಿ ಬಜೆ ಕೇಳಿದರು.

ಏಕಾಂಬರನಿಗೆ ಈ ರೀತಿ ಬೆಕ್ಕು ಒದೆಯಲಿಕ್ಕೆ ಸಿಕ್ಕಿರಲಾರದು ಅಷ್ಟೆ. ಸಿಕ್ಕಿದ್ದರೆ ಆ ಬೆಕ್ಕಿನ ಗತಿ ಏನಾಗುತ್ತಿತ್ತೋ ನಾನು ಕಲ್ಪನೆ ಕೂಡ ಮಾಡಲಾರೆ. ಇದೇ ಏಕಾಂಬರನ ಮುತ್ತಜ್ಜ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಮೂರು ದಿನಗಳ ಉಪವಾಸವಿದ್ದೂ ಸಹ ನಲವತ್ತೇಳು ಫರಂಗಿಯವರನ್ನ ಆಹುತಿ ತೆಗೆದುಕೊಂಡ ಮೇಲೆ ಮಡಿದರು. ಆದರೆ ಏಕಾಂಬರ ಒಬ್ಬ ವೈದ್ಯನ ಪಥ್ಯಕ್ಕೆ ಕಟ್ಟು ಬಿದ್ದು ನಮ್ಮ ಸಮಾಜದ ಹತೋಟಿಯಿಂದಲೇ ತಪ್ಪಿಸಿಕೊಳ್ಳುವಷ್ಟಕ್ಕೆ ಬಂದಿದ್ದ.

ಆಯ್ಯೋ ಪಾಪ ! ಆಂದೆವು ಎಲ್ಲರೂ.

ನನ್ನ ಭಾವಮೈದುನನ ಮಗ ಏಕಾಂಬರ (ಮಲ್ಹಾರಿರಾಯರು ಹೇಳಿದರು) ನಿಮಗೆ ತಿಳಿದ ಹಾಗೆ ಪ್ರಸಿದ್ಧ ಸಿನಿಮಾ ನಟನಾದ. ಬೇಕಾದ ಹಾಗೆ ಸಂಪತ್ತು, ಅಂತಸ್ತು, ಗೌರವ ಇರುವಾಗ ಒಂಟಿ ಮನುಷ್ಯನ ಜೀವನ ಕೇಳಬೇಕೆ ? ಏಕಾಂಬರ' ಬೇಕಾದ್ದನ್ನು ಬೇಕಾದ ಹಾಗೆ ಬೇಕಾದಾಗ ತಿಂದು ಕುಡಿದು ತೇಗಿದ. ಅವನಿಗೆ ತನ್ನ ಚಿಕ್ಕಂದಿನ ಬಾಳ್ವೆಯ ಹುಣ್ಣುಗಳೆಲ್ಲಾ ವಾಸಿಯಾದವು.. ಆದರೆ ಆ ಹುಣ್ಣುಗಳು ವಾಸಿಯಾಗುವ ಹೊತ್ತಿಗೆ ಏಕಾಂಬರನಿಗೆ ಬೇರೆ ಕಡೆ ಹುಣ್ಣುಗಳೆದ್ದವು–ಜಠರದಲ್ಲಿ. ಒಂದೊಂದು ದಿನ ಅವುಗಳ ವೇದನೆ ಎಷ್ಟು ಇರುತ್ತಿತ್ತೆಂದರೆ, ತನಗೆ ಏನೂ ಮಾಡಲಿಕ್ಕೆ ತೋರದೆ ಒಂದು ದೊಡ್ಡ ಗುಂಡುಕಲ್ಲಿಗೆ ಒಂದು ಇಡೀ ಪಂಚೆ ಸುತ್ತಿ ಅದನ್ನು ತನ್ನ ಹೊಟ್ಟೆಗೆ ಬಿಗಿದು ಕಟ್ಟಿಕೊಳ್ಳುತ್ತಿದ್ದನಂತೆ ! ಈ ರೀತಿ ಸ್ವಲ್ಪ ದಿನಗಳು ಕಳೆದ ಮೇಲೆ ಒಬ್ಬ ಪ್ರಸಿದ್ಧ ವೈದ್ಯರ ಹತ್ತಿರ, ತನ್ನ ಡೈರೆಕ್ಟರ್ H. M D C. ಹಂಸರಾಜರ ಪ್ರೇರಣೆಯಿಂದ, ಏಕಾಂಬರ ಹೋದ.

ಬೆಳಿಗ್ಗೆ ಆರು ಘಂಟೆಗೆ ಒಂದು ಲೋಟ ಹಾಲು.

ಪುನಃ ಹತ್ತು ಘಂಟೆಗೆ ಒಂದು ಲೋಟ ಹಾಲು.

ಮಧ್ಯಾಹ್ನ ಒಂದು ಗಂಟೆಗೆ ಒಂದು ಲೋಟ ಹಾಲು.

ಸಂಜೆ ಆರು ಘಂಟೆಗೆ ಒಂದು ಲೋಟ ಹಾಲು.

ರಾತ್ರಿ ಹತ್ತು ಗಂಟೆಗೆ ಒಂದು ಲೋಟ ಹಾಲು.

ಜೊತೆಗೆ ಕೆಲವು ಮಾತ್ರೆಗಳು ಇದು ಏಕಾಂಬರನ ಚಿಕಿತ್ಸೆಯಾಯ್ತು.

"ಊಟ ಯಾವಾಗ ಮಾಡಲಿ ಡಾಕ್ಟ್ರೆ ?" ಏಕಾಂಬರ ಕೇಳಿದ.

"ಊಟ ಇನ್ನೆಲ್ಲಿಯ ಊಟ ? ಊಟದ ಸಮಯದಲ್ಲಿ ಬೇಕಾದರೆ ಧಾರಾಳವಾಗಿ ಒಂದು ಲೋಟ... ಹೂ ! ಹಾಲು ಕುಡಿಯಿರಿ." ಅಂದರು ಡಾಕ್ಟರು.

"ದೋಸೆ, ಇಡ್ಲಿ ?"

"ಛೇ ! ಎಲ್ಲಾದರುಂಟೆ? ಅದಕ್ಕೆ ಬದಲಾಗಿ ದಿವ್ಯನಾಗಿ ಒಂದು ಲೋಟ ಹಾಲು ಕುಡಿಯಿರಿ."

"ಚೌ ಚೌ, ಓಂಪುಡಿ, ಮುಚ್ಚರೆ, ಕೋಡುಬಳೆ ?"

"ವಿಷಗಳೇ ಸರಿ ! ಚೆನ್ನಾಗಿ ಕಾಯಿಸಿ, ಆರಿಸಿ, ತುಸ ಸಕ್ಕರೆ ಬೆರಸಿ, ರುಚಿ ಹದ ಮಾಡಿಕೊಂಡು ಒಂದು ಲೋಟ ಹಾಲು ಕುಡಿಯಿರಿ. ಈ ವಿಷಗಳು ಜ್ಞಾಪಕಕ್ಕೆ ಬಂದಾಗ."

"? !" ಅಂದ ಏಕಾಂಬರ.

"ಹತ್ತು ರೂವಾಯಿ." ಅಂದರು ಡಾಕ್ಟರು.

ಏಕಾಂಬರ ಹತ್ತು ರೂಪಾಯಿ ಕೊಟ್ಟು ವೈದ್ಯರ ಚೀಟಿ ಕೊಂಡುಕೊಂಡು. ತನ್ನ ಪಾಶೀ ಶಿಕ್ಷೆಯ ಹುಕುಮ್ ಹಿಡಿದುಕೊಂಡವನಂತೆ ಹೊರಗೆ ಬಂದ.

ಪಾಪ, ಏನು ಮಾಡಬಲ್ಲ ? ತನ್ನ ಪಥ್ಯವನ್ನು ಶುರು ಮಾಡಿದ. ಮೂರು ದಿನಗಳವರಿವಿಗೆ, ಆರಂಭದ ಹುಮ್ಮಸ್ಸಿನಿಂದಲೋ ಅಥವಾ ಡಾಕ್ಟರಿಗೆ ತೆತ್ತ ಹತ್ತು ರೂಪಾಯಿಯ ನೆನಪಿನಿಂದಲೋ ಏನೋ ತೊಂದರೆ ಎಣಿಸಲಿಲ್ಲ ನಾಲ್ಕನೆಯ ದಿನ ಸ್ಟುಡಿಯೋದಲ್ಲಿ ತಾನು ಅಭಿನಯಿಸುತ್ತಿದ್ದ 'ಶ್ಯಾನುಭೋಗರ ಮಗ' ಚಿತ್ರದ ಕೆಲಸದ ಸಮಯದಲ್ಲಿ ಏಕಾಂಬರನ ಹೊಟ್ಟೆಯಲ್ಲಿ ಜ್ವಾಲಾಮುಖಿ ಹೊಗೆಯಾಡಿತು. 'ಶ್ಯಾನು ಭೋಗರ ಮಗ' ಚಿತ್ರದಲ್ಲಿ ಒಂದು ವೈದೀಕದ ಸೀನು ಚಿತ್ರೀಕರಣವಾಗುತ್ತಿದೆ ಬ್ರಾಹ್ಮಣರು ಊಟಕ್ಕೆ ಕುಳಿತಿದ್ದಾರೆ ಇದೇ ಏಕಾಂಬರ ಅಥವಾ ಉಜ್ವಲಕುಮಾರ ಬ್ರಾಹ್ಮಣರಿಗೆ ಆಪೋಶನ ಹಾಕಬೇಕು. ಕ್ಯಾಮರಾ ಸಿದ್ಧವಾಗಿದೆ. ಭೂತ ಬೆಳಕುಗಳನ್ನು ಜೋಡಿಸಿದ್ದಾರೆ. ಹಠಾತ್ತನೆ ಉಜ್ವಲಕುಮಾರನ ನೆತ್ತಿಗೆ ಪಿತ್ಥ ಏರಿದಂತಾಗಿ ಕೈಯೊಡ್ಡಿದ ಬ್ರಾಹ್ಮಣರಿಗೆ ಹೇಳಿದ–" ತಿನ್ನಿ, ಚೆನ್ನಾಗಿ ತಿನ್ನಿ! ಗಢದ್ದಾಗಿ ತಿನ್ನಿ !! ತಿಂದು ನೀವು ಅಜೀರ್ಣದಿಂದ ನರಳಿ ಎಷ್ಟು ದಿನ ಹೀಗೆ ದಂಡ ಪಿಂಡ ತಿನ್ನುತ್ತೀರೋ ನೋಡ್ತೇನೆ ಅಂತ.

"ಕಟ್" ಅಂದರು H. M. D. C. ಹಂಸರಾಜ್

"ಶ್ಯಾನುಭೋಗರ ಮಗ" ಚಿತ್ರಕ್ಕೆ ದೈವೀಕದ ಸೀನಿನೊಂದಿಗೆ ವೈದಿಕ ವಾಯ್ತು, ಪುನಃ ಏಕಾಂಬರನಿಗೆ ಬಣ್ಣ ಹಚ್ಚಲು ಹಂಸರಾಜರಿಗೆ ಧೈರ್ಯ ಬರಲಿಲ್ಲ. ಆದರೂ ಏಕಾಂಬರನಲ್ಲಿ ಅವರಿಗೆ ಒಂದು ವಿಧವಾದ ಪ್ರೀತಿ ಇತ್ತು. ಅವರ ಅದೃಷ್ಟ ದೇವತೆ

ಏಕಾಂಬರನ ಮುಖಾಂತರದೇ ಅವರಿಗೆ ಒಲಿದಿದ್ದಳು. ಆದ್ದರಿಂದ ಏಕಾಂಬರ ಇಂದಲ್ಲ ನಾಳೆ ಸರಿಹೋಗುತ್ತಾನೆ ಅಂತ ನಂಬಿದ್ದರು. ಆದರೆ ಒಂಭತ್ತನೇ ದಿನ ಅವರ ಗಾಳಿಗೋಪುರ ಕುಸಿದುಬಿತ್ತು.

ಮಧ್ಯಾಹ್ನ ಸುಮಾರು ನಾಲ್ಕು ಗಂಟೆ ಸಮಯ. ಹಂಸರಾಜರು, ಸ್ಟುಡಿಯೋದಲ್ಲಿ ತಮ್ಮ ಕೋಣೆಯಲ್ಲಿ ಚಹಾ ಸೇವಿಸುತ್ತಿದ್ದಾರೆ. ಚಹಾ ಜೊತೆ ಅಂದು ಮುಚ್ಚರೆ ತರಿಸಿದ್ದಾರೆ. ಮುಚ್ಚರೆ ಎರಡು ಮೂರು ತುಂಡುಗಳನ್ನು ಬಾಯಲ್ಲಿ ಆಗಿದು ತಿಂದಿದ್ದಾರೆ. ಪಕ್ಕದ ಕೋಣೆಯ ಬಾಗಿಲು ದಿಢೀರಂತ ತೆರೆಯಿತು. ಏಕಾಂಬರ ರೋಷದಿಂದ ನುಗ್ಗಿದ.

"ನಿಲ್ಲಿಸಿ ! ನಿಮ್ಮ ಈ ಭಯಂಕರ ಕರ್ಕಶ ಶಬ್ದವನ್ನು ನಿಲ್ಲಿಸಿ !" ಅಂತ ಚೀರಿದ.

"ಉಜ್ವಲ ! ಏನಾಗಿದೆ ನಿನಗೆ ?" H. M. D. C. ಹಂಸರಾಜ್ ಕೇಳಿದರು.

"ನನಗೇನಾಗಿಲ್ಲ. ಆದರೆ ಇನ್ನೊಂದು ತುಂಡು ಈ ಹಾಳು ಮುಚ್ಚೋರೆ ನಿಮ್ಮ ಬಾಯಿಗೆ ಹಾಕಿಕೊಂಡಿದ್ದೇ ಆದರೆ ನಿಮ್ಮ ಗತಿ ಏನಾದೀತು ಅಂತ ತಿಳಿಯುತ್ತೆ!" ಅಂದ.

ಹಂಸರಾಜರಿಗೆ ಇನ್ನೊಂದು ತುಂಡು ಮುಚ್ಚೋರೆ ಬಾಯಿಗೆ ಹಾಕಲು ಧೈರ್ಯ ಬರಲಿಲ್ಲ.

"ಉಜ್ವಲ–ಥೆ ನೀನಿನ್ನು ಉಜ್ವಲಕುಮಾರನಲ್ಲ. ಕೇವಲ ಏಕಾಂಬರ. ತೊಲಗು ಇಲ್ಲಿಂದ. ಒಂದು ತಿಂಗಳ ಸಂಬಳ ತೆಗೆದುಕೊಂಡು ಈಕ್ಷಣ ಇಲ್ಲಿಂದ ತೊಲಗು" ಅಂದರು.

ಏಕಾಂಬರ ಹಾಗೇ ಕುಸಿದ. ತನ್ನ ಮುಂದಿನ ಪ್ರಪಂಚ ಶೂನ್ಯವಾಗಿ ಕಂಡಿತಂತೆ. ಶೂನ್ಯ ಅಂದರೆ ಅರ್ಥವೇನೆಂದು ಅವನು ಹೇಳಲಿಲ್ಲ. ಆದರೆ ನಾವು ಊಹಿಸಬಹುದು ಅಷ್ಟೆ. ಸನ್ನಿವೇಶ ವಿಪರೀತ ತೊಡಕಿನದಾಯ್ತು. H M D. C ಹಂಸರಾಜ್ ಮತ್ತು ಏಕಾಂಬರ ಒಬ್ಬರಮುಂದೊಬ್ಬರು ದೆವ್ವ ಬಡಿದವರಂತೆ ನಿಂತಿದ್ದರು. ಅವರಿಬ್ಬರ ಭೇಟಿ ಯಾವಾಗ, ಹೇಗೆ ಮುಕ್ತಾಯವಾಗುತ್ತೆ ಅಂತ ಹಂಸರಾಜರ ಕಾರ್ಯದರ್ಶಿ ಮತ್ತು ಡ್ರೈವರ್ ನಡುವೆ ಆಗಲೇ ಬಾಜೀ ಕುದುರಿತ್ತು. ಅದೇ ಮುಹೂರ್ತದಲ್ಲೇ ಸ್ಟುಡಿಯೋವಿನ ಮತ್ತೊಂದು ಕಡೆ ಗುಲ್ಲೆದ್ದಿತು.

'ಶೂರ್ಪನಖಾ ಪರಿಣಯ' ಚಿತ್ರದಲ್ಲಿ ರಾಜಕುಮಾರಿ ಶೂರ್ಪನಖಿಯ ಅಂಗ ರಕ್ಷಕೆಯ ಪಾತ್ರ ಧರಿಸಿದ್ದ ತಾರೆ–ಚಂದ್ರಮುಖಿ, ತನ್ನ ಖಡ್ಗವನ್ನು ಬೀಸುತ್ತಾ, ಸ್ಟುಡಿಯೋದಲ್ಲೆಲ್ಲಾ ಆವೇಶದಿಂದ ಓಡಾಡಿ, ಕಡೆಗೆ ಡೈರೆಕ್ಟರ ಕೋಣೆಯೊಳಕ್ಕೆ ನುಗ್ಗಿದಳು. H M. D C. ಹಂಸರಾಜ್ ಅದೇ ತಾನೇ ಏಕಾಂಬರನೊಂದಿಗೆ ವಾಗ್ಯುದ್ಧ ನಡೆಸಿದ್ದರು. ಖಡ್ಗ ಸಜ್ಜಿತ ಚಂದ್ರಮುಖಿಯನ್ನು ನೋಡಿ, ಹಿಂದೂ ಮುಂದೂ ಯೋಚಿಸದೆ ಒಂದೇ ಬಾರಿಗೆ ಅಲ್ಲಿದ್ದ ಬೀರುವಿನ ಮೇಲೆ ಹತ್ತಿ ಕುಳಿತರು. ಚಂದ್ರಮುಖಿಗೆ ರೋಷ ಹೆಚ್ಚಿತು. ತನ್ನ ಖಡ್ಗವನ್ನು ಹಂಸರಾಜ್ ಅವರ ಕಡೆ ತಿವಿಯುತ್ತಾ ಆರ್ಭಟಿಸಿದಳು.

"ಇಳಿ ನಡೆ ನಮ್ಮ ರಾವಣ ಚಕ್ರವರ್ತಿಯ ಆಸ್ಥಾನಕ್ಕೆ ನಡೆ"

ಹಂಸರಾಜರು ನಡುಗಿದರು.

ಏಕಾಂಬರ ಆದನ್ನೆಲ್ಲಾ ನೋಡಿದ. ನೋಡುತ್ತಿದ್ದಂತೆಯೇ ಅವನ ಕಣ್ಣುಗಳು ಕೆಂಪಾದವು. ತಲೆಯ ಕೂದಲುಗಳು ಎದ್ದು ನಿಂತವು. ಮೂಗಿನ ಹೊಳ್ಳೆಗಳು ಬಾಯಗಲವಾದವು ಒಂದು ಬಾರಿ ತನ್ನ ಇಡೀ ದೇಹವನ್ನು ಕೊಡವಿಕೊಂಡು. ತನ್ನ

ಮುಂದಿದ್ದ ಕುರ್ಚಿಯನ್ನೆತ್ತಿ ಗುರಾಣಿಯಂತೆ ಮರೆಮಾಡಿಕೊಂಡು ಮುನ್ನುಗ್ಗಿ ಚಂದ್ರಮುಖಿಯ ಕೈಯಿಂದ ಕತ್ತಿಯನ್ನು ಮಿಂಚಿನ ವೇಗದಿಂದ ಕಸಿದುಕೊಂಡ.

"ಷಹಭಾಸ್" ಅಂದರು H M D C. ಹಂಸರಾಜ್.

"ನೀನ್ಯಾರು ನಿನಗೇನಾಗಿದೆ ನಿನ್ನ ಹೆಸರೇನು" ಅಂತ ಕೇಳಿದ ಏಕಾಂಬರ.

"ಕ್ಷಮಿಸಿ ಉಜ್ವಲಕುಮಾರ್. ನಾನು ಚಂದ್ರಮುಖಿ" ಅಂತ ಅಳುಕ್ಕೆ ಶುರು ಮಾಡಿದಳು.

"ನಿನ್ನ ಈ ಹುಚ್ಚಿಗೆ ಕಾರಣವೇನು?"

"ಕಾರಣ ಏನು ಹೇಳಲಿ ? ನಾನು ಸರಿಯಾಗಿ ಊಟಮಾಡಿ ಒಂದುವಾರ ವಾಯ್ತು ಬೆಳಿಗ್ಗೆ ಮಧ್ಯಾಹ್ನ, ಸಂಜೆ ರಾತ್ರಿ–ಕೇವಲ ಒಂದು ಮುಷ್ಟಿ ಅವಲಕ್ಕಿ. ಒಂದು ಚಟಾಕು ಸಪ್ಪೆ ಹಾಲು, ಈ ಪಥ್ಯದಲ್ಲಿದ್ದೆ. ಇವತ್ತು ಶೂರ್ಪನಖಿಯ ಶಯ್ಯಾಗೃಹದ ಸೀನಿಗೆ ತಂದಿರಿಸಿದ್ದ ಹೋಟೆಲು ತಿಂಡಿಗಳನ್ನು ನೋಡಿ, ನನ್ನ ತಲೆಯಲ್ಲಿ ಏನೋ ಭಯಂಕರವಾಗಿಹೋಯ್ತು. ಆಮೇಲೆ ಏನಾಯ್ತು ಅಂತ ನಂಗೊತ್ತಿಲ್ಲ."

ಏಕಾಂಬರ ಶಾಂತನಾದ. ಚಂದ್ರಮುಖಿ ತನಗೊಬ್ಬ ಸಹಚಾರಿ ಅಂದುಕೊಂಡು ಕನಿಕರಪಟ್ಟ. ನಿಜ ಆಕೆಗೆ ತನಗಿಂತಲೂ ಅವಲಕ್ಕಿಯೊಂದು ಹೆಚ್ಚಾಗಿತ್ತು. ಆದರೂ ತನ್ನಂತೆಯೇ ಈಕೆ ನೊಂದ ಜೀವಿ.

"ಚಂದ್ರಮುಖಿ, ಅರ್ಥವಾಯ್ತು. ನಾನೂ ನೀನೂ ಈ ಜೀವನದಲ್ಲಿ ಒಂದೇ ವಿಧವಾದ ಶಾಪಕ್ಕೆ ಗುರಿಯಾಗಿದ್ದೇವೆ" ಅಂದ.

ಅಷ್ಟೇ ಅಲ್ಲ. ತನ್ನ ದೇಹಸ್ಥಿತಿ, ಅದರ ಸಂಕಟ ಎಲ್ಲಾ ಚಂದ್ರಮುಖಿಗೆ ಹೇಳಿದ. ಆಕೆಯೂ ತನ್ನ ದೇಹಸ್ಥಿತಿ, ಅದರ ಸಂಕಟ, ಪಥ್ಯ. ಅದರ ಸಂಕಟ ಎಲ್ಲಾ ಏಕಾಂಬರ ನಿಗೆ ಹೇಳಿದಳು.

ವಾತಾವರಣವು ಶಾಂತವಾದ ಮೇಲೆ ಹಂಸರಾಜ್ ಕೆಳಗಿಳಿದು ಬಂದರು. ಅವರ ಮುಖದಲ್ಲಿ ಕರುಣಾರಸ ಉಕ್ಕುತ್ತಿತ್ತು.

"ಮಕ್ಕಳೇ ಹೆದರಬೇಡಿ. ನಮ್ಮಿಬ್ಬರಿಗೂ ಈ ಪಥ್ಯಗಳನ್ನು ವಿಧಿಸಿದ ವೈದ್ಯರಿಬ್ಬರೂ ಸಮಾಜ ದ್ರೋಹಿಗಳು, ಅಜ್ಞಾನಿಗಳು. ಆಡುಗೂಲಜ್ಜಿ ಕಾಲದವರು. ಈಗಿನ ಚಿಕಿತ್ಸಾ ವಿಧಾನದಲ್ಲಿ ಪಥ್ಯವೇ ಇಲ್ಲ. ನಿಮಗೆ ಇಷ್ಟವಾದ ಆಹಾರದಲ್ಲೇ ನಿಮ್ಮ ಚಿಕಿತ್ಸೆ ಮಾಡಿಸುತ್ತೇನೆ" ಅಂತ ಧೈರ್ಯ ಹೇಳಿದ.

ತಾನು ತಿನ್ನುತ್ತಿದ್ದ ಮುಚ್ಚೋರೆಯನ್ನು ಅವರಿಬ್ಬರಿಗೂ ಹಂಚಿ, ಅವರ ಪಥ್ಯದ ಮುಕ್ತಾಯ ಮಾಡಿದ.

"ಆದ್ದರಿಂದಲೇ ನಾನು ಹೇಳಿದ್ದು ಮಲ್ಹಾರಿರಾಯರು ಹೇಳಿದರು" ಈ ಪಥ್ಯದ ವಿಷಯ ಅನುಭವಿಸಿದವರಿಗೆ ಮಾತ್ರ ಗೊತ್ತ ಅಂತ.

ನಾವೆಲ್ಲರೂ ಒಪ್ಪಿಗೆಯ ತಲೆ ಅಲ್ಲಾಡಿಸಿದೆವು.

■

## "ಕಸವೇ ರಸ"

ನಾ. ಕಸ್ತೂರಿ

"ಇವತ್ತಿನ ಪತ್ರಿಕೆಯಲ್ಲಿ ಏನು ವಿಶೇಷ?" ಎಂದು ನಾನು ಕೇಳಿದ್ದಕ್ಕೆ ಅವರು, "ಏನೂ ವಿಶೇಷ ಇಲ್ಲ" ಎನ್ನುತ್ತ ಹಾಳೆಗಳನ್ನು ಮಡಚಿ ಕಸದ ಬುಟ್ಟಿಯೊಳಕ್ಕೆಸೆದರು. ಅಂದರೆ, ಅವರ ಅರ್ಥ...ವಿಮಾನ ಅಪಘಾತಗಳು ಯಾವುದೂ ನಡೆದಿಲ್ಲ. ಅಧಿಕಾರಿಗಳೊಬ್ಬರನ್ನೂ ಯಾರೂ ಖೂನಿ ಮಾಡಲಿಲ್ಲ, ಸಿನಿಮ ಮಂದಿರಗಳಿಗೆ ಯಾವುದಕ್ಕೂ ಬೆಂಕಿ ಬೀಳಲಿಲ್ಲ, ಹಡಗೊಂದೂ ಮುಳುಗಿಲ್ಲ; ಕನ್ಯಾಪಹರಣವೊಂದೂ ವರದಿಯಾಗಿಲ್ಲ, ಭಾರಿ ದರೋಡೆಗಳು ಎಲ್ಲೂ ಜರುಗಿಲ್ಲ, ಎಂದು.


ಅವರ ಸ್ವಭಾವವೇ ಹಾಗೆ. ಎಲ್ಲೆಡೆಯಲ್ಲೂ ಎಲ್ಲರೂ ಸ್ವಸ್ಥ ಮಾನಸರಾಗಿ ನೆಮ್ಮದಿಯಿಂದಿದ್ದಾರೆ, ಅಂದರೆ, ಅವರಿಗೆ ರುಚಿಸದು. ಥತ್, ಇದೆಂಥ ಪತ್ರಿಕೆ? ಇದರಲ್ಲಿ ಸಮಾಚಾರವೊಂದನ್ನೂ ಸರಿಯಾಗಿ ವರದಿ ಮಾಡುವುದಿಲ್ಲ. ಟ್ರೂಮನ್-ಆಟ್ಲಿ ಭೇಟಿ ಜಯಪ್ರದವಾಗಿ ಕೊನೆಗಂಡಿತು ಎಂದು ಬರೆದಿದಾನೆ; ಈದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸಲಾಯಿತು, ಎನ್ನುತ್ತಾನೆ..... ಇನ್ನು ಯಾವುದಾದರೂ, ಬೇರೆ ಪೇಪರು ತರಿಸಬೇಕು," ಎಂದು ಗೊಣಗುತ್ತಾರೆ.

ಅವರ ಸ್ವಭಾವ, ಏಕೆ ಸಾಮಾನ್ಯವಾಗಿ ನಮ್ಮೆಲ್ಲರ ಮನವೂ ಕೂಡ, ಹೀಗೆಯೇ ಓಡುತ್ತದೆ. ಪ್ರಪಂಚ ನೆಟ್ಟಗಿದೆ ಅಂದರೆ ನಮ್ಮ ಸುಖ ಸೊಟ್ಟಗೆ. ನಮಗೆ, ಕಷ್ಟವೇ ಇಷ್ಟ ಪರರದ್ದಾದರೆ; ಇನ್ನೊಬ್ಬನ ಹಸಿವೇ ನಮ್ಮ ಹಸಿವಿಗೆ ಮದ್ದು; ಅವನ ಕಣ್ಣು ಕುರುಡಾದರೆ, ನಮ್ಮ ದೃಷ್ಟಿ ಚುರುಕು, ನಮ್ಮ ಕಣ್ಣಿಗೆ ಬೆಳಕು; ಅವನ ಮನೆ ಉರಿದರೆ ನಮ್ಮ ಮನ ತಂಪು. ನಮ್ಮ ಮಗುವಿಗೆ ಜ್ವರ ಬಂದು ನಾವು ಅದನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ, ಡಾಕ್ಟರು, "ಈಗ ಊರಲ್ಲೆಲ್ಲ ಇದೇ ಜ್ವರ ಮಕ್ಕಳಿಗೆ ಬರುತ್ತಿದೆ. ಬೆಳಗಿಂದ ಹದಿನಾರು ಮಕ್ಕಳನ್ನು ಇದೇ ಖಾಯಿಲೆಗಾಗಿ ಇಲ್ಲಿಗೆ ತಂದಿದ್ದರು," ಎಂದರೆ ನಮ್ಮ ಹೃದಯ ಹಗುರ! ನಿಜಕ್ಕೂ ನಾವು ಕಟುಕರು. ಪಾಪ ನಮ್ಮ ಮಗು ನರಳುತ್ತಿರುವಂತೆಯೇ ಹತ್ತಾರು ಹಸುಳೆಗಳು ಇದೇ ಊರಲ್ಲಿ ಮುಲುಗುತ್ತಿವೆಯಲ್ಲ, ಎಂದು ನಾವು ನಿಟ್ಟುಸಿರು ಬಿಡುವುದಿಲ್ಲ.

ಖೂನಿ ಸುದ್ದಿ ಎಂದರೆ ಅನೇಕರಿಗೆ ಪರಮಾನ್ನ. ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಅವರು ಹಾಲನೀಂಟುವ ಎಳೆಗರುವಿನಂತೆ ಬಾಲವಾಡಿಸುತ್ತ ಓದುತ್ತಾರೆ. ಅದು ಕನಕ ಮೂಲವೋ, ಕಾಮಿನಿ ಮೂಲವೋ, ಎಂದು ಕಾತುರತೆಯಿಂದ ಕೇಳುತ್ತಾರೆ. ಕಾಮಿನಿ ಮೂಲದ್ದಾದರೆ, ಪರಮಾನ್ನಕ್ಕೆ ಪಾಯಸ ಬೆರೆಸಿದಂತೆ. ವಿಮಾನ ಕೆಳಕ್ಕೆ ಬಿತ್ತೆಂದರೆ, ಅವರಿಗೆ ಅದರಲ್ಲಿದ್ದವರೆಲ್ಲ ಸತ್ತರೇನೇ ತೃಪ್ತಿ. ಅದನ್ನು ಪತ್ತೆ ಹಚ್ಚಲು ಇತರ ವಿಮಾನಗಳೂ ಪೋಲೀಸ್ ದಳಗಳೂ ಹೊರಟರೆಂದರೆ, ಅವರೂ ಅವರನ್ನು ಪೇಪರೋದುತ್ತ ಹಿಂಬಾಲಿಸುವರು; ಅದನ್ನು ಕಂಡುಹಿಡಿದು ಅರೆಜೀವದವರನ್ನು ಉಳಿಸುವ ಆಸೆಯಿಂದಲ್ಲ, ಅದೆಲ್ಲೂ ಸಿಗಲಿಲ್ಲ, ಅರೆಜೀವದವರೂ ಕೂಡ ಅನ್ನ ನೀರಿಲ್ಲದೆ ಮಳೆ ಮಂಜಿಗೆ ಕೊರಗಿ ಹರಹರ ಎಂದರು, ಎಂದು ನಿಶ್ಚಯ ಮಾಡಿ ಕೊಳ್ಳುವುದಕ್ಕೆ. ಪತ್ರಿಕೆಗಳಲ್ಲಿ ಖೂನಿ ಸುದ್ದಿಗಳು ವಿರಳವಾದಾಗಲೆಲ್ಲ, ಅವರು ಪತ್ತೆದಾರಿ ನಾವಲುಗಳನ್ನು ಓದಿ, ಪರೋಕ್ಷವಾಗಿ ಪರಮಾನಂದ ಪಡೆಯುತ್ತಾರೆ ಮೊದಲನೆಯ ಪುಟದಲ್ಲೇ ಅವರಿಗೆ ಒಂದು ಖೂನಿಯಾಗಿ ಬಿಡಬೇಕು, ಅನಂತರ ಅವರು ಆ ಹೆಣದ ಹಿಂದೆಯೇ 600 ಪುಟಗಳು ಅಲೆದು, ಕಡೆಗೆ

ಆಪಾದಿತನ ಗಲ್ಲು ಮಹೋತ್ಸವವನ್ನೂ ನೆರವೇರಿಸಿ ಕೃತಕೃತ್ಯರಾಗುತ್ತಾರೆ. ಗಲ್ಲೆದೆ, ಅವರದು.

ಮಳೆ ಬೆಳೆ ಚೆನ್ನಾಗಿದೆ, ಶಿಶುಗಳೂ ಪಶುಗಳೂ ಆರೋಗ್ಯವಾಗಿವೆ, ಶಾಲೆಗಳಲ್ಲಿ ಪಾಠ ಪ್ರವಚನಗಳು ಸಾರೋದ್ಧಾರವಾಗಿ ನಡೆಯುತ್ತಿವೆ,ಅತ್ತೆ ಸೊಸೆಯರು ಅನ್ಯೋನ್ಯವಾಗಿದಾರೆ, ಕೂಲಿಗಾರರೂ ಯಜಮಾನರೂ ಅಣ್ಣ ತಮ್ಮಂದಿರ ಹಾಗಿದಾರೆ, ಎಂಬ ಸುದ್ದಿಯನ್ನು ಪ್ರಕಟಿಸುವ ಪತ್ರಿಕೆಗಳೊಂದೂ ಉಳಿಯುವಂತಿಲ್ಲ. ದೇಶನಾಯಕರನ್ನು ಎಲ್ಲರೂ ಹಿಂಬಾಲಿಸುತ್ತಿದಾರೆ, ಹಣ ಕಾಸಿನ ವ್ಯವಸ್ಥೆ ಸಮತೂಕ ವಾಗಿದೆ. ಕೋಮು ಕೋಮಿಗೂ ಗಳಸ್ಯ ಕಂಠಸ್ಯ ನೆಲೆಗೊಂಡಿದೆ, ಎಂದು ಯಾವ ಪತ್ರಿಕೆಯೂ ಕೂಡ ಪ್ರಕಟಿಸುವಂತಿಲ್ಲ. ಏಕೆಂದರೆ, ಅವುಗಳನ್ನು ಓದುವುದರಿಂದ, ಯಾರ ನಾಲಗೆಗೂ ಖಾರ ಹತ್ತುವುದಿಲ್ಲ. ಸಾವಿರ ಖರ್ಚಾಗುತ್ತಿದ್ದ ಪತ್ರಿಕೆ ನೂರ ಕ್ಕಿಳಿಯುತ್ತದೆ. ಜಾಹೀರಾತುದಾರರು ಆ ಪತ್ರಿಕೆಯನ್ನು ಕೈಬಿಡುತ್ತಾರೆ. ಕೊನೆಗೆ, ಅಚ್ಚು ಕೂಟ ಮಾರಿ, ಊರಿಂದ ಪರಾರಿಯಾಗುವುದೇ ಜಗಶ್ಯಾಂತಿಯಿಂದ ಆತನಿಗಾಗುವ ಪ್ರತಿಫಲ.




ಆದ್ದರಿಂದ, ಪತ್ರಿಕಾಸಂಪಾದಕರು ಅನಾಹುತಗಳನ್ನೇ ಸಂಪಾದಿಸುತ್ತಾರೆ. ಪೋಲೀಸರನ್ನನುಸರಿಸಿ, ಬೈಸಕಲ್ಲು ಕಳವು, ಖೋಟಾನಾಣ್ಯ ತಯಾರಿಕೆ, ಕಳ್ಳ ಭಟ್ಟಿ ಕಾರ್ಖಾನೆ, ಕನ್ನಪ್ರಕರಣ ಇತ್ಯಾದಿಗಳನ್ನಾದರೂ ತಂದು ತುಂಬುತ್ತಾರೆ.

ಒಂದು ವೇಳೆ, ಸ್ಥಳೀಯ ಪೋಲೀಸರು ರಸಭರಿತವಾದ ಸುದ್ದಿಯನ್ನೊದಗಿಸದಿದ್ದರೆ, ದೂರ ದೇಶಗಳಿಂದ ಅಂಥವುಗಳನ್ನು ಆಮದು ಮಾಡುತ್ತಾರೆ. ಹಾಲಿವುಡ್ಡಲ್ಲಿ ಒಬ್ಬಳು ಪ್ರಸಿದ್ಧ ತಾರೆ ತನ್ನ ಹನ್ನೊಂದನೆಯ ಗಂಡನನ್ನು ತೊರೆದು, ಮತ್ತೊಬ್ಬನ ಹದಿಮೂರನೆಯ ಸತಿಯಾದಳು; ಪಾಲಿನೇಸಿಯಾದಲ್ಲಿ ಒಬ್ಬ ಕಿರಾತಿ ಅವುಳಿಜವುಳಿ ಝವುಳಿಗಳನ್ನು ಹೆತ್ತು ಮೂರು ಮಕ್ಕಳನ್ನೂ ತಿಂದಳು, ವೆಸೂವಿಯಸ್ಸ ಪರ್ವತ ಇದ್ದಕ್ಕಿದ್ದಂತೆ ಬೆಂಕಿ ಕಾರಿ ಹತ್ತೆಕ್ರೆ ದ್ರಾಕ್ಷೇದ್ಯಾನವನ್ನು ಬೂದಿಯಾಗಿಸಿತು ಎಂದು ಅಚ್ಚುಹಾಕಿ ನಮ್ಮ ಮೆಚ್ಚುಗೆಯನ್ನು ಪಡೆಯುವರು ಎಂಟು ಹತ್ತು ವರ್ಷಗಳ ಹಿಂದಣ ಸುದ್ದಿಯಾದರೂ ಚಿಂತೆ ಇಲ್ಲ, ನಿನ್ನೆ ಮೊನ್ನೆ ನಡೆದಂತೆ ಬಣ್ಣ ಕಟ್ಟಿ ಬೆಳಗಿಸಿ ಬೆರಗುಗೊಳಿಸುವರು.

ಕೋಟ್ಯಾಧೀಶ್ವರರಾದ ಹಲವು ಪತ್ರಿಕಾಲಯ ಮಾಲೀಕರು ಹಲ ಕೆಲವು ರೈಲು ಅನಾಹುತಗಳನ್ನೂ, ಆತ್ಮಹತ್ಯೆಗಳನ್ನೂ, ಕನ್ಯಾಪಹರಣಗಳನ್ನೂ, ಹೇಳಿ ಮಾಡಿಸಿದರೂ, ಆಶ್ಚರ್ಯಪಡಬೇಕಾಗಿಲ್ಲ. ವಾಚಕರ ರುಚಿಗೆ ತಕ್ಕಂತೆ ವಾಚ್ಯಗಳನ್ನೊದಗಿಸುವುದು ತಾನೆ, ಪತ್ರಿಕಾಕರ್ತರ ಕರ್ತವ್ಯ? ಕಸವೇ ನಮಗೆ ರಸವಾದರೆ, ಅವರು ಜಗತ್ತಿನ ಕಸವನ್ನೆಲ್ಲ ಗುಡಿಸಿ ತಂದು, ನಮ್ಮ ಹೊಸಲಲ್ಲಿ ಗುಡ್ಡೆಹಾಕುವುದಕ್ಕೂ ಸಿದ್ಧ. ■

# ಗುಡಿಸಿ ಗುಂಡಾಂತರವಾದ ಸಂಪ್ರದಾಯಗಳು

ಕಿರಣ್ ಎಂ

ಪದ್ಮತ್ತೆ ತಂಗಿ ಅನಸೂಯಳ ಮನೆಗೆ ಬಂದು ಬಹಳ ವರ್ಷಗಳಾಗಿದ್ದವು. ಅವತ್ತು ಮಧ್ಯಾಹ್ನ ಪದ್ಮತ್ತೆ ಅನಸೂಯಳ ಹತ್ರ ಬಂದು ಮೊಮ್ಮಗು ಮಲಗಿದೆ. ಎದ್ದರೆ ಅಡಿಗೆ ಮನೇಲಿ ಬಿಸಿ ಅನ್ನ ಇದೆ. ಒಂಚೂರು ಉಪ್ಪು ತುಪ್ಪ ಕಲೆಸಿ ಅನ್ನ ತಿನ್ನಿಸ್ತಿರು ಬಂದ್ ಬಿಡ್ತೀನಿ ಇಲ್ಲೇ ಟೈಲರ್ ಅಂಗಡಿಗೆ ಹೋಗಿ ಬರ್ತೀನಿ ಅಂತ ಹೊರಟರು. ಅನಸೂಯ ಹೀಗೆ ಹೋದ ತಕ್ಷಣನೇ ಹಾಗೆ ಮಗು ಎದ್ದಿತು. ತಕ್ಷಣವೇ ಉಪ್ಪು ತುಪ್ಪ ಹಾಕಿ ಅನ್ನ ಕಲೆಸಿ ಮಗು ಬಾಯಿಗೆ ಇಡೋಕೆ ಹೋದ್ರೆ ಅದು ಬಾಯಿ ಬಿಡಲಿಲ್ಲ. ಅಳೋಕೆ ಷುರು ಮಾಡ್ತು, ಅಯ್ಯೋ ಎರಡು ದಿನದಿಂದ ನನ್ನನ್ನು ನೋಡಿದೆಯಲ್ಲಾ ಇದ್ಯಾಕೆ ಹೀಗೆ ಅಳ್ತಿದೆ ಅಂತ ಪದ್ಮತ್ತೆ ಮಗೂನ ತೊಡೆ ಮೇಲೆ ಹಾಕ್ಕೊಂಡು ಅದರ ಅಂಗೈ ಸವರುತ್ತಾ ಸಾರಿಸಿ, ಗುಡಿಸಿ, ರಂಗೋಲಿ ಇಟ್ಟು, ಎಲೆ ಹಾಕಿ, ಅನ್ನ ಬಡ್ಸಿ, ಪಾಯಸ ಬಡ್ಸಿ, ಅಜ್ಜಿ ಮನೆ ತುಪ್ಪ ಅಲ್ಲಿಂದ ಬಂತು ಇಲ್ಲಿಂದ ಬಂತು ಅಂತ ಕಿಚಕಿಚ ಮಾಡಿ ಮಗೂನ ಬಾಯಿ ಬಿಡಿಸೋಕೆ ನೊಡಿದ್ರೆ ಅದು ಅಳ್ತಿತ್ತೇ ಹೊರತು ಬಾಯಿ ಬಿಟ್ಟು ಒಂದು ತುತ್ತೂ ಅನ್ನ ತಿನ್ನಲಿಲ್ಲ. ಇದೇನಪ್ಪಾ ನನ್ನ ವಯಸ್ಸಿಗೆ ನಾನು ಎಷ್ಟು ಮಕ್ಕಳನ್ನು ಆಡಿಸಿಲ್ಲ, ಊಟ ಮಾಡಿಸಿಲ್ಲ, ಈ ಮಗು ನನಗೆ ದೊಡ್ಡ ಸವಾಲಾಗಿದೆಯಲ್ಲಾ ಅಂದುಕೊಂಡರು. ಅವರಿಗೆ ಮಗು ಊಟ ಮಾಡದೇ ಇದ್ದರೆ ಹೋಗಲಿ ಅಳೋದು ನಿಲ್ಲಿಸಿದ್ರೆ ಸಾಕು ಅಂತ ಏನೇನೆಲ್ಲಾ ಸರ್ಕಸ್ ಮಾಡಿದರು ಮಗು ಅಳು ನಿಲ್ಲಲಿಲ್ಲ. ಪದ್ಮತ್ತೆ ತನಗೆ ಗೊತ್ತಿರುವ ಎಲ್ಲ ಹಾಡುಗಳನ್ನು ಒಂದೊಂದು ಸಾಲು ಹೇಳಿದರು, ಏನೇನೋ ಸದ್ದು ಮಾಡಿದರು, ಮಗು ಮುಂದೆ ಸರ್ಕಸ್ ಮಾಡಿದರು. ಆದರೆ ಮಗು ಅನ್ನದ ತಟ್ಟೆ ಕಡೆ ಕೈ ತೋರಿಸುತ್ತೆ, ಬಾಯಿ ಬಿಡಲ್ಲ, ಅಳೋದು ನಿಲ್ಲಿಸ್ತಿಲ್ಲ. ತಂಗಿ ಏನಂದುಕೊಳ್ತಾಳೊ ಅಂತ ಭಯವೂ ಆಯಿತು. ಹೊರಗಡೆ ಕರ್ಕೊಂಡು ಬಂದ್ರೆ ಇನ್ನಷ್ಟು ಜೋರಾಗಿ ಅತ್ತಾಗ ಮತ್ತೆ ಒಳಗೆ ಕರೆದುಕೊಂಡು ಹೋದರು. ಇದೊಳ್ಳೇ ತಾಪತ್ರಯ ಆಯ್ತಲ್ಲ ಅಂತ ಏನೇನೋ ಉಪಾಯಗಳನ್ನು ಮಾಡಿದರೂ ಅದು ಸುಮ್ಮನಾಗಲಿಲ್ಲ. ದೇವರು ದೊಡ್ಡವನು ಎನ್ನುವಂತೆ ಅನಸೂಯ ಬಂದಳು. ಅನು ಇಲ್ನೋಡೆ ನೀನು ಆ ಕಡೆ ಹೋದ ತಕ್ಷಣ ಮಗು ಈ ಕಡೆ ಎದ್ದಿತು. ಊಟ ಮಾಡಿಸೋಕೆ ಹೋದರೆ ಬಾಯೇ ಬಿಡ್ತಿಲ್ಲ. ಸುಮ್ನೆ ಅಳ್ತಿದೆ. ನಾನು ಸಾರಿಸಿ, ಗುಡಿಸಿ ಮಾಡ್ದೆ, ಹಾಡು ಹೇಳ್ದೆ, ಮಗು ಮುಂದೆ ಸರ್ಕಸ್ ಮಾಡ್ದೆ ಏನು ಮಾಡಿದರೂ ಮಗು ಬಾಯಿ ಬಿಡ್ತಿಲ್ಲ, ಅಳು ನಿಲ್ಲಿಸ್ತಿಲ್ಲ ಅಂದು ಮಗೂನ ತಂಗಿಗೆ ಕೊಡೋಕೆ ಹೋದಳು. ಅನಸೂಯ ಏನೂ ಬೇಡ ನೀನೇ ಎತ್ಕೊಂಡು ಮಗುಗೆ ಊಟ ಮಾಡಿಸು ಎಂದು ಟಿವಿ ಸ್ಟಾಂಡ್ ಮೇಲಿದ್ದ ಮೊಬೈಲ್ ಮಗು ಕೈಗೆ ಕೊಟ್ಟಳು. ಮಗು ತಕ್ಷಣನೇ ಅಳು ನಿಲ್ಲಿಸಿದ್ದೂ ಅಲ್ಲದೇ ಪದ್ಮತ್ತೆ ಕಡೆ ನೋಡಿ ಅಯ್ಯೋ ಗುಗ್ಗು ನಿನಗೆ ಅಷ್ಟು ಗೊತ್ತಾಗಲಿಲ್ಲವಾ, ನನ್ನನ್ನು ಸುಮ್ಮನೆ ಅಳಿಸಿದೆಯಲ್ಲಾ ಅಂತ ನಕ್ಕಿತು. ಪದ್ಮತ್ತೆ ಗಾಬರಿಯಾದರು. ಇದೇನೇ ಮೊಬೈಲ್ ಕೊಟ್ ತಕ್ಷಣ ಅಳು ನಿಲ್ಲಿಸ್ತು. ಪರವಾಗಿಲ್ಲ. ಮೊಬೈಲ್ ಕೊಟ್ಟರೆ ಸಾಕು ಆನ್ ಮಾಡಬೇಕಾಗಿಲ್ವಲ್ಲ ಅಂದಳು. ಅದಕ್ಕೆ ಅನಸೂಯ, ಮೊಬೈಲ್ ಅದರ ಕೈಗೆ ಕೊಟ್ರೆ ಸಾಕು ಅದೇ ಆನ್ ಮಾಡ್ಕೊಂಡು, ಯು ಟ್ಯೂಬ್ ಹಾಕ್ಕೊಂಡು ಕಾರ್ಟೂನ್ ನೊಡುತ್ತೆ ನೀನು ಊಟ ಮಾಡಿಸು ಅಂತಿದ್ದ ಹಾಗೆ ಮಗು ಆಗಲೇ ಮೊಬೈಲಲ್ಲಿ ಕಾರ್ಟೂನ್ ನೋಡ್ತಾ ಪದ್ಮತ್ತೆಗೆ ಒಂದ್ಸಾರಿ ತನ್ನ ಪುಟ್ಟ ಕಾಲುಗಳಿಂದ ಒದ್ದು ಬಾಯಿ ಬಿಟ್ಟಿತು, ಊಟ ಮಾಡಿಸು ಅಂತ. ಪದ್ಮತ್ತೆ ಮಗು ಬಾಯಿಗೆ ಉಪ್ಪು ತುಪ್ಪ ಕಲಸಿದ ಅನ್ನ ಬಾಯಿಗಿಡುತ್ತಾ ಮೊಬೈಲ್ ನೋಡ್ಕೊಂಡು ಇನ್ನು ಇದರ ಮುಂದೆ ನಮ್ಮಂಥ ಮುದಿಗೊಡ್ಡುಗಳಿಗೆ ಏನು ಕೆಲಸ ಅಂದುಕೊಂಡರು. ■